ಸಜ್ಜನರ ಸಂಗಾತಿ
www.sanmarga.com
ಸನ್ಮಾರ್ಗ ವಾರಪತ್ರಿಕೆ
ಸಂಪುಟ: 33
ಸಂಚಿಕೆ: 03
ಬೆಲೆ ರೂ. 8.00
ಮಂಗಳೂರು
2010 ಎಪ್ರಿಲ್ 04 – 10
1431 ರಬೀಉಲ್ ಆಖರ್ 17 – 23

www.world@no.1 iso burkha shop.com
PARADISE® Crafting the Ancient Tradition...
Burkha House
Estd. in 1992
Kunil Centre, Shop No. 124, Hampankatta,
Mangalore - 1 Ph: +91 824 2441742(S), 2445540(F)
Fax: +91 824 4277887
E-mail: burkhaparadise@yahoo.com
Web: www.paradiseburkhahouse.com
Manufacturers & Exporters of: World Class BURKHA, HIJAB, SHAWLS & SCARF

# ಪ್ರಧಾನಿಯವರೇ, ವೇದಿಕೆಯಿಂದ ಘರ್ಜಿಸುವುದೆಷ್ಟು ಸುಲಭ ಅಲ್ಲವೇ?




**ಎಮ್.ಸಿ.ಎ. ನಾಸರ್**

**ವಿ**ಶೇಷ ತನಿಖಾ ತಂಡವು (ಸಿಟ್) ಗಾಂಧಿನಗರದಲ್ಲಿ ನರೇಂದ್ರ ಮೋದಿಯವರನ್ನು ಪ್ರಶ್ನಿಸುತ್ತಿದ್ದ ಸಂದರ್ಭದಲ್ಲೇ, ದೆಹಲಿಯಲ್ಲಿ 'ನ್ಯಾಯ ಮತ್ತು ಜನಸಾಮಾನ್ಯರು' ಎಂಬ ರಾಷ್ಟ್ರೀಯ ಸೆಮಿನಾರ್ ಜರಗಿತು. ಮುಖ್ಯ ಭಾಷಣಕಾರರಾಗಿದ್ದ ಪ್ರಧಾನಿ ಸಿಂಗ್‌ರವರು ಸೋನಿಯಾ ಗಾಂಧಿಯ ಉಪಸ್ಥಿತಿಯಲ್ಲಿ ಹೀಗೆ ಸಾರಿದರು, 'ಸಮಾಜದ ಬಡ ದುರ್ಬಲರ ವಿಷಯದಲ್ಲಿ ನ್ಯಾಯ ಪೀಠಗಳು ಬಹಳ ಎಚ್ಚರ ಮತ್ತು ಆಸಕ್ತಿ ವಹಿಸಬೇಕು. ಅನ್ಯಾಯ ಮತ್ತು ಶೋಷಣೆಯ ವಿರುದ್ಧ ಸಾರ್ವಜನಿಕ ಪ್ರಜ್ಞೆಯನ್ನು ಜಾಗೃತಗೊಳಿಸಲು ನಾವು ಸಕ್ರಿಯರಾಗಬೇಕು.'

ಸಭೆಯಲ್ಲಿದ್ದ ನ್ಯಾಯಾಧೀಶರು ಮತ್ತು ನ್ಯಾಯವಾದಿಗಳು ಆವೇಶದಿಂದ ಚಪ್ಪಾಳೆ ತಟ್ಟಿದರು. ಭಾಷಣದ ಕೊನೆಯಲ್ಲಿ ಪ್ರಧಾನಿಯವರು, ಕಾನೂನು ಮತ್ತು ನ್ಯಾಯವು ಜನಸಾಮಾನ್ಯರ ಮನೆ ಬಾಗಿಲಿಗೆ ಬರುವ ಕಾಲ ದೂರವಿಲ್ಲವೆಂದೂ ಹೇಳಿದರು.

ಇನ್ನು ಪ್ರತ್ಯಕ್ಷವಾಗಿ ನ್ಯಾಯವು ಹೇಗೆ ಜಾರಿಯಾಗುತ್ತಿದೆಯೆಂಬ ಕುರಿತು ಕೆಲವು ಫ್ಲಾಷ್ ಬ್ಯಾಕ್‌ಗಳು:

**1. ಗುಜರಾತ್ ಗಲಭೆ: 2002ರಲ್ಲಿ ನಡೆದ ಘಟನೆ.**

ಈಗ ಎಂಟು ವರ್ಷ ಸಂದಿದೆ. ಹತರಾದ 2000 ಮಂದಿಯ ವಿಷಯ ಹಾಗಿರಲಿ, ಅಹ್ಮದಾಬಾದ್‌ನ ಗುಲ್ಬರ್ಗ ಹೌಸಿಂಗ್ ಸೊಸೈಟಿಯಲ್ಲಿ ಮಾಜಿ ಕಾಂಗ್ರೆಸ್ ಎಂ.ಪಿ. ಇಹ್ಸಾನ್ ಜಾಫ್ರಿ ಸೇರಿದಂತೆ, 69 ಮಂದಿಯನ್ನು ಸುಟ್ಟುಕೊಂದ ದಾವೆಯ ತನಿಖೆಯು ಎಲ್ಲಿಗಾದರೂ ತಲುಪಿದೆಯೇ? ಇದೀಗ ಪ್ರಥಮವಾಗಿ ಓರ್ವ ಮುಖ್ಯಮಂತ್ರಿಯನ್ನು ಸಾಮೂಹಿಕ ಹತ್ಯೆಗಾಗಿ ಗಂಟೆಗಳ ಕಾಲ ಪ್ರಶ್ನಿಸಲಾಯಿತೆಂಬುದಷ್ಟೇ ಪ್ರಧಾನ ವಾರ್ತೆಯಾಗಿದೆ. ಇದು ಕೇವಲ ಸಾಕ್ಷ್ಯ ಸಂಗ್ರಹಕ್ಕೆ ಸೀಮಿತವಾದೀತು. ಯಾಕೆಂದರೆ, ಮೋದಿಯವರ ವಿರುದ್ಧ ಎಫ್.ಐ.ಆರ್. ಅಥವಾ ಯಾವುದೇ ದಾವೆಗಳಿಲ್ಲ. ಕಣ್ಣ ಮುಂದೆಯೇ **(ಕೊನೆಯ ಪುಟಕ್ಕೆ)**

# ಮೀಸಲಾತಿ ವಿರೋಧಿಗಳಿಗೆ ಕೋರ್ಟಿನ ಚಾಟಿಯೇಟು

**ಅರಫಾ ಮಂಚಿ**

ನಿಜವಾಗಿ ಸಮುದಾಯವೊಂದಕ್ಕೆ ನೀಡಲಾದ ಮೀಸಲಾತಿಯನ್ನು ನಿರಾಕರಿಸಲೇಬೇಕೆಂದು ಕೋರ್ಟನ್ನು ಸಂಪರ್ಕಿಸುವುದೇ ಒಂದು ಪೂರ್ವಗ್ರಹ ಪೀಡಿತ ವಿಚಾರ. ಮುಸ್ಲಿಮರಿಗೆ ಆಂದ್ರ ಪ್ರದೇಶ ಸರಕಾರ ಶೇ 4ರಷ್ಟು ಮೀಸಲಾತಿ ನೀಡಿರುವುದನ್ನು ವಿರೋಧಿಸುತ್ತಿರುವ ವರ್ಗವನ್ನು ಈ ಅರ್ಥದಲ್ಲಿ ತಿರಸ್ಕರಿಸಬೇಕಾಗಿದೆ. ಅಧ್ಯಯನವೊಂದರ ಪ್ರಕಾರ ಮುಸ್ಲಿಮರಲ್ಲಿ ಶೇ. 31, ದಲಿತರಲ್ಲಿ ಶೇ. 32 ಮತ್ತು ಆದಿವಾಸಿಗಳಲ್ಲಿ ಶೇ. 50ರಷ್ಟು ಮಂದಿ ಹೀನಾಯ ಬಡತನಕ್ಕೆ ಬಲಿಯಾಗಿದ್ದಾರೆ. ದಲಿತರಿಗೆ, ಆದಿವಾಸಿಗಳಿಗೆ ಮೀಸಲಾತಿ ಕಲ್ಪಿಸಲಾಗಿದ್ದು, ಸುಮಾರಾಗಿ ಅಂತಹದ್ದೇ ಸ್ಥಿತಿ ಅನುಭವಿಸುತ್ತಿರುವ ಮುಸ್ಲಿಮರಿಗೆ ಮೀಸಲಾತಿ ನೀಡಬಾರದೆನ್ನುವ ವಾದ ಅದೆಷ್ಟು ಹೇಯವಾದದ್ದು?

ಆಂಧ್ರ ಸರಕಾರವು ಮುಸ್ಲಿಮರಿಗೆ ಶೈಕ್ಷಣಿಕ ಮತ್ತು ಉದ್ಯೋಗ ಕ್ಷೇತ್ರದಲ್ಲಿ ನೀಡಿದ್ದ ಶೇ. 4 ಮೀಸಲಾತಿಯನ್ನು ರದ್ದುಪಡಿಸಿದ ಆಂಧ್ರ ಹೈಕೋರ್ಟಿನ ತೀರ್ಪನ್ನು ಸುಪ್ರೀಮ್ ಕೋರ್ಟು ರದ್ದುಪಡಿಸಿದೆಯಲ್ಲದೆ ಮೀಸಲಾತಿಯೊಂದಿಗೆ ಮುಂದುವರಿಯುವಂತೆ ಆಂಧ್ರ ಸರಕಾರಕ್ಕೆ ಸೂಚಿಸಿರುವುದು ಈ ನಿಟ್ಟಿನಲ್ಲಿ ಮೈಲುಗಲ್ಲಾಗಿದೆ. ಮುಸ್ಲಿಮ್ ಮೀಸಲಾತಿಯನ್ನು ವಿರೋಧಿಸಿದವರಲ್ಲಿ ಬಲಪಂಥೀಯ ಶಕ್ತಿಗಳ ಕೈ ಮೇಲಾಗಿತ್ತು. ಬಿ.ಜೆ.ಪಿ.ಯಂತೂ ಮುಸ್ಲಿಮರಿಗೆ ಮೀಸಲಾತಿ ವಿಧಿಸಿದರೆ ಮತಾಂತರವಾಗಬಹುದೆಂದು ಹೆದರಿಸಿತ್ತು. ನಿಜವಾಗಿ ಸಮುದಾಯವೊಂದರ ಮೇಲೆ ಅದಕ್ಕಿರುವ ಹಗೆತನ ಈ ನಿಟ್ಟಿನಲ್ಲೂ ಅಪ್ಪಟವಾಗಿ ಅನಾವರಣಗೊಂಡಿದೆ. ಏನಿದ್ದರೂ ಮೀಸಲಾತಿ ವಿರೋಧಿಗಳ ಪರ ಭಾಗವಹಿಸಿದ ಹರೀಶ್ ಸಾಳ್ವೆಯವರ ವಾದವನ್ನು ಸುಪ್ರೀಮ್‌ಕೋರ್ಟ್ ತಳ್ಳಿ ಹಾಕಿ ಸಮುದಾಯವೊಂದರ ಮೇಲೆ ತಲೆತಲಾಂತರಗಳಿಂದ ನಡೆದು ಬರುವ ತಾರತಮ್ಯಕ್ಕೆ ತೆರೆ ಎಳೆಯಲು ನೋಡಿದೆ ಎನ್ನಬಹುದು.

ಒಂದು ಸರಕಾರ ತನ್ನ ಪ್ರಜೆಗಳಲ್ಲಿರುವ ಸಮುದಾಯಕ್ಕೆ ಮೀಸಲಾತಿಯ ಅಗತ್ಯವಿದೆಯೆಂದು ಕಂಡುಕೊಳ್ಳುವಾಗ ಯಾವುದಾದರೂ ಆಧಾರವನ್ನು ಗುರುತಿಸದೆ ತಿಳಿಗೇಡಿಯಾಗುವುದು ಸಾಧ್ಯವಿಲ್ಲ. ಆಂಧ್ರ ಸರಕಾರದ ಹಿಂದುಳಿದ (15ನೇ ಪುಟಕ್ಕೆ)

## ಸುಪ್ರೀಮ್ ಕೋರ್ಟಿನ ತೀರ್ಪು ಸ್ವಾಗತಾರ್ಹ- ಘಟಕಾಧ್ಯಕ್ಷ



**ಮು**ಸ್ಲಿಮರಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿಗೆ ಶೇ. 4ರಷ್ಟು ಮೀಸಲಾತಿ ಒದಗಿಸುವ ಆಂಧ್ರ ಸರಕಾರದ ಕ್ರಮಕ್ಕೆ ಸುಪ್ರೀಮ್ ಕೋರ್ಟು ಮನ್ನಣೆ ನೀಡಿರುವುದನ್ನು ಜಮಾಅತೆ ಇಸ್ಲಾಮಿ ಹಿಂದ್ ಕರ್ನಾಟಕ-ಗೋವಾ ಘಟಕಾಧ್ಯಕ್ಷ ಅಬ್ದುಲ್ಲಾ ಜಾವೇದ್ ಸ್ವಾಗತಿಸಿದ್ದಾರೆ. ಆಂಧ್ರ ಹೈಕೋರ್ಟು ಈ ಮೀಸಲಾತಿಗೆ ತಡೆಯಾಜ್ಞೆ ನೀಡಿರುವುದನ್ನು ಪ್ರಶ್ನಿಸಿ, ಸರಕಾರ ಸುಪ್ರೀಮ್ ಕೋರ್ಟಿನ ಬಾಗಿಲು ತಟ್ಟಿತ್ತು.

ಮುಸ್ಲಿಮರ ಏಳಿಗೆ ಮತ್ತು ಕಲ್ಯಾಣದ ದೃಷ್ಟಿಯಿಂದ ತೀರ್ಪನ್ನು ಮಹತ್ವಪೂರ್ಣವಾದದ್ದೆಂದು ಬಣ್ಣಿಸಿರುವ ಜಾವೇದ್‌ರು, ಇದೇ ರೀತಿ ದೇಶದ ಎಲ್ಲ ಮುಸ್ಲಿಮರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಾಡಲಾದ ರಂಗನಾಥ್ ಮಿಶ್ರಾ ಆಯೋಗದ ಶಿಫಾರಸುಗಳನ್ನು ಕೇಂದ್ರ ಸರಕಾರ ಅನುಷ್ಠಾನಗೊಳಿಸಬೇಕೆಂದು ಒತ್ತಾಯಿಸಿದ್ದಾರೆ. ಜೊತೆಗೆ ಮಹಿಳಾ ಮೀಸಲಾತಿಯ ಕುರಿತಂತೆ ಪ್ರತಿಕ್ರಿಯಿಸಿರುವ ಅವರು, ಮುಸ್ಲಿಮ್ ಮಹಿಳೆಯರಿಗೆ ಒಳಮೀಸಲಾತಿ ಕಲ್ಪಿಸುವುದರಿಂದ ಮಾತ್ರವೇ ಉದ್ದೇಶಿತ ಗುರಿ ಈಡೇರಲು ಸಾಧ್ಯ ಎಂದಿದ್ದಾರೆ.

# ನೈತಿಕತೆಗಿಷ್ಟು ಸರಳ ವ್ಯಾಖ್ಯಾನ ಸಾಧುವೇ ನ್ಯಾಯಮೂರ್ತಿಗಳೇ?



**ಎ.ಕೆ. ಕುಕ್ಕಿಲ**

**"ಪ್ರಾಪ್ತ ವಯಸ್ಕರಿಬ್ಬರು ಕೂಡಿ ಬಾಳಲು (ಲಿವಿಂಗ್ ಟುಗೆದರ್) ತೀರ್ಮಾನಿಸುವುದು ಅಪರಾಧ ಹೇಗಾಗುತ್ತದೆ? ಅದರಲ್ಲಿ ತಪ್ಪೇನಿದೆ? ಅಲ್ಲ, ಪ್ರಾಪ್ತರಿಬ್ಬರು ಮದುವೆಯಾಗದೆಯೇ ಒಟ್ಟಿಗೆ ಬದುಕುವುದು ಮತ್ತು ವಿವಾಹಪೂರ್ವ ಲೈಂಗಿಕ ಸಂಬಂಧ ಹೊಂದುವುದನ್ನು ತಡೆಯುವ ಕಾನೂನು ಇದೆಯಾ? ಇದ್ದರೆ ಅದು ಯಾವ ಕಲಂನಡಿಯಲ್ಲಿದೆ ಎಂದು ಹೇಳುತ್ತೀರಾ?** **(3ನೇ ಪುಟಕ್ಕೆ)**

# 1 CAD COMPANY IN ASIA
CADD CENTRE
UDUPI 0820 - 2522741, 0820 - 2521374
MANGALORE 0824 - 3256070, 0824 - 4285772
INDUSTRY SPECIFIC SPECIALIZED COURSES
• Mechanical CADD • Civil CADD • Architectural CADD • Electrical CADD • Interior Architecture & Design • 3DS Max • Project Planning & Management using Primavera / M.S. Project. ANSYS
L.C.C. Building Opp. M.G.M. College, Kunjibettu, Udupi - 576102
Ist flr, Prime Towers, Opp. Mangalore Nursing Home, Bendoorwell, Mangalore - 3

ಚಂದಾದಾರರಾಗಿರಿ — ಯಶಸ್ವಿಗೊಳಿಸಿರಿ
ಸನ್ಮಾರ್ಗ ವಾರ್ಷಿಕ ಅಭಿಯಾನ
(ದ.ಕ., ಉಡುಪಿ ಮತ್ತು ಕೊಡಗು ಜಿಲ್ಲೆಗಳಲ್ಲಿ)
2010 ಎಪ್ರಿಲ್ 4ರಿಂದ 11
ಚಂದಾದರ
ವಾರ್ಷಿಕ ರೂ. 390.00
ಅರ್ಧ ವಾರ್ಷಿಕ ರೂ. 195.00
ಅಭಿಯಾನದ ವೇಳೆ ವಾರ್ಷಿಕ ಚಂದಾದಾರರಾಗುವವರಿಗೆ
30 ರೂ. ವಿಶೇಷ ರಿಯಾಯಿತಿ!
ವಾರ್ಷಿಕ ರೂ. 360.00

ಪರಮ ದಯಾಮಯ-ಕರುಣಾಳುವಾದ ಅಲ್ಲಾಹನ ನಾಮದಿಂದ

## ಸಂಪಾದಕೀಯ

# ಸತ್ವಂತ್‌ನ ಗುಂಡು, ಸನ್ಯಾಲ್‌ರ ಆತ್ಮಹತ್ಯೆ

ಕಳೆದ ವಾರ ಪ್ರಕಟವಾದ ಹತ್ತು-ಹಲವು ಸುದ್ದಿಗಳಲ್ಲಿ 3 ಸುದ್ದಿಗಳು ತಮ್ಮ ವಿಶೇಷತೆಯಿಂದಾಗಿ ಗಮನ ಸೆಳೆದುವು. 1. ರೈತರ ಹಕ್ಕುಗಳನ್ನು ರಕ್ಷಿಸುವುದಕ್ಕಾಗಿ ಪಶ್ಚಿಮ ಬಂಗಾಳದ ಸಣ್ಣ ಗ್ರಾಮದಲ್ಲಿ ನಕ್ಸಲ್ ಚಳುವಳಿಯನ್ನು ಹುಟ್ಟು ಹಾಕಿದ್ದ ಕಾನು ಸನ್ಯಾಲ್ ಆತ್ಮಹತ್ಯೆ ಮಾಡಿಕೊಂಡರು. 2. ಭಾರತದಲ್ಲಿ ವರ್ಷಂಪ್ರತಿ ಶ್ರೀಮಂತರ ಸಂಖ್ಯೆಯಲ್ಲಿ ಭಾರೀ ಪ್ರಮಾಣದಲ್ಲಿ ಏರಿಕೆಯಾಗುತ್ತಿದ್ದರೂ ಸಮಾಜಕ್ಕೆ ಇವರ ಕೊಡುಗೆ ತೀರಾ ಸಣ್ಣದು ಎಂದು ಸಮೀಕ್ಷೆಯೊಂದು ಅಭಿಪ್ರಾಯಪಟ್ಟಿತು. ಮೂರನೆಯ ಸುದ್ದಿಯೇನೆಂದರೆ, ಇಂದಿರಾ ಗಾಂಧಿಯ ಹಂತಕ ಸತ್ವಂತ್ ಸಿಂಗ್‌ನು, ಆಕೆಯ ದೇಹಕ್ಕೆಷ್ಟು ಗುಂಡುಗಳು ತಾಗಿದ್ದುವು ಎಂಬುದಾಗಿ ತನ್ನಲ್ಲಿ ಪ್ರಶ್ನಿಸಿದ್ದ ಎಂದು ಇಂದಿರಾರ ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರು ಹೇಳಿರುವುದು.

ನಿಜವಾಗಿ ಈ ಮೂರೂ ಸುದ್ದಿಗಳು ಇಂದಿನ ಈ ಕಾಲಘಟ್ಟದಲ್ಲಿ ಬಹಳ ಮಹತ್ವಪೂರ್ಣವಾದವು. ಪತ್ರಿಕೆಗಳ ಮುಖಪುಟದಲ್ಲಿ ಮತ್ತು ಟಿವಿ ಚಾನೆಲ್‌ಗಳ ಬ್ರೇಕಿಂಗ್ ನ್ಯೂಸ್‌ನ ಜಾಗದಲ್ಲಿ ಇವುಗಳಿಗೆ ಸಿಗಬೇಕಾದ ಮನ್ನಣೆ ಸಿಕ್ಕಿಲ್ಲ ಎಂಬ ಕಾರಣಕ್ಕಾಗಿ ಇವುಗಳನ್ನು ನಾವು ಕಡೆಗಣಿಸಬೇಕಿಲ್ಲ. 1967ರಲ್ಲಿ ರೈತರಿಗಾಗಿ ನಕ್ಸಲ್ ಚಳವಳಿಯನ್ನು ಸನ್ಯಾಲ್ ಹುಟ್ಟು ಹಾಕಿದಾಗ ರೈತ ಆತ್ಮಹತ್ಯೆ, ಶೂನ್ಯ ಅನ್ನುವಷ್ಟು ಅಪರೂಪವಾಗಿತ್ತು. ಪಾತ್ರೆ ತುಂಬಾ ಊಟ, ತ್ರೀ ಫೇಸ್ ವಿದ್ಯುತ್, ಮಾನ ಮುಚ್ಚುವಷ್ಟಾದರೂ ಬಟ್ಟೆ ಇಲ್ಲದ ಹೊರತಾಗಿಯೂ ರೈತ ಬದುಕಿದ್ದ. ಜಮೀನ್ದಾರರ ದಬ್ಬಾಳಿಕೆ ಮತ್ತು ವ್ಯವಸ್ಥೆಯ ಅಸಡ್ಡೆಗೆ ಸನ್ಯಾಲ್ ಕುದಿದು ರಂಗಕ್ಕೆ ಧುಮುಕಿದರು. ರೈತರೆಲ್ಲಾ ಸನ್ಯಾಲ್‌ರನ್ನು ಬೆಂಬಲಿಸಿದರು. ದೇಶಾದ್ಯಂತ ಒಂದು ಮಿತಿಯ ವರೆಗೆ ಆ ಪ್ರತಿಭಟನಾ ಶೈಲಿ ಆಕರ್ಷಣೆಯನ್ನು ಪಡೆಯಿತು. ದುರಂತ ಏನೆಂದರೆ, ಆ ಚಳವಳಿಗೆ 43 ವರ್ಷಗಳು ತುಂಬಿದ ಈ ಹೊತ್ತಿನಲ್ಲಿ, ಸನ್ಯಾಲ್ ಆ ರಂಗದಿಂದ ಹೊರಟು ಹೋಗಲು ಆಯ್ದುಕೊಂಡದ್ದು ಆತ್ಮಹತ್ಯೆಯ ದಾರಿಯನ್ನು. ಆತನ ಅನುಕಂಪಕ್ಕೆ ಪಾತ್ರವಾಗಿದ್ದ ರೈತರು ಇವತ್ತು ಯಾವ ಸ್ಥಿತಿಯಲ್ಲಿದ್ದಾರೆಂದರೆ, ಆತ್ಮಹತ್ಯೆಗಳ ಪಟ್ಟಿಯಲ್ಲಿ ಹೆಚ್ಚಿನ ಹೆಸರು ಅವರದ್ದೇ. ಒಂದು ರೀತಿಯಲ್ಲಿ ಸನ್ಯಾಲ್‌ರ ಆತ್ಮಹತ್ಯೆ, ಈ ದೇಶದ ಇಂದಿನ ರೈತರ ಸ್ಥಿತಿ-ಗತಿಗೆ ನೀಡಲಾದ ದಾರುಣ ವ್ಯಾಖ್ಯಾನ ಎಂದೇ ಹೇಳಬಹುದು. ರೈತ ಇವತ್ತು ಒಂದಲ್ಲ ಒಂದು ಕಾರಣದಿಂದ ಪ್ರತಿಭಟನೆ ನಡೆಸುತ್ತಿದ್ದಾನೆ. ಆತನ ಭೂಮಿಯನ್ನು 'ಹೊಟ್ಟೆ ತುಂಬಿದವರು' ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೆ. ಅವರಿಗೆ ವ್ಯವಸ್ಥೆ ಸಕಲ ನೆರವನ್ನೂ ನೀಡುತ್ತಿದೆ. ಗದ್ದೆಯಲ್ಲಿ ಉಳುಮೆ ಮಾಡಬೇಕಾದ ರೈತ ಬಿತ್ತನೆ ಬೀಜಕ್ಕೆ, ರಸಗೊಬ್ಬರಕ್ಕೆ, ಬೆಂಬಲ ಬೆಲೆಗೆ ಆಗ್ರಹಿಸಿ ಬೀದಿಗಿಳಿದಿರುವಾಗ, ನಿಜವಾಗಿ ಸನ್ಯಾಲ್‌ರ ನಕ್ಸಲ್ ಚಳವಳಿ ಅವರಿಗೆ ನೇತೃತ್ವ ನೀಡಬೇಕಿತ್ತು. ಭೂಮಾಲಿಕನ ಸ್ಥಾನದಲ್ಲಿ ವ್ಯವಸ್ಥೆಯೇ ಕೂತಿರುವಾಗ ಅದರ ವಿರುದ್ಧ ಪ್ರಬಲ ಪ್ರತಿಭಟನಾ ಚಳವಳಿಯನ್ನು ದೇಶಾದ್ಯಂತ ಹಮ್ಮಿಕೊಳ್ಳಬೇಕಿತ್ತು. ಆದರೆ ಸನ್ಯಾಲ್‌ರ 'ನಕ್ಸಲರು' ನಾಡು ಬಿಟ್ಟು ಕಾಡು ಸೇರಿಕೊಂಡಿದ್ದಾರೆ. ಹೀಗಿರುವಾಗ, ಸನ್ಯಾಲ್‌ರು ರಂಗಕ್ಕೆ ವಿದಾಯ ಕೋರದೇ ಇನ್ನೇನು ತಾನೇ ಮಾಡಬೇಕಿತ್ತು? ನಿಜವಾಗಿ ಸನ್ಯಾಲ್‌ರ ಪೋಸ್ಟ್ ಮಾರ್ಟಮ್ ವರದಿಯನ್ನು ನಕ್ಸಲೀಯರು ತಮ್ಮ ಪುನರವಲೋಕನಕ್ಕೆ ಒಂದು ನೆಪವಾಗಿ ಬಳಸಿಕೊಳ್ಳಬೇಕು. ದೈವಿಕ ಹಿನ್ನೆಲೆಯಿಲ್ಲದ, ಕ್ಷಣದ ಆವೇಶದಲ್ಲಿ ಸೃಷ್ಟಿಗೊಂಡ ಯಾವುದೇ ಸಿದ್ಧಾಂತ, ಸಾರ್ವಕಾಲಿಕವಾಗಿ ಮನ್ನಣೆ ಪಡೆದುಕೊಳ್ಳುವುದಕ್ಕೆ ಖಂಡಿತ ಸಾಧ್ಯವಿಲ್ಲ. ಮನುಷ್ಯರಿಗಾಗಿ ಹುಟ್ಟಿಕೊಂಡ ಎಷ್ಟೋ ಚಳವಳಿಗಳು, ಸೈದ್ಧಾಂತಿಕ ಎಡಬಿಡಂಗಿತನದಿಂದಾಗಿ ಆ ಬಳಿಕ ಮನುಷ್ಯ ವಿರೋಧಿಯಾಗಿ ಮಾರ್ಪಟ್ಟದ್ದಕ್ಕೆ ಧಾರಾಳ ಉದಾಹರಣೆಗಳಿವೆಯಲ್ಲವೇ?

ನಿಜವಾಗಿ ಈ ದೇಶದಲ್ಲಿ ಸಂಕಟದಲ್ಲಿರುವುದು ಮತ್ತು ಆತ್ಮಹತ್ಯೆಗಳ ಮೂಲಕ ಸುದ್ದಿ ಮಾಡುತ್ತಿರುವುದು ರೈತರು ಮಾತ್ರ ಅಲ್ಲ. ಶೇ. 70 ಮಂದಿ ಭಾರತೀಯರ ನಿತ್ಯದ ಗಳಿಕೆ 20 ರೂಪಾಯಿಯೆಂದು ಸರಕಾರದ ಅಧಿಕೃತ ವರದಿಗಳೇ ಹೇಳುತ್ತವೆ. ಇದಕ್ಕೆ ಅವರೆಲ್ಲಾ ಸೋಮಾರಿಗಳಾಗಿರುವುದು ಕಾರಣ ಖಂಡಿತ ಅಲ್ಲ. ಈ ದೇಶದ ಶ್ರೀಮಂತರು ಜಿಪುಣರಾಗಿರುವುದೇ ಕಾರಣ ಎಂದು ಬಿಸಿನೆಸ್ ಕನ್ಸಲ್ಟೆನ್ಸಿ ಕಂಪೆನಿಯ ಸಮೀಕ್ಷೆಯೇ ಹೇಳುತ್ತದೆ. ಜಗತ್ತಿನ ಮೊದಲ ಐವರು ಶ್ರೀಮಂತರ ಪಟ್ಟಿಯಲ್ಲಿ ಈ ದೇಶದ ಮುಖೇಶ್ ಅಂಬಾನಿ ಮತ್ತು ಲಕ್ಷ್ಮೀ ಮಿತ್ತಲ್ ಇದ್ದಾರೆ. ಜಗತ್ತಿನಲ್ಲಿಯೇ 1.15 ಲಕ್ಷಕ್ಕೂ ಹೆಚ್ಚು ಭಾರತೀಯರು ವೈಯಕ್ತಿಕವಾಗಿ ಭಾರೀ ಸಂಪತ್ತಿನ ಒಡೆಯರಾಗಿದ್ದಾರೆ. ಈ ದೇಶದಲ್ಲಿ ಶ್ರೀಮಂತರ ಆದಾಯದಲ್ಲಿ ಪ್ರತೀವರ್ಷ ಭಾರೀ ಏರಿಕೆ ಆಗುತ್ತಿದೆ. ಇಷ್ಟಿದ್ದೂ ಸೇವಾ ಕಾರ್ಯಗಳಿಗೆ ಭಾರತೀಯ ಶ್ರೀಮಂತರು ಜುಜುಬಿ ಮೊತ್ತವನ್ನಷ್ಟೇ ನೀಡುತ್ತಿದ್ದಾರೆ ಎಂದು ವರದಿಯೇ ಹೇಳುತ್ತಿದೆ. ಒಂದು ಸಮಾಜದಲ್ಲಿ ಎಲ್ಲರೂ ಶ್ರೀಮಂತರಾಗುವುದು ಸಾಧ್ಯವಿಲ್ಲ ನಿಜ. ಆದರೆ, ಐಶಾರಾಮಿ ಮಹಲುಗಳ ಕೆಳಗೆ ನೆಲದಲ್ಲಿ ಮಲಗುವವರಿಗೆ ಸಣ್ಣದೊಂದು ಗುಡಿಸಲು, ಚಾಪೆ ಒದಗಿಸುವುದಕ್ಕೆ ಮಹಲಿನ ಒಡೆಯನಿಗೆ ಸಾಧ್ಯವಿಲ್ಲವೇ? ಬಡವರಿಗೆ ಸಹಾಯ ಮಾಡುವುದರಿಂದ ಸಂಪತ್ತು ಕರಗುವುದಿಲ್ಲ ಎಂದು ಧರ್ಮಗ್ರಂಥವೇ ಹೇಳುತ್ತದೆ. ಇಷ್ಟಕ್ಕೂ ನಕ್ಸಲ್ ಚಳವಳಿ ಇವತ್ತು ಕಾಡು ಸೇರಿರಬಹುದು. ಆದರೆ ಅಂಥದ್ದೊಂದು ಚಳವಳಿ ಹುಟ್ಟು ಪಡೆಯುವುದಕ್ಕೆ ಮತ್ತು ನಿಧಾನವಾಗಿ ಅದು ದಿಕ್ಕು ತಪ್ಪುವುದಕ್ಕೆ ಇಲ್ಲಿನ ಬಂಡವಾಳಶಾಹಿಗಳ ಧೋರಣೆಗೂ ಒಂದು ಪಾತ್ರವಿದೆಯಲ್ಲವೇ? ಬಡತನಕ್ಕೂ ತನಗೂ ಸಂಬಂಧವಿಲ್ಲ ಎಂದು ತೀರ್ಮಾನಿಸುವ ಉಳ್ಳವರ ಧೋರಣೆ, ಅಂತಿಮವಾಗಿ ಸಾಮಾಜಿಕ ಸಂಘರ್ಷವೊಂದಕ್ಕೆ ಖಂಡಿತ ವೇದಿಕೆ ಸಿದ್ಧಪಡಿಸುತ್ತದೆ. ಅದರಲ್ಲೂ ವ್ಯವಸ್ಥೆ ಶೋಷಕರ ಪರ ನಿಂತರೆ ಅಥವಾ ದುರ್ಬಲರ ಹಕ್ಕುಗಳನ್ನು ದಮನಿಸತೊಡಗಿದರೆ ಸತ್ವಂತ್ ಸಿಂಗ್‌ನಂಥವರು ಪಶ್ಚಾತ್ತಾಪ ಪಡುವುದು ಬಿಡಿ, ವ್ಯವಸ್ಥೆಗೆ ಹೊಡೆದ ಗುಂಡುಗಳನ್ನು ಲೆಕ್ಕ ಮಾಡತೊಡಗುತ್ತಾರೆ. ಶೋಷಕರನ್ನು ಸೋಲಿಸುವುದಕ್ಕೆ ಹಿಂಸೆಯನ್ನೇ ಅಸ್ತ್ರ ಎಂದು ಪರಿಗಣಿಸುತ್ತಾರೆ.

ವ್ಯವಸ್ಥೆಗೆ ಹೊಡೆದ ಗುಂಡುಗಳನ್ನು ಎಣಿಸಿದ ಸತ್ವಂತ್ ಸಿಂಗ್ ಇವತ್ತು ಈ ಸಮಾಜದಲ್ಲಿ ಅಪರಾಧಿಯಾಗಿ ಗುರುತಿಸಿಕೊಂಡಿದ್ದಾನೆ. ಆತ್ಮಹತ್ಯೆ ಮಾಡಿಕೊಂಡ ಕಾನು ಸನ್ಯಾಲ್, ವಿಫಲ ಸಿದ್ಧಾಂತದ ಸಂಕೇತವಾಗಿದ್ದಾರೆ. ಆದರೆ ಸತ್ವಂತ್‌ನನ್ನು ಕೊಲೆಗಾರನಾಗುವುದಕ್ಕೆ ಪ್ರಚೋದಿಸಿದವರು ಮತ್ತು ಸನ್ಯಾಲ್‌ರ ಮೇಲೆ ಆತ್ಮಹತ್ಯೆಗೆ ಒತ್ತಡ ಹಾಕಿದವರು ಎಂದೂ ಈ ಸಮಾಜದಲ್ಲಿ ಅಪರಾಧಿಗಳಾಗಿ ಗುರುತಿಸಿಕೊಳ್ಳುತ್ತಿಲ್ಲ. ಬಹುತೇಕ ಅವರು ವ್ಯವಸ್ಥೆಯ ಒಂದು ಭಾಗವಾಗಿ ಅಥವಾ ಸ್ವಯಂ ವ್ಯವಸ್ಥೆಯೊಳಗೇ ಸೇರಿಕೊಂಡಿರುತ್ತಾರೆ. ಅಭಿವೃದ್ಧಿಯ ಹೆಸರಲ್ಲಿ ಶ್ರಮಿಕರನ್ನು, ಬಡವರನ್ನು ನಾಜೂಕಾಗಿ ಶೋಷಿಸುತ್ತಿರುತ್ತಾರೆ.

ಏನೇ ಆಗಲಿ, ಈ ಧೋರಣೆ ಬದಲಾಗಲೇಬೇಕು. ಇಲ್ಲದಿದ್ದರೆ ಕಾಡು ಸೇರುವವರು, ಹಾರಿಸಿದ ಗುಂಡುಗಳನ್ನು ಲೆಕ್ಕ ಹಾಕುವವರು ಮತ್ತು ಆತ್ಮಹತ್ಯೆ ಮಾಡಿಕೊಳ್ಳುವವರು ಸೃಷ್ಟಿಯಾಗುತ್ತಲೇ ಇರುತ್ತಾರೆ.

## ವಿ ಚಾ ರ ಮ ಣಿ

ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಬಹಳವಾಗಿ ಸ್ಮರಿಸಿರಿ- ಮತ್ತು ಬೆಳಗು ಬೈಗುಗಳಲ್ಲಿ ಅವನ ಗುಣಗಾನ ಮಾಡುತ್ತಲಿರಿ. ಅವನೇ ನಿಮ್ಮ ಮೇಲೆ ಕೃಪೆ ತೋರುವವನು ಮತ್ತು ಅವನು ನಿಮ್ಮನ್ನು ಅಂಧಕಾರಗಳಿಂದ ಪ್ರಕಾಶದ ಕಡೆಗೆ ತರುವಂತೆ ಅವನ ದೇವಚರರು ನಿಮಗಾಗಿ ಕೃಪಾ ಪ್ರಾರ್ಥನೆ ಮಾಡುತ್ತಾರೆ. ಅವನು ಸತ್ಯವಿಶ್ವಾಸಿಗಳ ಮೇಲೆ ತುಂಬಾ ಕರುಣೆಯುಳ್ಳವನು. ಅವನನ್ನು ಅವರು ಭೇಟಿಯಾಗುವ ದಿನ ಅವರನ್ನು 'ಸಲಾಮ್' ನೊಂದಿಗೆ ಸ್ವಾಗತಿಸಲಾಗುವುದು ಮತ್ತು ಅಲ್ಲಾಹನು ಅವರಿಗಾಗಿ ಅತ್ಯಂತ ಗೌರವಪೂರ್ಣ ಸತ್ಫಲವನ್ನು ಸಿದ್ಧಗೊಳಿಸಿಟ್ಟಿದ್ದಾನೆ. (ಪವಿತ್ರ ಕುರ್‌ಆನ್: 33:35)

ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ




### ಬುರ್ಖಾ

ಸಂ. 1ರ 'ಅಲ್ಲ, ಬುರ್ಖಾ ಬಿಸಾಕಿದರೆ ಶೋಷಣೆ ತಪ್ಪುತ್ತಾ?' ಎಂಬ ರಹೀನಾ ತೊಕ್ಕೊಟ್ಟುರವರ ಬರಹವು ಬುರ್ಖಾ ವಿರೋಧಿಗಳಿಗೆ ಸವಾಲನ್ನೇ ಎಸೆದಂತಿತ್ತು. ಖಂಡಿತವಾಗಿಯೂ ಈ ಪರ್ದಾ ಕುರಿತು ಇರುವ ತಪ್ಪುಕಲ್ಪನೆಗಳನ್ನು ದೂರ ಮಾಡಲು ಈ ಲೇಖನವೇ ಸಾಕಾದೀತು. ಆದ್ದರಿಂದ, ತಪ್ಪುಕಲ್ಪನೆಯಿರುವ ವ್ಯಕ್ತಿಗಳು ಇದನ್ನು ಓದಬೇಕೆಂದು ನನ್ನ ಅಭಿಪ್ರಾಯ. ಆದರೆ ಒಂದು ವಿಚಾರವೇನೆಂದರೆ ಸಂಕುಚಿತ ಮನೋಭಾವವನ್ನು ಬಿಟ್ಟು ಓದಿದರೆ ಮಾತ್ರ ಈ ಲೇಖನ ಪ್ರಯೋಜನವಾದೀತು.

ಉಳಿದಂತೆ ಅರಫಾ ಮಂಚಿಯವರ ಬುರ್ಖಾದ ಕುರಿತು ಚರ್ಚೆ ನಡೆಸೋಣ ಎಂಬ ಲೇಖನ ಉತ್ತಮವಾಗಿ ಮೂಡಿ ಬಂದಿದೆ.

ತೌಸೀಫ್ ಜಪ್ಪು

### ಸರಿಯಾದ ಉತ್ತರ

ಫೆಬ್ರವರಿ 28ರ ಕನ್ನಡ ಪ್ರಭದಲ್ಲಿ ಪರ್ದಾದ ಬಗ್ಗೆ, ಪವಿತ್ರ ಕುರ್‌ಆನ್ ಮತ್ತು ಪೈಗಂಬರರ ಬಗ್ಗೆ ಅವಹೇಳನಕಾರಿಯಾಗಿ ಬರೆದುದನ್ನು ಓದಿ ತುಂಬಾ ವ್ಯಥೆಯಾಯಿತು. ಇದರ ಬಗ್ಗೆ ಸರಿಯಾದ ಉತ್ತರವನ್ನೇ ನೀಡಿರುವಿರಿ. ಇಂತಹ ಪ್ರಚೋದನಕಾರಿ ಹೇಳಿಕೆಗಳನ್ನು ಪ್ರಕಟಿಸುವ ಪತ್ರಿಕೆಗಳು ತಮ್ಮ ಘನತೆ ಗೌರವಗಳನ್ನು ತಾವೇ ಹಾಳು ಮಾಡಿಕೊಳ್ಳುತ್ತಿವೆ. ಇನ್ನು ಮುಂದಾದರೂ ಪತ್ರಿಕೆಗಳು ಇಂತಹ ಲೇಖನಗಳನ್ನು ಪ್ರಕಟಿಸುವ ಮುನ್ನ ಎಚ್ಚರವಹಿಸಲಿ.

ಅಬ್ದುಶ್ಯುಕೂರ್ ಸಾಬ್ ಹೊನ್ನೂರು

### ಮಾರ್ಮಿಕ

ನೆಚ್ಚಿನ ಸನ್ಮಾರ್ಗ ತಲುಪಿತು. ಕನ್ನಡ ಪ್ರಭದ ಅವಿವೇಕದ ಪರಿಣಾಮದಿಂದಾಗಿ ಶಿವಮೊಗ್ಗ, ಹಾಸನದಲ್ಲಾದ ಕೋಮುಗಲಭೆ ಹಾಗೂ ಅದಕ್ಕೆ ಪ್ರಚೋದನೆ ನೀಡಿದ ಸಮಾಜ ಘಾತುಕರ ನಿಜಬಣ್ಣ ಬಯಲಾಯಿತು. ಸರಕಾರದ ನಿಷ್ಕ್ರಿಯತೆಯಿಂದಾಗಿ ಅಲ್ಪಸಂಖ್ಯಾತರು ಅನುಭವಿಸಿದ ನೋವು ವರ್ಣನಾತೀತ ವಾಗಿದೆ. ಇದಕ್ಕೆ 'ಚಾಟಿಯೇಟಿ'ನಂತೆ ಮೂಡಿ ಬಂದಿರುವ 'ಸಂಪಾದಕೀಯ' ಪ್ರಸ್ತುತ ನೇತಾರರನ್ನು ಬೆಚ್ಚಿ ಬೀಳುವಂತೆ ಮಾಡಿದೆ. ಇದೇ ಸಂದರ್ಭದಲ್ಲಿ ಖುಶ್ವಂತ್ ಸಿಂಗ್‌ರವರು ಪ್ರವಾದಿಯವರ(ಸ) ಬಗ್ಗೆ ಬರೆದ ಲೇಖನ ಅತ್ಯಂತ ಮನೋಜ್ಞವಾಗಿದೆ. ಒಂದು ಕಡೆ ಪ್ರವಾದಿ ನಿಂದನೆ ಮತ್ತೊಂದೆಡೆ ಪ್ರವಾದಿಯವರ(ಸ) ಗುಣಗಾನ ಓದುಗರ ಮನಸ್ಸನ್ನು ಬಡಿದೆಬ್ಬಿಸು ವಂತಿದೆ. ಜೊತೆಗೆ 'ಒಡಲಾಳ' ಕಥೆಯು ಅತ್ಯಂತ ಮಾರ್ಮಿಕವಾಗಿ ಮೂಡಿ ಬಂದಿದೆ. ಮುಹಮ್ಮದ್ ಕುಳಾಯಿಯವರಿಗೆ ಅಭಿನಂದನೆಗಳು.

ರಹೀನಾ ತೊಕ್ಕೊಟ್ಟುರವರ ಬರಹವು ಮಾರ್ಮಿಕವಾಗಿತ್ತು. ಸನ್ಮಾರ್ಗ ತನ್ನದೇ ಆದ ರೀತಿಯಲ್ಲಿ ಜನಜಾಗೃತಿ ಮೂಡಿಸುತ್ತಿರುವುದು ಹರ್ಷದಾಯಕವಾಗಿದೆ.

ಅಬ್ದುಲ್ ಕರೀಮ್ ದಾವಣಗೆರೆ

### ಬುರ್ಖಾ

ನಾನು ಕೆಲವು ವರ್ಷಗಳಿಂದ ಸನ್ಮಾರ್ಗವನ್ನು ಓದುತ್ತಾ ಬಂದಿದ್ದೇನೆ. ಸನ್ಮಾರ್ಗ ಮಹಿಳಾ ಬರಹಗಾರರಿಗೆ ನೀಡುತ್ತಿರುವ ಪ್ರೋತ್ಸಾಹವು ಮೆಚ್ಚುವಂಥದ್ದೇ. ಸಂಚಿಕೆ 1ರಲ್ಲಿ ರಹೀನಾ ತೊಕ್ಕೊಟ್ಟುರವರ 'ಅಲ್ಲ, ಬುರ್ಖಾ ಬಿಸಾಕಿದರೆ ಶೋಷಣೆ ತಪ್ಪುತ್ತಾ?' ಎಂಬ ಲೇಖನವು ಮುಸ್ಲಿಮ್ ಮಹಿಳೆಯರನ್ನು ಎಚ್ಚರಿಸುವಂತಿತ್ತು ಹಾಗೂ ಬುರ್ಖಾ ಧರಿಸುವುದರಿಂದ ಜನರಲ್ಲಿ ಮೂಡುವ ಕೀಳರಿಮೆಯನ್ನು ಹೋಗಲಾಡಿಸುವಂತಿತ್ತು. ಎಲ್ಲರಿಗೂ ಮಾರ್ಗದರ್ಶನವಾಗುವಂತಹ ಲೇಖನಗಳನ್ನು ಸನ್ಮಾರ್ಗ ಪ್ರಕಟಿಸುತ್ತಿರಲಿ.

ಉಮಯ್ಯ ಫಾತಿಮಾ ಬೆಂಗರೆ

## ಇಬ್ರಾಹೀಮ್ ಸಈದ್‌ರ ಕುರಿತು ಪುಸ್ತಕ

ಮರ್ಹೂಮ್ ಇಬಾಹೀಮ್ ಸಈದ್ ಸಾಹೇಬರು ಇಸ್ಲಾಮಿಗಾಗಿ ಬದುಕಿದವರು. ಇಸ್ಲಾಮಿನ ಸಂಸ್ಥಾಪನೆಯ ಹಾದಿಯಲ್ಲಿ ಅವಿರತ ಶ್ರಮಪಟ್ಟವರು. ಇಸ್ಲಾಮಿನ ಸಂದೇಶ ಪ್ರಚಾರದಲ್ಲಿ ತನ್ನ ಬದುಕನ್ನೇ ಮುಡಿವಾಗಿಟ್ಟವರು. ತಮ್ಮ ಬದುಕಿನಲ್ಲಿ ಅನೇಕಾರು ಗಣ್ಯರು, ಧಾರ್ಮಿಕ–ಸಾಮಾಜಿಕ ನಾಯಕರು, ಮಠ–ಮಂದಿರ ಸ್ವಾಮೀಜಿಗಳು ರಾಜಕೀಯ ಧುರೀಣರೊಂದಿಗೆ ಅವರ ಸಂಬಂಧ, ಒಡನಾಟಗಳಿದ್ದುವು.

ಮರ್ಹೂಮ್ ಇಬ್ರಾಹೀಮ್ ಸಈದ್‌ರವರ ಬದುಕಿನ ವಿವಿಧ ಆಯಾಮಗಳು ಜನಸಾಮಾನ್ಯರಿಗೆ ಅದರಲ್ಲೂ ಇಸ್ಲಾಮಿ ಆಂದೋಲನದ ಕಾರ್ಯಕರ್ತರಿಗೆ ಸ್ಫೂರ್ತಿದಾಯಕವಾಗಲೆಂಬ ನೆಲೆಯಲ್ಲಿ ಅವರ ಬದುಕಿನ ಸಂಕ್ಷಿಪ್ತ ಚಿತ್ರಣಗಳನ್ನು ಪುಸ್ತಕ ರೂಪದಲ್ಲಿ ತರಲು ಉದ್ದೇಶಿಸಲಾಗಿದೆ. ಆದ್ದರಿಂದ ಯಾವುದಾದರೂ ನೆಲೆಯಲ್ಲಿ ಅವರೊಂದಿಗೆ ಸಂಬಂಧವಿದ್ದವರು ಈ ಕೆಳಗಿನ ಮೂರು ವಿಷಯಗಳಿಗೆ ಸಂಬಂಧಿಸಿ ಸಂಕ್ಷಿಪ್ತವಾಗಿ ಬರೆದು ಕಳಿಸಬೇಕೆಂದು ವಿನಂತಿಸುತ್ತೇವೆ.

1. ಮರ್ಹೂಮ್ ಇಬ್ರಾಹೀಮ್ ಸಈದ್‌ರನ್ನು ನೀವು ಯಾವಾಗಿನಿಂದ ಬಲ್ಲಿರಿ? ಅವರೊಂದಿಗೆ ನಿಮ್ಮ ಸಂಬಂಧದ ಸ್ವರೂಪವೇನು?
2. ಅವರ ಬದುಕಿಗೆ ಸಂಬಂಧಿಸಿ ನಿಮ್ಮ ನೆನಪಿನಲ್ಲಿರುವ ಯಾವುದಾದರೂ ವಿಶೇಷ ಘಟನೆಯನ್ನು ವಿವರಿಸುವಿರಾ?
3. ಇಸ್ಲಾಮಿ ಸಂದೇಶ ಪ್ರಚಾರವೆಂಬುದು ಅವರ ಉಸಿರಾಗಿತ್ತು. ಈ ಹಾದಿಯಲ್ಲಿ ಅವರ ಪ್ರಯತ್ನದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ನಿಮ್ಮ ಬರಹವನ್ನು ಸಂಪಾದಕರು, ಸನ್ಮಾರ್ಗ ವಾರಪತ್ರಿಕೆ, ಹಿದಾಯತ್ ಸೆಂಟರ್ ಅಂಚೆ ಪೆಟ್ಟಿಗೆ ನಂ: 16ಬೀಬಿ ಅಲಾಬಿ ರಸ್ತೆ, ಮಂಗಳೂರು– 575001. ಇವರಿಗೆ ಕಳುಹಿಸಬೇಕು.

# ನೈತಿಕತೆಗಿಷ್ಟು ಸರಳ ವ್ಯಾಖ್ಯಾನ ಸಾಧುವೇ ನ್ಯಾಯಮೂರ್ತಿಗಳೇ?

ಎ.ಕೆ. ಕುಕ್ಕಿಲ



(ಮುಖಪುಟದಿಂದ)

ಸಂವಿಧಾನದ 21ನೇ ವಿಧಿ ಎಲ್ಲರಿಗೂ ಬದುಕುವ ಹಕ್ಕು ಮತ್ತು ಸ್ವಾತಂತ್ರ್ಯವನ್ನು ನೀಡಿದೆ. ಪುರಾಣಗಳ ಪ್ರಕಾರ ರಾಧೆ ಮತ್ತು ಶ್ರೀಕೃಷ್ಣರೇ ಮದುವೆಯಾಗದೇ ಒಟ್ಟಿಗೆ ಬಾಳಿದ್ದಾರೆ. ಹೀಗಿರುವಾಗ, ಲಿವಿಂಗ್ ಟುಗೆದರನ್ನು ಅಪರಾಧ ಎಂದು ಸಾರಲು ಖಂಡಿತ ಸಾಧ್ಯವಿಲ್ಲ. ಅದು ಅಪರಾಧ ಆಗುವುದೂ ಇಲ್ಲ."

ಹಾಗಂತ ಮಾರ್ಚ್ 23ರಂದು ಸುಪ್ರೀಮ್ ಕೋರ್ಟ್‌ನ ಮುಖ್ಯ ನ್ಯಾಯಾಧೀಶ ಕೆ.ಜಿ. ಬಾಲಕೃಷ್ಣನ್ ನ್ಯಾಯಮೂರ್ತಿಗಳಾದ ದೀಪಕ್ ವರ್ಮಾ ಮತ್ತು ಬಿ.ಎಸ್. ಚವಾಣ್‌ರನ್ನೊಳಗೊಂಡ ಪೀಠ ಚಿತ್ರ ನಟಿ ಖುಷ್ಬೂ ಪ್ರಕರಣದ ವಿಚಾರಣೆಯ ವೇಳೆ ಅಭಿಪ್ರಾಯಪಟ್ಟಿದೆ.

2005ರಲ್ಲಿ ಖ್ಯಾತ ಆಂಗ್ಲಪತ್ರಿಕೆ 'ಇಂಡಿಯಾ ಟುಡೆ' ಖುಷ್ಬೂರ ಸಂದರ್ಶನ ನಡೆಸಿತ್ತು. ಅದರಲ್ಲಿ ಆಕೆ ವಿವಾಹಪೂರ್ವ ಲೈಂಗಿಕ ಸಂಬಂಧ ಹೊಂದುವುದನ್ನು ಸಮರ್ಥಿಸಿದ್ದರು. ಈಗಿನ ಕಾಲದಲ್ಲಿ ಯುವಕರು, ತನ್ನ ವಧು ಕನ್ಯೆಯಾಗಿರಬೇಕೆಂದು ಬಯಸುವುದು ಮೂರ್ಖತನ ಅಂದಿದ್ದರು. ಇದು ತಮಿಳುನಾಡಿನಲ್ಲಿ ಎಷ್ಟು ದೊಡ್ಡ ಸಂಚಲನ ಸೃಷ್ಟಿಸಿತೆಂದರೆ, ಅದುವರೆಗೆ ಆಕೆಯನ್ನು ದೇವತೆ ಎಂದು ವಿಗ್ರಹ ಮಾಡಿ ಪೂಜಿಸುತ್ತಿದ್ದ ಮಂದಿಯೇ ವಿಗ್ರಹ ಸಮೇತ ಆಕೆಯ ದೇವಾಲಯವನ್ನೇ ಉರುಳಿಸಿದ್ದರು. ಆಕೆಯ ವಿರುದ್ಧ ಸುಮಾರು 22 ಕ್ರಿಮಿನಲ್ ಮೊಕದ್ದಮೆಗಳು ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಯಿತು. ತನ್ನ ವಿರುದ್ಧದ ಮೊಕದ್ದಮೆಗಳನ್ನು ವಜಾಗೊಳಿಸುವಂತೆ ಕೋರಿ ಆಕೆ ರಾಜ್ಯ ಹೈಕೋರ್ಟಿಗೆ ಮನವಿ ಸಲ್ಲಿಸಿದರು. ಮನವಿಯನ್ನು ಹೈಕೋರ್ಟು ತಿರಸ್ಕರಿಸಿದ್ದನ್ನು ಪರಿಗಣಿಸಿ ಖುಷ್ಬೂ ಸುಪ್ರೀಮ್ ಕೋರ್ಟ್‌ನ ಮೊರೆ ಹೋದಳು. ಇದರ ವಿಚಾರಣೆಯ ಸಂದರ್ಭದಲ್ಲೇ ಈ ಮೇಲಿನ ಅಭಿಪ್ರಾಯವನ್ನು ಕೋರ್ಟು ವ್ಯಕ್ತಪಡಿಸಿದ್ದು.

ಈ ಅಭಿಪ್ರಾಯದ ಮರುದಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ವೆಬ್‌ಸೈಟ್‌ನಲ್ಲಿ ನೂರಾರು ಓದುಗರು ಪ್ರತಿಕ್ರಿಯಿಸಿದರು. ಅದರಲ್ಲಿ ಒಂದು ಹೀಗಿತ್ತು:

"ನಿತ್ಯಾನಂದ ಸ್ವಾಮಿಗೆ ಜೈ. ಆತ ಯಾವ ತಪ್ಪೂ ಮಾಡಿಲ್ಲ. ಆತ ಪುರಾಣ ಪುರುಷ ಶ್ರೀಕೃಷ್ಣರನ್ನು ಅನುಸರಿಸಿದ್ದಾನೆ."

ಖುಷ್ಬೂಳ ಪರ ಸುಪ್ರೀಮ್ ಕೋರ್ಟ್‌ನ ಅಭಿಪ್ರಾಯ ವ್ಯಕ್ತವಾದ ಬೆನ್ನಿಗೇ ಚಿತ್ರರಂಗದ ಮಂದಿ ವಿವಾಹಪೂರ್ವ ಲೈಂಗಿಕತೆಯನ್ನು ಬೆಂಬಲಿಸಿ ಮಾತಾಡಿದರು. ಮಹೇಶ್ ಭಟ್, ಅರ್ಚನಾ ಪೂರಣ್ ಸಿಂಗ್, ಪೂಜಾ ಬೇಡಿ, ಆದಮ್ ಬೇಡಿ ಸಹಿತ ಸಾಕಷ್ಟು ಮಂದಿ ಕೂಡಿ ಬಾಳುವುದನ್ನು ಕ್ಯಾಶುವಲ್ (ಸಾಮಾನ್ಯ) ಅಂದರು. ಈ 21ನೇ ಶತಮಾನದಲ್ಲಿ ಹಳೆಯ ಕಟ್ಟುಪಾಡುಗಳನ್ನು ಮುಂದಿಟ್ಟು ಮದುವೆ, ಶಾಸ್ತ್ರ ಅಂತೆಲ್ಲಾ ಹೇಳಿಕೊಂಡು ವಯಸ್ಕರನ್ನು ಕಟ್ಟಿ ಹಾಕುವುದು ಸರಿಯಲ್ಲ ಎಂದರು. ಇರಲಿ, ಅಭಿಪ್ರಾಯ ಸ್ವಾತಂತ್ರ್ಯ ಅವರಿಗೂ ಇದೆ. ಆದರೆ ಬಹುಸಂಖ್ಯಾತ ನಾಗರಿಕರು ಸಿನಿಮಾ ತಾರೆಯರ ಅಭಿಪ್ರಾಯ ಬಿಡಿ, ಅವರ ಉಡುಗೆ-ತೊಡುಗೆ, ಜೀವನ ಶೈಲಿ, ವೈವಾಹಿಕ ನಿಲುವನ್ನೂ ಮಾದರಿ ಎಂದು ಪರಿಗಣಿಸುತ್ತಿಲ್ಲ ಎನ್ನುವುದೇನು ರಹಸ್ಯವೇ? ಪರದೆಯ ಮೇಲಿನ ಹೀರೋಗಳ ಬದುಕು ಎಷ್ಟು ದಾರುಣವಾಗಿದೆ ಎಂಬುದನ್ನು ಮಾಧ್ಯಮಗಳು ಆಗಾಗ ಪರದೆಯನ್ನು ತುಸು ಸರಿಸಿ, ನಾಗರಿಕ ಜಗತ್ತಿನ ಮುಂದಿಡುವುದಿದೆ. ವಿವಾಹಪೂರ್ವ ಲೈಂಗಿಕ ಸಂಬಂಧ, ಲಿವಿಂಗ್ ಟುಗೆದರ್, ಅಫೇರ್‌ಗಳು, ಕುಡಿತ, ವಿಚ್ಛೇದನ, ಜಗಳ, ಒಂಟಿ ಜೀವನ ಮುಂತಾಗಿ ಅವರ ಬದುಕಿನ ಮಹತ್ವಪೂರ್ಣ ಅವಧಿ ಕಳೆದುಹೋಗುತ್ತಿರುವುದನ್ನು ಕೂಡ ಈ ಸಮಾಜ ನೋಡುತ್ತಿದೆ. ಆದ್ದರಿಂದಲೇ ಕೂಡಿ ಬಾಳುವುದನ್ನು ಸಮರ್ಥಿಸುವುದಕ್ಕೆ ಚಿತ್ರರಂಗದ ಮಂದಿ ಖಂಡಿತ ಮಾದರಿಗಳಾಗುವುದಿಲ್ಲ.

ಇಷ್ಟಕ್ಕೂ 2010 ಮೇ 7ರಂದು ಸುಪ್ರೀಮ್ ಕೋರ್ಟಿನಲ್ಲಿ ಇಂಥದ್ದೇ ಒಂದು ಪ್ರಕರಣ ವಿಚಾರಣೆಗೆ ಬರಲಿದೆ.

**ಜಪ್‌ಮನ್‌ದೀಪ್ ಸಿಂಗ್ ಮತ್ತು ರಾಜಶ್ರೀ**

ಮಾರ್ಚ್ 2003ರಂದು ವಿದ್ಯಾರ್ಥಿ ವೀಸಾದ ಮೂಲಕ ಪಂಜಾಬ್‌ನ ಜಪ್‌ಮನದೀಪ್ ಸಿಂಗ್ ಇಂಗ್ಲೆಂಡಿಗೆ ಹಾರುತ್ತಾನೆ. ಮಾಹಿತಿ ತಂತ್ರಜ್ಞಾನದಲ್ಲಿ ಲಂಡನ್ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಐಟಿಯಿಂದ ಉನ್ನತ ಪದವಿ ಪಡೆಯುವುದು ಆತನ ಉದ್ದೇಶ. ಅಲ್ಲಿ ಆತನಿಗೆ ಗುಜರಾತ್‌ನ ರಾಜಶ್ರೀಯ ಪರಿಚಯವಾಗುತ್ತದೆ. ಆಕೆಯಾದರೋ ಅಕ್ಟೋಬರ್ 2002ರಲ್ಲೇ ಐಟಿಯಲ್ಲಿ ಹೆಚ್ಚಿನ ವ್ಯಾಸಂಗ ಪಡೆಯುವುದಕ್ಕಾಗಿ ಇಂಗ್ಲೆಂಡಿಗೆ ಬಂದಿದ್ದಳು. ಅವರ ಪರಿಚಯ ಯಾವ ಮಟ್ಟಕ್ಕೆ ಹೋಯಿತೆಂದರೆ, ಅಕ್ಟೋಬರ್ 2003ರಿಂದ ಅವರು ಕೂಡಿ ಬಾಳಲು (ಲಿವಿಂಗ್ ಟುಗೆದರ್) ಪ್ರಾರಂಭಿಸುತ್ತಾರೆ. 5 ವರ್ಷಗಳ ನಂತರ ಆಗಸ್ಟ್ 29, 2008ರಂದು ಅವರಿಬ್ಬರೂ ಭಾರತಕ್ಕೆ ಮರಳುತ್ತಾರಲ್ಲದೇ, ತಂತಮ್ಮ ಮನೆಗಳಿಗೆ ತೆರಳುತ್ತಾರೆ.

**ಇಷ್ಟೇ ಅಲ್ಲ**

ರಾಜಶ್ರೀ, ತನ್ನ ಜೊತೆಗಾರನ ವಿರುದ್ಧ ಹೈಕೋರ್ಟಿಗೆ ದೂರು ಸಲ್ಲಿಸುತ್ತಾಳೆ. ಸೆಕ್ಷನ್ 498ರಡಿಯಲ್ಲಿ ಅಹ್ಮದಾಬಾದ್ ಮತ್ತು ಪಂಜಾಬ್-ಹರ್ಯಾಣ ಹೈಕೋರ್ಟುಗಳಲ್ಲಿ ಆಕೆ ಸಲ್ಲಿಸಿದ ದೂರು, ಅಂತಿಮವಾಗಿ ವಜಾ ಆಗುತ್ತದೆ. ಆಕೆ ಸುಪ್ರೀಮ್ ಕೋರ್ಟಿಗೆ ಹೋಗುತ್ತಾಳೆ. ಆ ದೂರನ್ನು ಪರಿಗಣಿಸಿ ಕೋರ್ಟು ಜಪ್‌ಮನ್‌ದೀಪ್‌ಗೆ ನೋಟೀಸು ಕಳುಹಿಸುತ್ತದೆ. ಆಗ ಜಪ್‌ಮನ್ ಹೇಳಿದ್ದೇನೆಂದರೆ,

"ಇಂಗ್ಲೆಂಡಿನಲ್ಲಿ ನಾವು ಒಂದು ಕೊಠಡಿಯನ್ನು ಹಂಚಿಕೊಂಡಿದ್ದೆವು. ಆದರೆ ಯಾವುದೇ ಧರ್ಮದ ಪ್ರಕಾರ ನಾವು ಮದುವೆಯಾಗಿರಲಿಲ್ಲ ಅಥವಾ ಇಂಗ್ಲೆಂಡಿನಲ್ಲಿ ಚಾಲ್ತಿಯಲ್ಲಿರುವ ಕಾನೂನಿನಂತೆ ನೋಂದಣಿ ಕೂಡಾ ಮಾಡಿಸಿಕೊಂಡಿಲ್ಲ." ವಿಶೇಷ ಏನೆಂದರೆ, ಈ ಕೂಡಿ ಬಾಳಿದುದರ ಪರಿಣಾಮವಾಗಿ ತಮಗೊಂದು ಮಗು ಆಗಿರುವುದನ್ನು ಆತ ಎಲ್ಲೂ ಉಲ್ಲೇಖಿಸಿರಲೇ ಇಲ್ಲ. ಕೋರ್ಟು ಈತನ ಅಹವಾಲನ್ನು ಪರಿಗಣಿಸಿ ರಾಜಶ್ರೀಗೆ ನೋಟೀಸು ಜಾರಿ ಮಾಡಿದಾಗ ಲಿವಿಂಗ್ ಟುಗೆದರ್‌ನ ಇನ್ನೊಂದು ಮುಖ ಬಹಿರಂಗವಾಯಿತು.

ನವೆಂಬರ್ 29, 2005ರಂದು ಸ್ಲೋಗ್‌ನ ವಾಕ್ಸಾಮ್ ಪಾರ್ಕ್ ಆಸ್ಪತ್ರೆಯಲ್ಲಿ ತಾನು ಮಗುವಿಗೆ ಜನ್ಮವಿತ್ತಿರುವುದಾಗಿ ಆಕೆ ಜನನ ಪ್ರಮಾಣ ಪತ್ರದ ಸಮೇತ ಕೋರ್ಟಿಗೆ ತಿಳಿಸಿದಳು. ಆ ಸರ್ಟಿಫಿಕೇಟ್‌ನಲ್ಲಿ ಮಗುವಿನ ಅಪ್ಪನ ಜಾಗದಲ್ಲಿ ಜಪ್‌ಮನ್‌ದೀಪ್ ಸಿಂಗ್ ಅಹ್ಲುವಾಲಿಯಾ ಮತ್ತು ತಾಯಿಯ ಜಾಗದಲ್ಲಿ ರಾಜಶ್ರೀ ಅಹ್ಲುವಾಲಿಯಾ ಎಂದು ನಮೂದಿಸಲಾಗಿತ್ತು. ಮಾತ್ರವಲ್ಲ, ದೃಢೀಕರಣಕ್ಕಾಗಿ ಅವರ ಪಾಸ್‌ಪೋರ್ಟ್‌ನ ನಕಲು ಪ್ರತಿಯನ್ನೂ ರಾಜಶ್ರೀಯ ವಕೀಲ ರಾಯಚೂರ್ ಕೋರ್ಟ್‌ನ ಮುಂದೆ ಸಲ್ಲಿಸಿದರು. ಅಲ್ಲದೇ ಅಕ್ಟೋಬರ್ 10, 2006ರಂದು ಗೃಹ ಹಿಂಸೆ ಮತ್ತು ಅತ್ಯಾಚಾರದ ಕೇಸನ್ನು ಜಪ್‌ಮನ್‌ದೀಪ್‌ನ ವಿರುದ್ಧ ಹೂಡಿದ್ದನ್ನೂ ಮತ್ತು ಡಿ. 6, 2006ರಂದು ಅದನ್ನು ಹಿಂತೆಗೆದುಕೊಂಡ ಬಗ್ಗೆ ದಾಖಲೆಗಳನ್ನೂ ವಕೀಲರು ಕೋರ್ಟಿನಲ್ಲಿ ಮಂಡಿಸಿ, ಅವರಿಬ್ಬರ ಸಂಬಂಧವನ್ನು ಬಯಲುಗೊಳಿಸಿದರು.

**ಆದರೂ...**

ಲಿವಿಂಗ್ ಟುಗೆದರನ್ನು ಮದುವೆ ಎಂದು ಪರಿಗಣಿಸಲು ಸಾಧ್ಯವೇ? ಕೆಲವು ಸಮಯ ಒಟ್ಟಿಗಿದ್ದು ದೈಹಿಕ ಸುಖವನ್ನು ಅನುಭವಿಸಿ, ಬಳಿಕ ದೂರವಾದರೆ ಅಥವಾ ಇನ್ನೊಬ್ಬ ಸಂಗಾತಿಯನ್ನು ಆಯ್ಕೆ ಮಾಡಿಕೊಂಡರೆ ಅದನ್ನು ಕಾನೂನಿನ ಪರಿಧಿಯಲ್ಲಿ ಹೇಗೆಂತ ಪರಿಗಣಿಸುವುದು? ಮದುವೆಯೇ ಆಗಿಲ್ಲವೆಂದ ಮೇಲೆ ಅದನ್ನು ಮೋಸ ಎಂದಲ್ಲದೇ ವಿಚ್ಛೇದನ ಎಂದು ಕರೆಯಬಹುದೇ? ಪರಿಹಾರಕ್ಕಾಗಿ ಕೋರ್ಟ್‌ನಲ್ಲಿ ದೂರು ದಾಖಲಿಸಬಹುದೇ? ಮಕ್ಕಳಾಗಿದ್ದರೆ ಅವರ ಸ್ಥಿತಿಯೇನು? ಮಕ್ಕಳು ಅಪ್ಪನನ್ನು ಕೇಳಿದರೆ, ಅಮ್ಮ ಯಾರನ್ನು ತೋರಿಸಬೇಕು? ಲಿವಿಂಗ್ ಟುಗೆದರ್‌ಗೆ ಹುಟ್ಟಿ, ಬಳಿಕ ಬೇರ್ಪಟ್ಟ ಹೆತ್ತವರ ಮಕ್ಕಳು ಶಾಲೆ, ಉದ್ಯೋಗ ಮತ್ತು ಇನ್ನಿತರ ಸಂದರ್ಭಗಳಲ್ಲಿ ಅಪ್ಪನನ್ನು ನಮೂದಿಸುವುದಾದರೂ ಹೇಗೆ?

ರಾಜಶ್ರೀ ಸದ್ಯ ಈ ಎಲ್ಲ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಕೋರ್ಟಿನ ಮುಂದೆ ಸದ್ಯ ಆಕೆ ಇಟ್ಟ ಬೇಡಿಕೆಯೇನೆಂದರೆ,

"ಆತ ಬೇರೆ ಮದುವೆಯಾಗುವುದಾದರೆ ನನ್ನ ಒಪ್ಪಿಗೆಯಿದೆ. ಆದರೆ ಆತ ನಾಲ್ಕು ವರ್ಷದ ಮಗನನ್ನು ನನ್ನ ಜೊತೆಯೇ ಇರಲು ಅವಕಾಶ ಕೊಡಬೇಕು ಮತ್ತು ಖರ್ಚಿಗೆ ದುಡ್ಡು ಕೊಡುತ್ತಿರಬೇಕು." ಮೇ 7ರಂದು ಸುಪ್ರೀಮ್ ಕೋರ್ಟ್‌ನಲ್ಲಿ ಈ ಬಗ್ಗೆ ಮುಂದಿನ ವಿಚಾರಣೆ ನಡೆಯಲಿದೆ.

ಇಷ್ಟಕ್ಕೂ ಆಧುನಿಕ ಜಗತ್ತನ್ನು ಮುಂದಿಟ್ಟುಕೊಂಡು ಕೂಡಿ ಬಾಳುವುದನ್ನು ಸಮರ್ಥಿಸುವವರು, ಇವತ್ತು ವ್ಯಾಪಕವಾಗುತ್ತಿರುವ ವಿಚ್ಛೇದನ, ಖಿನ್ನತೆ ಸಂಬಂಧಿ ರೋಗಗಳು, ಕೌನ್ಸಿಲಿಂಗ್ ಸೆಂಟರ್‌ಗಳ ಹೆಚ್ಚಳದ ಬಗ್ಗೆ ಮೌನವಾಗುವುದೇಕೆ? ಹೆಣ್ಣು ನೋಡುವುದು, ಮದುವೆಯಾಗುವುದು, ಬಳಿಕ ಮಕ್ಕಳಾಗುವುದು ಇವೆಲ್ಲವನ್ನೂ ಅಜ್ಜಿಯಂದಿರ ಕಾಲದ ಅಗತ್ಯಗಳೆಂದೂ ಆಗ ಮೈ ನೆರೆತ ಕೂಡಲೇ ಮದುವೆಯಾಗುತ್ತಿತ್ತೆಂದೂ ಕೆಲವರು ವಾದಿಸುತ್ತಾರೆ. ಇರಬಹುದು. ಹಾಗಂತ ಅದರಲ್ಲಿ ಮೌಲ್ಯವಿಲ್ಲವೇ? ಈಗ ಹೆಣ್ಣಿನ ಮದುವೆಯ ವಯಸ್ಸು 25-30ಕ್ಕೆ ಏರಿದೆ ಎಂದ ಮಾತ್ರಕ್ಕೇ ಅದು ಮುಕ್ತ ಲೈಂಗಿಕತೆಗೆ ಪರ್ಮಿಟ್ಟು ಹೇಗಾಗುತ್ತದೆ? ಇಷ್ಟಕ್ಕೂ, ಅಜ್ಜಿಯಂದಿರು ಮೈ ನೆರೆತ ಕೂಡಲೇ ಮದುವೆಯಾಗಲೇಬೇಕೆಂದು ಯಾವ ಧರ್ಮ ಗ್ರಂಥ ಹೇಳಿತ್ತು? ಈಗಿನ ಹೆಣ್ಣು ಮಕ್ಕಳು 30 ವರ್ಷದವರೆಗೆ ಕಾಯಬೇಕೆಂದು ತೀರ್ಮಾನಿಸಿದ್ದಾದರೂ ಯಾರು? ಹೆಣ್ಣು ಉದ್ಯೋಗದ ಕಾರಣವನ್ನು ಮುಂದಿಟ್ಟು ಮದುವೆಯನ್ನು ಮುಂದೂಡುತ್ತಾ, ಅಂತಿಮವಾಗಿ ಲಿವಿಂಗ್ ಟುಗೆದರ್‌ಗೆ ಅದನ್ನು ನೆಪವಾಗಿ ಬಳಸುವುದಕ್ಕೆ ಏನರ್ಥವಿದೆ?

ಅದಿರಲಿ, ಲಿವಿಂಗ್ ಟುಗೆದರ್‌ನಿಂದ ತನ್ನ ಭಾವೀ ಗಂಡನನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಸುಲಭವಾಗುತ್ತದೆ ಎನ್ನುವ ವಾದದಲ್ಲಾದರೂ ಹುರುಳಿದೆಯೇ?

ವಿಶ್ವದಲ್ಲಿಯೇ ಅತ್ಯಂತ ಮುಂದುವರಿದ ಸಮಾಜ ಎಂದು ಗುರುತಿಸಲ್ಪಡುತ್ತಿರುವ ಸ್ವೀಡನ್ ಮತ್ತು ಡೆನ್ಮಾರ್ಕ್‌ಗಳಲ್ಲಿ ಮದುವೆಯ ಸಂಖ್ಯೆ ತೀರಾ ಕುಸಿಯುತ್ತಿದೆಯಲ್ಲದೇ ವಿಚ್ಛೇದನಗಳು ಏರುಗತಿಯಲ್ಲಿವೆ. ಅಮೇರಿಕದಲ್ಲಿ 12 ಮಿಲಿಯನ್ ಅವಿವಾಹಿತ ಹೆತ್ತವರಿದ್ದಾರೆ. 1999-2007ರ ನಡುವೆ ಇವರ ಸಂಖ್ಯೆ ಶೇ. 88ಕ್ಕೇರಿದೆ. ಶೇ. 40ರಷ್ಟು ಕೂಡಿ ಬಾಳುವ ಪದ್ಧತಿ ವಿಚ್ಛೇದನದಲ್ಲಿ ಕೊನೆಗೊಳ್ಳುತ್ತಿದೆ. ದುರಂತ ಏನೆಂದರೆ, ಅಮೇರಿಕದಲ್ಲಿ 39.6% ಮಕ್ಕಳು ಅವಿವಾಹಿತ ತಾಯಂದಿರಿಗೆ ಹುಟ್ಟುತ್ತಾರೆ. 1997ರಲ್ಲಿ ಅಮೇರಿಕದ ಪೆನ್ಸಿಲ್ವೇನಿಯಾ ಸ್ಟೇಟ್ ಯೂನಿವರ್ಸಿಟಿ ಒಂದು ಸಮೀಕ್ಷೆ ನಡೆಸಿತು. ಅಂತಿಮವಾಗಿ ಅದು ಕಂಡುಕೊಂಡ ಸತ್ಯ ಏನೆಂದರೆ,

"ಕೂಡಿ ಬಾಳುವುದು ಒಂದು ರೀತಿಯಲ್ಲಿ ಅನುಭವಿಸಿ, ಬಿಸಾಕುವ ಆಧುನಿಕ ಭೋಗ ಸಂಸ್ಕೃತಿ ಮಾತ್ರವಾಗಿದೆ. ಅದರಿಂದ ಭಾವಿ ಪತಿ-ಪತ್ನಿಯನ್ನು ಕಂಡುಕೊಳ್ಳುವುದು ಬಿಡಿ, ಹೆಚ್ಚಿನವು ಬೇರ್ಪಡುವಿಕೆಯಲ್ಲಿ ಕೊನೆಗೊಳ್ಳುತ್ತಿದೆ. ಮಾತ್ರವಲ್ಲ, ಆ ಕಾರಣದಿಂದ ಹುಟ್ಟುವ ಮಕ್ಕಳು, ಮಾನಸಿಕ ತೊಂದರೆಗಳಿಗೆ ಹೆಚ್ಚು ಒಳಗಾಗುತ್ತಿದ್ದಾರೆ. ಮದುವೆಯಾದ ದಂಪತಿಗಳ ಮಕ್ಕಳಿಗೆ ಹೋಲಿಸಿದರೆ ಈ ಮಕ್ಕಳು ಮನೆಯಲ್ಲಿ ಹೆಚ್ಚು ನಿಂದನೆ, ಥಳಿತ ಮತ್ತು ಖಿನ್ನತೆಗೆ ಒಳಗಾಗುತ್ತಿದ್ದಾರೆ."

ಇಷ್ಟಕ್ಕೂ ಮನುಷ್ಯ ಅಂದ ಮೇಲೆ ಕೆಲವು ಶಿಷ್ಟಾಚಾರಗಳಿರಬೇಡವೇ? ತಿನ್ನುವುದು, ಕುಡಿಯುವುದು, ದೈಹಿಕ ಆಸೆಗಳನ್ನು ಪೂರೈಸುವುದು ಮುಂತಾದುವುಗಳಲ್ಲಿ ಸ್ವಚ್ಛಂದತೆಯನ್ನು ಅನುಸರಿಸಿದರೆ ಮತ್ತೆ ನಮಗೂ ಪ್ರಾಣಿಗೂ ಇರುವ ವ್ಯತ್ಯಾಸವಾದರೂ ಏನು? ಧರ್ಮವನ್ನು ಮತ್ತು ಮೌಲ್ಯಗಳನ್ನು ಒಲ್ಲು ಎಂದು ತಿರಸ್ಕರಿಸಿ ಬಿಡುವುದು ಸುಲಭ. ಆದರೆ ಒಂದು ಶಿಷ್ಟ ಸಮಾಜವನ್ನು ಈ ವರೆಗೆ ಕಟ್ಟಿಬೆಳೆಸಿದ್ದು ಅವೇ ಅಲ್ಲವೇ? ಅಪ್ಪ, ಅಮ್ಮ, ಅಜ್ಜಿ, ಅಣ್ಣ, ಅಕ್ಕ, ತಂಗಿ, ತಮ್ಮ ಮುಂತಾದ ಭಾವನಾತ್ಮಕ ಸಂಬಂಧಗಳನ್ನು ಊಹಿಸಿಕೊಳ್ಳಿ. ಶಾಲೆಯಲ್ಲಿ ತಮ್ಮನಿಗೆ ಯಾರಾದರೂ ಹೊಡೆದರೆ ತಕ್ಷಣ ಅಣ್ಣ ಹಾಜರಾಗುತ್ತಾನೆ. ತಮ್ಮನನ್ನು ಸಾಂತ್ವನಿಸುತ್ತಾನೆ. ತಂಗಿಯ ಮದುವೆಗೆ ಅಣ್ಣ ರಾತ್ರಿ-ಹಗಲು ದುಡಿಯುತ್ತಾನೆ. ತಾನು ಬಟ್ಟೆ ಹೊಲಿಸದಿದ್ದರೂ ತಂಗಿಗೆ ನವಿರಾದ ಉಡುಪು ಖರೀದಿಸುತ್ತಾನೆ. ಅಪ್ಪ-ಅಮ್ಮನಿಗೆ ನೆಗಡಿಯಾದರೂ ಮಕ್ಕಳು ಓಡಿ ಬರುತ್ತಾರೆ. ಇಂಥದ್ದೊಂದು ಭಾವನಾತ್ಮಕ ಸಂಬಂಧವನ್ನು ಕಟ್ಟಿಕೊಟ್ಟದ್ದು ಧರ್ಮವಲ್ಲವೇ? ಈ ಮೌಲ್ಯವನ್ನು ಚಿಂದಿ ಉಡಾಯಿಸಿದರೆ ನಾಗರಿಕ ಜಗತ್ತಿನಲ್ಲಿ ಪರಸ್ಪರ ಸಹಾನುಭೂತಿ, ಸಹಾಯ, ಸಾಂತ್ವನಗಳ ಪ್ರಜ್ಞೆ ಉಳಿಯುವುದಾದರೂ ಹೇಗೆ? ನಿಜವಾಗಿ ಕೂಡಿ ಬಾಳುವ ಸಂಸ್ಕೃತಿಯಲ್ಲಿ ಹೊಣೆಗಾರಿಕೆಗಳಿಲ್ಲ. ಸಾಕು ಎಂದಾದಾಗ ಒಟ್ಟಾದವರು ದೂರವಾಗುತ್ತಾರೆ. ಮಗುವಾಗಿದ್ದರೆ, ಕೋರ್ಟು-ಕಟ್ಟಳೆ ಅಂತ ತಿರುಗುವುದು, ಆ ನಡುವೆ ಇನ್ನೊಬ್ಬರನ್ನು ಆಯ್ಕೆ ಮಾಡಿಕೊಳ್ಳುವುದು, ಇಷ್ಟವಾಗದಿದ್ದರೆ ಬೇರ್ಪಡುವುದು... ಹೀಗೆ ಅದು **(14ನೇ ಪುಟಕ್ಕೆ)**

ನೀವು ಸನ್ಮಾರ್ಗವನ್ನು ಮೆಚ್ಚಿದರೆ
ಇತರರಿಗೂ ತಿಳಿಸಿ,
ಮೆಚ್ಚದಿದ್ದರೆ ನಮಗೆ ತಿಳಿಸಿ.

# ಪಾಸ್‌ಪೋರ್ಟ್: ಇಸ್ರೇಲ್‌ನ ಮುಖ ಬಹಿರಂಗ

ವಿದೇಶರಂಗ

ದಿ ಹಿಂದೂವಿನಿಂದ

**ಒಂ**ದು ದೇಶದ ರಾಜಕೀಯ ಪಕ್ಷದ ನೇತಾರರನ್ನು ಇನ್ನೊಂದು ದೇಶದ ಗುಪ್ತಚರ ಸಂಸ್ಥೆಯು ಮತ್ತೊಂದು ದೇಶದಲ್ಲಿ ಹತ್ಯೆಗೈಯುವುದು ಅಂತರಾಷ್ಟ್ರೀಯ ನ್ಯಾಯದ ಆಧಾರದಲ್ಲಿ ಏನೆಂದು ಹೇಳಬಹುದು? ಅಪರಾಧವೆಂದಷ್ಟೇ ಅಲ್ಲ, ಘೋರ ಸಂಚು ಎಂದೂ ವ್ಯಾಖ್ಯಾನಿಸಬಹುದಲ್ಲವೇ? ಆದರೆ ಆ ಕೃತ್ಯ ಇಸ್ರೇಲ್ ಎಸಗಿದರೆ? ಮೌನವೇ ಉತ್ತರ!

ನಿಜ ಹೇಳಬೇಕೆಂದರೆ, ಫೆಲೆಸ್ತೀನಿನ ಹಮಾಸ್ ನೇತಾರ ಮಹ್ಮೂದ್ ಅಲ್ ಮಬ್‌ಹೂಹ್‌ರನ್ನು ದುಬೈಯಲ್ಲಿ ಇಸ್ರೇಲಿನ ಕುಖ್ಯಾತ ಗುಪ್ತಚರ ಸಂಸ್ಥೆ ಮೊಸಾದ್ ಹತ್ಯೆಗೈದಿದ್ದು, ಅದರ ಪಾರಂಪರಿಕ ಷಡ್ಯಂತ್ರದ ಒಂದು ಭಾಗವಷ್ಟೇ ಆಗಿ ಭಾವಿಸಬಹುದಷ್ಟೇ. ಆದರೆ ಇಲ್ಲಿ ಹೇಳಹೊರಟಿರುವುದು ಅದರ ಇಸ್ಲಾಮ್ ವಿರೋಧದ ಕುರಿತಲ್ಲ, ಬದಲಾಗಿ ಅದರ ನಯವಂಚಕತನದ ಕುರಿತಾಗಿದೆ.

ಇಸ್ರೇಲ್ ಎಂಬ ಪಾಶ್ಚಾತ್ಯ ಜಾರ ಸಂತಾನದ ರಾಜಧಾನಿ ಟೆಲ್ ಅವೀವ್‌ಗೆ ಕೆಲವೇ ಕಿ.ಮೀ. ದೂರದಲ್ಲಿರುವ ಅಂತರ್‍ರಾಷ್ಟ್ರೀಯ ವಿಮಾನ ನಿಲ್ದಾಣ ಬೆನ್‌ಗ್ಯೂರಿಯನ್ ಪ್ರವೇಶಿಸುವುದು ಅಥವಾ ಅದರ ಮೂಲಕ ಹೊರ ಬರುವುದು ತೀರಾ ದುಸ್ತರ ಎನ್ನುವಷ್ಟು ಭದ್ರತಾ ತಪಾಸಣೆಗಳು ಅಲ್ಲಿ ನಡೆಯುತ್ತವೆ. ಯಾತ್ರಿಕರ ಲಗೇಜುಗಳನ್ನು ಅತ್ಯಾಧುನಿಕ ತಂತ್ರ ಜ್ಞಾನದ ಆಧಾರದಲ್ಲಿಯೇ ತಪಾಸಿಸಲಾಗುತ್ತದೆ. ಸ್ವಯಂ ಯಾತ್ರಿಕರೂ ಹಲವು ರೀತಿಯ (ವೈಯಕ್ತಿಕವೂ ಸೇರಿ) ಪ್ರಶ್ನಾವಳಿಗಳಿಗೆ 'ಸಮರ್ಪಕ' ಉತ್ತರ ನೀಡಬೇಕಾಗುತ್ತದೆ.

ಇಂತಹ ಬಿಗಿ ಭದ್ರತೆ ಇರುವ ವಿಮಾನ ನಿಲ್ದಾಣದ ಮೂಲಕವೇ ಇತರ ದೇಶಗಳ ನಾಗರಿಕರ ಪಾಸ್‌ಪೋರ್ಟ್‌ಗಳನ್ನು ನಕಲುಗೊಳಿಸಲಾಗಿದ್ದು, ಅವುಗಳ ಮೂಲಕ ಮೊಸಾದ್ ತನ್ನ ಕುಕೃತ್ಯಗಳಿಗೆ ಬಳಸುತ್ತಿದೆ



ಎಂಬ ವಿಚಾರ ಹಿಂದೆಂದಿಗಿಂತಲೂ ಹೆಚ್ಚು ಸ್ಪಷ್ಟಗೊಳ್ಳತೊಡಗಿದೆ. ಮಬ್‌ಹೂಹ್‌ರ ಹತ್ಯೆಗೈದವರ ಪೈಕಿ 12 ಮಂದಿ ಇಂಗ್ಲೆಂಡಿನ ಪಾಸ್‌ಪೋರ್ಟ್ ಹೊಂದಿದ್ದರೆಂದು ಮೇಲ್ನೋಟಕ್ಕೆ ತಿಳಿದು ಬಂದಿತ್ತು. ಈಗ ಬ್ರಿಟನ್ನಿನ ಅಧಿಕಾರಿಗಳು ಆ ಕುರಿತು ಕೂಲಂಕುಶ ತನಿಖೆ ನಡೆಸಿದ್ದು, ಇಸ್ರೇಲಿನ ಈ ಬೆನ್‌ಗ್ಯೂರಿಯನ್ ವಿಮಾನ ನಿಲ್ದಾಣದ ಮೂಲಕವೇ ಬ್ರಿಟಿಷ್ ನಾಗರಿಕರ ಪಾಸ್‌ಪೋರ್ಟ್‌ಗಳನ್ನು ನಕಲುಗೊಳಿಸಿದ್ದೆಂದು ಬಯಲಿಗೆಳೆದಿದೆ. ಬ್ರಿಟನ್ನಿನ ಸೀರಿಯಸ್ ಆರ್ಗನೈಝ್ಡ್ ಕ್ರೈಮ್ ಏಜೆನ್ಸಿ (SOCA) ಇದನ್ನು ಬಹಿರಂಗಪಡಿಸಿದೆ.

ತನ್ನ ಮಿತ್ರ ರಾಷ್ಟ್ರಕ್ಕೇ ಈ ರೀತಿಯ ದ್ರೋಹ ವೆಸಗುವ ಇಸ್ರೇಲಿನ ಚಾಳಿಯು ಇಂದು ನಿನ್ನೆಯದಲ್ಲ. 1986 ರಲ್ಲಿ ಎಂಟು ಬ್ರಿಟಿಷ್ ಪಾಸ್‌ಪೋರ್ಟ್‌ಗಳು ಇಸ್ರೇಲ್ ರಾಯಭಾರಿ ಕಚೇರಿಯ ಲಕೋಟೆಯಲ್ಲಿದ್ದ ಸ್ಥಿತಿಯಲ್ಲಿ ವೆಸ್ಟ್ ಜರ್ಮನ್ ಟೆಲಿಫೋನ್ ಬಾಕ್ಸ್‌ನಲ್ಲಿ ಪತ್ತೆಯಾಗಿತ್ತು. ಇದು ಮೊಸಾದ್‌ನ ಓರ್ವ ಗುಪ್ತಚರನು ಮರೆತು ಬಿಟ್ಟು ಹೋಗಿದ್ದಾಗಿತ್ತು. ಈ ಬಾರಿಯ ಕೃತ್ಯದ ವರದಿಯನ್ನು ಬ್ರಿಟಿಷ್ ವಿದೇಶಾಂಗ ಕಾರ್ಯ ದರ್ಶಿ ಡೇವಿಡ್ ಮಿಲಿಬಾಂಡ್‌ರಿಗೆ 'ಸೋಕಾ' ನೀಡಿದ್ದು, ಮುಂದಿನ ತೀರ್ಮಾನವನ್ನು ಸರಕಾರಕ್ಕೆ ಬಿಡಲಾಗಿದೆ.

ವಸ್ತುತಃ ಬ್ರಿಟಿಷ್ ಪಾಸ್‌ಪೋರ್ಟ್‌ನ ವಿನ್ಯಾಸವು ಎಷ್ಟು ಕ್ಲಿಷ್ಟಕರವಾಗಿದೆಯೆಂದರೆ, ಅದನ್ನು ನಕಲುಗೊಳಿಸಿದರೆ, ಕೂಡಲೇ ಪತ್ತೆ ಹಚ್ಚಬಹುದಾಗಿದೆ. ಇಸ್ರೇಲ್ ನಡೆಸಿದ ಈ 'ಸೋಕಾ' ಅಷ್ಟು ಬೇಗ ಪತ್ತೆ ಹಚ್ಚಲು ಅದುವೇ ಪ್ರಮುಖ ಕಾರಣವಾಗಿದೆ. ಆದರೆ ಇಸ್ರೇಲ್ ಬಹಳ ಚಾಣಾಕ್ಷತೆಯೊಂದಿಗೆ ಆ ನಕಲಿ ಪಾಸ್‌ಪೋರ್ಟ್‌ಗಳನ್ನು ಮಾಡಿದೆಯೆಂದೂ 'ಸೋಕಾ' ಅಧಿಕಾರಿಗಳು ಮೂಗಿಗೆ ಬೆರಳಿಡುತ್ತಿದ್ದಾರೆ. ಇದುವೇ ತಾನೇ ಯಹೂದಿಯರ ವಿಶೇಷತೆ. ಅನ್ಯರಾಷ್ಟ್ರಗಳಲ್ಲಿ ಕ್ಷೋಭೆಯನ್ನುಂಟು ಮಾಡಿ, ಅಲ್ಲಿ ರಾಜಕೀಯ ಅಸ್ಥಿರತೆಯನ್ನುಂಟು ಮಾಡುವುದು, ಸರಕಾರ ಬೀಳಿಸುವುದು, ಎಲ್ಲವೂ ಮೊಸಾದ್ ಮತ್ತು ಅಮೇರಿಕದ ಸಿ.ಐ.ಎ.ಗಳ ಮುಖ್ಯ ಕಸುಬಾಗಿರುತ್ತದೆ. ಜಗತ್ತು ಕಂಡಿರುವ ಸತ್ಯ ಇದು.

ಆದರೂ ಒಂದು ರಾಷ್ಟ್ರದ ರಾಜಕೀಯ ನೇತಾರನ ಹತ್ಯೆಗೆ ಜಾಗತಿಕ ಮಾಧ್ಯಮಗಳಲ್ಲಿ ಸಲ್ಲತಕ್ಕ ಪ್ರಾಮುಖ್ಯತೆ ಸಿಗದಿರಲು ಕಾರಣವೇನು ಎಂಬುದನ್ನು ಇಲ್ಲಿ ಅವಲೋಕಿಸಬೇಕಾದ ಅಗತ್ಯವಿದೆ. ಮಬ್‌ಹೂಹ್‌ರ ಹತ್ಯೆಯನ್ನು ಒಂದು ಸಿನೆಮಾ ರಿವ್ಯೂನಂತೆ ಮಾಧ್ಯಮಗಳು ತೋರಿಸಿ ಮರೆತುಬಿಟ್ಟವು. ಇದೇ ಘಟನೆ ತದ್ವಿರುದ್ದವಾಗಿದ್ದರೆ ಏನಾಗುತ್ತಿತ್ತು? ಎಂಬುದನ್ನು ಪ್ರತ್ಯೇಕವಾಗಿ ಹೇಳ ಬೇಕಾಗಿಲ್ಲತಾನೆ. ಈಗಾಗಲೇ ಇಸ್ರೇಲ್‌ನ ದೌರ್ಜನ್ಯದಿಂದ ನಲುಗುತ್ತಿರುವ ಫೆಲೆಸ್ತೀನ್ ಧೂಳೀಪಟವಾಗುತ್ತಿತ್ತು. ಅದರ ಮೇಲೆ ಅಮೇರಿಕ-ಇಸ್ರೇಲ್ ಸೇರಿ (ಬ್ರಿಟನ್ ಕೂಡಾ ಸೇರಿ) ಹರಿದು ಮುಕ್ಕುತ್ತಿದ್ದುವು. ನಂತರ ಜಾಗತಿಕ ನ್ಯಾಯದ ಹೆಸರಲ್ಲಿ ಅದೊಂದು ಅಮೇರಿಕನ್ ವಸಾಹತು ಆಗಿಯೋ ಬೃಹತ್ ಇಸ್ರೇಲ್ ರಾಷ್ಟ್ರವಾಗಿಯೋ ಮನ್ನಣೆಯೂ ಪಡೆಯುತ್ತಿತ್ತು. ಅರಬ್ ದೇಶಗಳ ನೇತಾರರು ಕೆಲವಾರು ಮೀಟಿಂಗ್‌ಗಳನ್ನು ನಡೆಸಿ ಅವುಗಳನ್ನು ತೀರಾ ಲಘುವಾದ ಧಾಟಿಯಲ್ಲಿ ಖಂಡಿಸುತ್ತಿದ್ದುವು. ಜಗತ್ತು ಮತ್ತೊಂದು ವಿಯೆಟ್ನಾಮನ್ನೋ ಅಫಘಾನನ್ನೋ ಇರಾಕನ್ನೋ ಅಥವಾ ಅವುಗಳಿಗಿಂತ ಭೀಕರವಾದ ಇನ್ನೇನನ್ನೋ ಕಂಡು ಮೂಕವಾಗಿ ರೋಧಿಸುತ್ತಿತ್ತು.

ಆದರೆ ಇಲ್ಲಿ ಅಪರಾಧಿ ಸ್ಥಾನದಲ್ಲಿರುವುದು ಇಸ್ರೇಲ್, ಪ್ರತಿವಾದಿಯಾಗಿರುವುದು ಬಹುತೇಕ ಮೂಕವಾಗಿರುವ ಫೆಲೆಸ್ತೀನ್. ಹಾಗಾಗಿ ಎಲ್ಲವೂ ಸುಖಾಂತ್ಯ. ಮಹ್ಮೂದ್ ಅಲ್ ಮಬ್‌ಹೂಹ್‌ರ ಹತ್ಯೆಯೂ ಇತರ ಹತ್ಯೆಗಳಂತೆ ಇತಿಹಾಸದ ಪುಟಗಳಲ್ಲಿ ಸೇರಿ ಮರೆಯಾಗಬಹುದು. ಏಕೆಂದರೆ ತನ್ನ ರಾಷ್ಟ್ರದ ನಾಗರಿಕರ ಪಾಸ್‌ಪೋರ್ಟ್‌ಗಳನ್ನು ನಕಲುಗೊಳಿಸಿದ್ದು ತಿಳಿದೂ ಕೇವಲ ಖಂಡನೆಯಲ್ಲೇ ಕೋಪವನ್ನು ವ್ಯಕ್ತಪಡಿಸಿರುವ ಬ್ರಿಟನ್, ಮುಂದೆ ಇಸ್ರೇಲ್ ವಿರುದ್ಧ ಯಾವುದೇ ಕಠಿಣ ಕಾರ್ಯಾಚರಣೆ ನಡೆಸುವ ಯಾವುದೇ ಲಕ್ಷಣ ಗೋಚರಿಸುತ್ತಿಲ್ಲ. ತದ್ವಿರುದ್ಧವಾಗಿ ಬೇರಾವುದೋ ಕಾರ್ಯಾಚರಣೆಗೆ ಬ್ರಿಟನ್, ಅಮೇರಿಕ-ಇಸ್ರೇಲ್‌ಗಳಿಗೆ ಸಾಥ್ ನೀಡುವ ಸಾಧ್ಯತೆಯೇ ಹೆಚ್ಚು.

# ನೇತನ್ಯಾಹುರ ‘ಕೆನ್ನೆಗೆ ಹೊಡೆದ’ ಒಬಾಮಾ

ಎ. ಆರ್. ಫಾರೂಕ್



ಫೆಲೆಸ್ತೀನ್‌ನ ಕುರಿತಾದ ಇಸ್ರೇಲಿನ ನೀತಿಯು ಅಫಘಾನ್ ಮತ್ತು ಇರಾಕ್‌ನಲ್ಲಿ ಅಮೇರಿಕದ ಸೈನಿಕರನ್ನು ಅಪಾಯದಲ್ಲಿ ಸಿಲುಕಿಸಿದೆಯೆಂಬುದು ಅಮೇರಿಕನ್ ಸೇನಾ ನಾಯಕರು ಮತ್ತು ಅಮೇರಿಕಾದ ಉಪಾಧ್ಯಕ್ಷರ ಅಭಿಪ್ರಾಯವಾಗಿದೆ. ಈ ನಿಟ್ಟಿನಲ್ಲಿ ಒಬಾಮಾ ಆಡಳಿತ ಅಡಕತ್ತರಿಯಲ್ಲಿ ಸಿಲುಕಿದೆ. ಇಸ್ರೇಲಿಗೆ ಅಸಮಾಧಾನವಾಗುವಂತೆ ನಡೆದುಕೊಂಡರೆ ಅಮೇರಿಕದ ಆಳದಲ್ಲಿ ನೆಲೆಯೂರಿದ ಝಿಯೋನಿಸ್ಟ್ ಲಾಬಿ ಅಮೇರಿಕವನ್ನೇ ಬುಡಮೇಲುಗೊಳಿಸಬಹುದು. ಇಸ್ರೇಲಿನ ಕುರಿತು ಇಂದಿನ ಮನೋಭಾವವನ್ನು ಮುಂದುವರಿಸಿದರೆ ಅರಬ್ ರಾಷ್ಟ್ರಗಳು ಟಾಟಾ ಹೇಳಬಹುದು. ಪಶ್ಚಿಮೇಶ್ಯಾದಲ್ಲಿ ಬರಸಿಡಿಲಿನಂತೆ ಅಬ್ಬರಿಸುತ್ತಿರುವ ಇರಾನ್ ಇನ್ನಷ್ಟು ಸುದೃಢವಾಗಬಹುದು.

‘ಫಾರಿನ್’ ಪಾಲಿಸಿ (Foreign policy) ಎಂಬ ಮಾಸಿಕವು ಜನವರಿಯಲ್ಲಿ ಪ್ರಕಟಿಸಿದ ವರದಿಯಲ್ಲಿ ಇಸ್ರೇಲ್-ಫೆಲೆಸ್ತೀನ್ ಸಮಸ್ಯೆಯನ್ನು ಪರಿಹರಿಸಲು ಅಮೇರಿಕ ಇಸ್ರೇಲಿನ ಮೇಲೆ ಒತ್ತಡ ಹೇರಲು ವಿಫಲವಾಗಿದೆ ಎಂಬ ಅಸಮಧಾನ ಅರಬ್ ರಾಷ್ಟ್ರಗಳಲ್ಲಿವೆ ಎಂಬುದನ್ನು ಎತ್ತಿ ತೋರಿಸಲಾಗಿದೆ. ಅರಬ್ ರಾಷ್ಟ್ರಗಳ ಭಾವನೆಯನ್ನು ಅಮೇರಿಕದ ಅಧಿಕಾರಿಗಳಿಗೆ ತಿಳಿಸುವುದಕ್ಕೆ ಇಬ್ಬರು ಸೇನಾಧಿಕಾರಿಗಳನ್ನು ನಿಯೋಜಿಸಲಾಗಿತ್ತು ಎಂದು ವರದಿಯಾಗಿದೆ.

ಫೆಲೆಸ್ತೀನ್-ಇಸ್ರೇಲ್ ಸಮಸ್ಯೆ ಈಗ ಹೊಸ ಹೊರಳಿಕೆಯನ್ನು ಪಡೆದುಕೊಂಡಿರುವುದನ್ನು ಈ ಘಟನೆಗಳು ಬಹಿರಂಗಪಡಿಸುತ್ತಿವೆ. ಅರಬ್ ರಾಷ್ಟ್ರಗಳ ಆಡಳಿತಾಧಿಕಾರಿಗಳಿಗೆ ಅಮೇರಿಕ ಪ್ರಾಮಾಣಿಕವಾಗಿಲ್ಲ ಎಂದನ್ನಿಸುತ್ತಿರುವುದೇ ಒಂದು ವಿಶೇಷ. ಅಮೇರಿಕ-ಇಸ್ರೇಲ್ ಪಕ್ಷಪಾತಿಯೆಂಬ ವಿಚಾರವನ್ನು ಜಗತ್ತೇ ಅಂಗೀಕರಿಸಿದ್ದರೂ ಸ್ವಾರ್ಥದ ಮಡುವಿನಲ್ಲಿ ಕಳೆದು ಹೋಗಿದ್ದ ಅರಬ್ ಆಡಳಿತಗಾರರು ಒಪ್ಪಿರಲಿಲ್ಲ. ಹಾಗಾಗಿ ಹೊಸ ಬೆಳವಣಿಗೆ ಈ ಆಡಳಿತಗಾರರಲ್ಲಿ ಕಳೆದು ಹೋಗಿದ್ದ ವಿವೇಕವನ್ನು ಅರಳಿಸಿದೆ ಎಂಬುದನ್ನು ಸೂಚಿಸುತ್ತದೆ.

ಇಸ್ರೇಲೆಂಬ ಏಕೈಕ ತಂಟೆಕೋರ ರಾಷ್ಟ್ರಕ್ಕಾಗಿ ಡಝುನ್‌ಗಟ್ಟಲೆ ಅರಬ್ ರಾಷ್ಟ್ರಗಳನ್ನು ಎದುರು ಹಾಕಿಕೊಳ್ಳುವುದು ಒಬಾಮಾರ ಆತ್ಮಸಾಕ್ಷಿಗೆ ಸಹ್ಯವಾಗಿಲ್ಲವೆಂಬಂತಹ ಬೆಳವಣಿಗೆ ಇತ್ತೀಚೆಗೆ ನಡೆಯಿತು. ಇಸ್ರೇಲಿನ ವರ್ತನೆಯಲ್ಲಿ ತನಗಿರುವ ಅಸಮಾಧಾನವನ್ನು ಬಹಿರಂಗವಾಗಿಯೇ ಒಬಾಮಾ ಪ್ರದರ್ಶಿಸಿದ್ದಾರೆ. ಅವರು ಇಸ್ರೇಲ್ ಪ್ರಧಾನಮಂತ್ರಿ ನೆತನ್ಯಾಹುರ ನಡುವಿನ ಮಾತುಕತೆಯಿಂದ ಹೊರನಡೆದರು. ಪಶ್ಚಿಮೇಶ್ಯನ್ ಸಮಸ್ಯೆ ಪರಿಹಾರಕ್ಕೆ ಸಂಬಂಧಿಸಿ ನಡೆಯುತ್ತಿದ್ದ ಚರ್ಚೆಯಿಂದ ಹೊರಹೋಗಲು ಒಬಾಮಾ ನೀಡಿದ ನೆಪ ಬಹಳ ಕ್ಷುಲ್ಲಕವಾಗಿತ್ತು. ತನಗೂ ತನ್ನ ಪತ್ನಿ ಮಕ್ಕಳೊಂದಿಗೆ ಕೂತು ಊಟ ಮಾಡಬೇಕಾಗಿದೆ. ಅಂದರೆ ನೆತನ್ಯಾಹುರೊಂದಿಗೆ ವ್ಯರ್ಥ ಚರ್ಚೆ ನಡೆಸುವುದಕ್ಕಿಂತ ಹೆಂಡತಿ ಮಕ್ಕಳೊಂದಿಗೆ ಕೂತು ಉಪಹಾರ ಸೇವಿಸುವುದು ಹೆಚ್ಚು ಪ್ರಾಮುಖ್ಯ ವಿಚಾರವೆಂಬ ಸಂದೇಶವನ್ನು ನೆತನ್ಯಾಹುರ ಕಪಾಳಕ್ಕೆ ಹೊಡೆದಂತೆ ಒಬಾಮಾ ಸಾರಿದ್ದಾರೆ. ಮಾತ್ರವಲ್ಲ, ಹೀಗಾಗಿ ವೈಟ್‌ಹೌಸಿನ ರೂಸ್‌ವೆಲ್ಟ್ ಹಾಲ್‌ನಲ್ಲಿ ನೆತನ್ಯಾಹು ಒಬಾಮರಿಗಾಗಿ ಗಂಟೆಗಳ ಕಾಲ ಕಾಯುತ್ತಾ ಬೆವರಿಳಿಸಿದ್ದೇ ಬಂತು.

ಈ ಘಟನೆಯಲ್ಲಿ ಅರಬ್ ಆಡಳಿತಗಾರರು ಹೆಚ್ಚಿನ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ. ಹೇಳಿದ್ದು ಕೇಳದವನಿಗೆ ಯಾವ ಮದ್ದು ಅರೆಯಬೇಕೆಂದು ಒಬಾಮಾ ತೋರಿಸಿಕೊಟ್ಟಿದ್ದಾರೆಂದು ಅರಬ್ ವಲಯಗಳಲ್ಲಿ ಜನಜನಿತವಾಗಿದೆ. ಆದರೆ ಇರಾಕ್ ಮತ್ತು ಅಫಘಾನಿಸ್ತಾನದಲ್ಲಿರುವ ತನ್ನ ಸೈನಿಕರ ರಕ್ಷಣಾರ್ಥ ಅವರು ಇಂತಹ ನಿರ್ಧಾರಕ್ಕೆ ಬಂದಿದ್ದಾರೆ ಎಂಬುದೇ ಹೆಚ್ಚು ಸರಿಯಾಗಿದೆ. ಹಾಗಾಗಿ ವೈಟ್‌ಹೌಸ್ ಕೂಡಾ ತನ್ನ ಅಧ್ಯಕ್ಷರ ನಿಲುವನ್ನು ಸಮರ್ಥಿಸುವುದು ಅನಿವಾರ್ಯವಾಗಲಿದೆ. ರಿಪಬ್ಲಿಕನ್ನರಿಗೂ ಒಬಾಮಾರನ್ನು ಟೀಕಿಸುವ ಧೈರ್ಯವಿರಲಾರದು.

ನೇತನ್ಯಾಹು-ಒಬಾಮಾ ಚರ್ಚೆಯ ವೇಳೆ ಮಾಧ್ಯಮಗಳನ್ನು ಹೊರಗಿರಿಸಲಾಗಿತ್ತು. ಆದರೆ ಈ ಮಾತುಕತೆಯ ಹಿನ್ನೆಲೆಯ ಕಥೆಗಳನ್ನು ಬ್ರಿಟನ್‌ನ ಟೈಮ್ ವಾರಪತ್ರಿಕೆ ಬಹಿರಂಗಪಡಿಸಿದೆ. ಪಶ್ಚಿಮೇಶ್ಯನ್ ಶಾಂತಿಯ ಮಾತುಕತೆಗಳು ಫಲಪ್ರದವಾಗಿದೆ ಎಂಬ ಪ್ರಚಾರ ಬಿರುಸಿನಲ್ಲಿತ್ತು. ಆದರೆ ಅಂತಿಮವಾಗಿ ಒಬಾಮಾ ಚರ್ಚೆಯನ್ನೇ ಬಹಿಷ್ಕರಿಸಿದ ಘಟನೆ ಹೊರ ಬಿತ್ತು. ಪೂರ್ವ ಜೆರುಸಲೇಮ್‌ನಲ್ಲಿ ವಸತಿ ನಿರ್ಮಿಸುವ ಇಸ್ರೇಲಿನ ಹವಣಿಕೆ ಒಬಾಮಾರನ್ನು ಕೆರಳಿಸಿದೆಯೆಂದು ಪ್ರಚಾರ ನಡೆಸಲಾಗಿದೆ. ನೆತನ್ಯಾಹುವಿನೊಂದಿಗೆ ಚರ್ಚೆ ಆರಂಭಗೊಂಡಾಗ ಪೂರ್ವ ಜೆರುಸಲೇಮ್‌ನಲ್ಲಿ ವಸತಿ ನಿರ್ಮಾಣಕ್ಕೆ ಅನುಮತಿ ನೀಡಿದ ಇಸ್ರೇಲ್‌ನ ಘೋಷಣೆ ಹೊರಬಿದ್ದಿತ್ತು. ಒಂದರ್ಥದಲ್ಲಿ ಇದು ಅಮೇರಿಕನ್ ಅಧ್ಯಕ್ಷರನ್ನು ಅಪಮಾನಿಸಿದ್ದಕ್ಕೂ ಸಮಾನವಾದ ಇಸ್ರೇಲಿನ ವರ್ತನೆಯಾಗಿದೆ. ಆದ್ದರಿಂದ ಜಂಟಿ ಸಮಾಲೋಚನೆಯ ಜಂಟಿ ಫೋಟೋ ತೆಗೆಯುವುದಕ್ಕೂ ಒಬಾಮಾ ಸಿದ್ಧರಾಗದೇ ನೆತನ್ಯಾಹುರನ್ನು ನೇರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ. ಈ ಬೆಳವಣಿಗೆಯಲ್ಲಿ ಅರಬ್ ರಾಷ್ಟ್ರಗಳು ಮೈಮರೆತು ತನ್ನತನವನ್ನು ಸೋರಿ ಬಿಡುತ್ತವೆ ಎಂಬುದನ್ನು ಕಾಲವೇ ಹೇಳಬೇಕು. ಫೆಲೆಸ್ತೀನ್-ಇಸ್ರೇಲ್ ಬಿಕ್ಕಟ್ಟಿನ ವಿಚಾರದಲ್ಲಿ ಖಂಡಿತಾ ಇದೊಂದು ಹೊಸ ಬೆಳವಣಿಗೆಯೇ ಆಗಿದೆ.



# ಪಾರ್ಲಿಮೆಂಟಿರುವ ದೆಹಲಿಯಲ್ಲೇ ಹೀಗಿದ್ದರೆ...?

ಯೂಸುಫ್ ಮನ್ನಾ

**ಸ**ಮಸ್ಯೆ ಪರಿಹಾರದ ಬದಲು ಸಮಸ್ಯೆಯಿಂದ ಜನರ ಗಮನವನ್ನು ದೂರಸರಿಸುವ ಪರಂಪರೆ ಪ್ರಾಚೀನವಾದದ್ದು. ಒಂದೆಡೆ ದೇಶದಾದ್ಯಂತ ಮಹಿಳಾ ವಿರೋಧಿ ಅಪರಾಧಗಳು ಅತಿ ವೇಗದಿಂದ ಹೆಚ್ಚುತ್ತಿದೆ ಎಂಬ ಸತ್ಯವನ್ನು ವರದಿಗಳು ವಿವರಿಸುತ್ತವೆ. ಸರಕಾರವೇನೋ ಮೀಸಲಾತಿಯಿಂದ ಅವರ ಉತ್ಥಾನಕ್ಕೆ ಹೊರಟಿದೆ. ಆದರೆ ಮಹಿಳೆಯರಿಗೆ ಚುನಾವಣೆ, ಸಂಸದೆ, ಮತ್ತು ನಾಯಕರೆಂಬ ನೆಲೆಯಲ್ಲಿ ಗುರುತಿಸಿ ಕೊಂಡೇ. ಸಮಾಜದಲ್ಲಿ ವ್ಯಾಪಿಸಿಕೊಂಡಿರುವ ಕಂದಾಚಾರ ಮತ್ತು ಅಂತಹ ಮಾನಸಿಕತೆಯನ್ನು ಬದಲಿಸಲು ಸಾಧ್ಯವಿದೆಯೇ? ಮಾತ್ರವಲ್ಲ, ಈ ಮೀಸಲಾತಿಯ ಲಾಭ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ಮಹಿಳೆಯರಿಗೂ ಸಿಗಬಹುದೇ?

ಉತ್ತರ ಪ್ರದೇಶ ಮತ್ತು ದೆಹಲಿಯಲ್ಲಿ ಮಹಿಳೆಯರೇ ಮುಖ್ಯಮಂತ್ರಿಗಳಾಗಿದ್ದಾರೆ. ಹಾಗಿದ್ದೂ ಅಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುವ ಸಂಖ್ಯೆಯಲ್ಲಿ ಕಡಿಮೆಯಾಗಿಲ್ಲ. ಮಹಿಳೆಯರನ್ನು ಚುಡಾಯಿಸುವುದು, ದುಷ್ಕರ್ಮ, ದೈಹಿಕ ಪೀಡನೆ ಪ್ರಕರಣಗಳಲ್ಲಿ ರಾಜಧಾನಿ ದೆಹಲಿ ಎಲ್ಲ ಕಡೆಗಿಂತಲೂ ಹೆಚ್ಚು ಅಸುರಕ್ಷಿತ ಸ್ಥಳವೆಂದು ಗುರುತಿಸಿಕೊಳ್ಳುತ್ತಿದೆ.

ಸಮಾಜದಲ್ಲಿ ಗೌರವ, ಸಮಾನತೆ ನೀಡುವ ಸ್ಥಿತಿಯನ್ನು ಖಚಿತಗೊಳಿಸುವುದು ತುಂಬ ಮುಖ್ಯವಾದದ್ದು. ಹಾಗಾಗಿ ಅಂಥ ಕಾನೂನಿಗೆ ಇನ್ನಷ್ಟು ಶಕ್ತಿ ತುಂಬಬೇಕಾಗಿದೆ. ಯಾಕೆಂದರೆ ಮಹಿಳೆಯರ ಸ್ಥಿತಿಯಲ್ಲಿ ನಿಷ್ಕ್ರಿಯ ಕಾನೂನಿಗೂ ಒಂದು ಪಾತ್ರವಿದೆ. ಸರಿಯಾಗಿ ಹೇಳಿದರೆ ಈ ನಿಟ್ಟಿನಲ್ಲಿ ಅದಕ್ಕೆ ಹೆಚ್ಚು ಹೊಣೆಗಾರಿಕೆಯಿದೆ.

ದೇಶದ ರಾಜಧಾನಿ ದೆಹಲಿಯ ಕಾನೂನು ವ್ಯವಸ್ಥೆ ಇತರ ರಾಜ್ಯಗಳಿಗೆ ಹೋಲಿಸಿದರೆ ಹೆಚ್ಚು ಜಾಗ್ರತೆ ಎಂದು ತಿಳಿಯಲ್ಪಡುತ್ತದೆ. ಆದರೆ ಗುರಿಯಾಗಿದ್ದಾರೆ. ಪ್ರತಿದಿವಸ 191 ಮಹಿಳೆಯರು ಅತ್ಯಾಚಾರಕ್ಕೆ, ಲೈಂಗಿಕ ಶೋಷಣೆಗೆ ಗುರಿಯಾಗುತ್ತಾರೆ ಅಥವಾ ಚುಡಾಯಿಸಲ್ಪಡುತ್ತಾರೆ. ರಾಜಧಾನಿ ದೆಹಲಿಯ ಹತ್ತಿರದ ಪಟ್ಟಣದ ಸ್ಥಿತಿಯೂ ಭಿನ್ನವಾಗಿಲ್ಲ. ಗೃಹ ಸಚಿವಾಲಯದ ಹೇಳಿಕೆಯಂತೆ 2006ರಲ್ಲಿ 19,348 ಮಹಿಳೆಯರ ಮೇಲೆ ದುಷ್ಕೃತ್ಯದ ಘಟನೆ ನಡೆದಿದೆ. 2007ರಲ್ಲಿ 20,737 ಮತ್ತು 2008ರಲ್ಲಿ 21,467 ಇಂತಹ



ಝಾರ್ಖಂಡಿನಿಂದ ಮನೆಕೆಲಸಕ್ಕೆಂದು ದೆಹಲಿಗೆ ಬಂದ ಅನಿತಾಳನ್ನು ಪ್ಲೇಸ್‌ಮೆಂಟ್ ಏಜೆಂಟ್ ಕೂಡಿಹಾಕಿ ಅತ್ಯಾಚಾರ ಮಾಡಿದ. ಅಸ್ಸಾಮಿನ ಎಲಿಜಬೆತ್ ಳನ್ನು ಕೆಲಸ ಮಾಡುವ ಮನೆಯವರು ಹೊರಗೆ ಹೋಗಲು ಬಿಡುತ್ತಿರಲಿಲ್ಲ. ಗಾಣದೆತ್ತಿನಂತೆ ದುಡಿಸಿ, ಹೊಟ್ಟೆಗೆ ಸರಿಯಾಗಿ ಅನ್ನವನ್ನು ಕೊಡುತ್ತಿರಲಿಲ್ಲ. ಒಂದು ದಿವಸ ಸಮಯ ಸಾಧಿಸಿ ಹೇಗೋ ಅಲ್ಲಿಂದ ತಪ್ಪಿಸಿಕೊಂಡಳು. ಅನಿತಾ ತಿರ್ಕಿಯ ಕಥೆಯು ಇಂಥದ್ದೇ. ಅವಳ ಮನೆ ಮಾಲಿಕ ಹೆದರಿಸಿ $1\frac{1}{2}$ ವರ್ಷಗಳ ವರೆಗೂ ಅತ್ಯಾಚಾರ ನಡೆಸುತ್ತಿದ್ದ. ಇದನ್ನು ಅವಳು ಬಹಿರಂಗಪಡಿಸಿದಾಗ ಪತಿ ಅವಳನ್ನೇ ತೊರೆದು ಹೋದನು. ಒಂದು ಸರ್ವೇಯ ಪ್ರಕಾರ ಮನೆಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಮಾಸಿಕ $2\frac{1}{2}$ ದಿನ ರಜೆ ಸಿಗುತ್ತದೆ ಮತ್ತು ಶೇ. 40 ಮಹಿಳಾ ಕೆಲಸಗಾರ್ತಿಯರು ರೋಗಗ್ರಸ್ಥರಾದರೆ ಅವರ ಸಂಬಳ ಕಡಿತಗೊಳಿಸಲಾಗುತ್ತದೆ.

ಇಂದು ಸಿನೆಮಾ ನಟ ಶೈನಿ ಅಹುಜಾ ಮತ್ತು ಮಾಜಿ ಪೊಲೀಸ್ ಅಧಿಕಾರಿ ರಾಠೋಡ್ ಮಹಿಳಾ ದೌರ್ಜನ್ಯದ ಆರೋಪವನ್ನು ಎದುರಿಸುತ್ತಿದ್ದಾರೆ. ರಾಜಧಾನಿಯ ನೋಯಿಡಾದಲ್ಲಿ, ಹಾಜಿಯಾಬಾದ್‌ನಲ್ಲಿ, ಗುರ್‌ಗಾಂವ್‌ನಲ್ಲಿ 2010ರ ಮೊದಲ 45 ದಿನಗಳಲ್ಲಿ ಬಲತ್ಕಾರ ಮತ್ತು

ಮಹಿಳಾ ಸಂರಕ್ಷಣೆಗೆ ತುಂಬ ಕಾನೂನುಗಳಿವೆ. ಆದರೂ ಕೂಲಿ, ಮನೆಕೆಲಸಗಾರ್ತಿ, ಗೃಹಿಣಿ, ಮಹಿಳಾ ಉದ್ಯೋಗಿಗಳೆಲ್ಲರ ಮೇಲೂ ಅತ್ಯಾಚಾರಗಳು ನಡೆದಿವೆ. ಸಾರ್ವಜನಿಕ ಸ್ಥಳಗಳಲ್ಲೇ ಅವರನ್ನು ಚುಡಾಯಿಸಲಾಗುತ್ತಿದೆ. ಆಗಲೆಲ್ಲ ಕಾನೂನಿಗೆ ತನ್ನ ಕೆಲಸವನ್ನು ಮಾಡಲು ಸಾಧ್ಯವಾಗಿಲ್ಲ. ಪೊಲೀಸ್‌ಠಾಣೆ ಗಳಲ್ಲೂ ಮಹಿಳೆಯರು ಸುರಕ್ಷಿತೆ ಎನ್ನುವಂತಿಲ್ಲ. ಇಂತಹ ಸ್ಥಿತಿಯಲ್ಲಿ ಮಹಿಳಾ ಮೀಸಲಾತಿ ಕಾನೂನು ಏನು ಮಾಡೀತು? ಅದರಿಂದ ಮಹಿಳೆಯರ ರಾಜಕೀಕರಣವಾಗಬಹುದು. ಆಡಳಿತ ಪಕ್ಷಗಳಿಗೆ ಲಾಭವಾಗಬಹುದು. ರಾಜ ಕೀಯ ಮೈದಾನದಲ್ಲಿ ಅವಳು ಸಕ್ರಿಯ ಪಾತ್ರ ವಹಿಸಬಹುದು. ಅವಳ ಪಾಲ್ಗೊಳ್ಳುವಿಕೆ ಹೆಚ್ಚ ಬಹುದು. ಆದರೆ ಕೌಟುಂಬಿಕ ಸ್ತರದಲ್ಲಿ ಒಬ್ಬಳು ತಾಯಿ, ಸೊಸೆ ಮತ್ತು ಮಗಳ ರೂಪ ದಲ್ಲಿ ಅವಳ ಯೋಗ್ಯತೆ ಹೇಗಿರಬಹುದು?

ಮಹಿಳೆಗೆ ರಾಜಕೀಯ ರಂಗದಲ್ಲಿ ಮೀಸಲಾತಿ ನೀಡುವ ವಿಚಾರಕ್ಕಿಂತಲೂ ಅವಳಿಗೆ ಅಲ್ಲಿಯೇ ಮಹಿಳಾ ವಿರೋಧಿ ಘಟನೆಗಳು ಚರಮಸೀಮೆಗೆ ತಲುಪಿವೆ.

2009ರ ಅಂಕೆ ಸಂಖ್ಯೆಯಂತೆ ರಾಜಧಾನಿಯಲ್ಲಿ 452 ಅತ್ಯಾಚಾರ ಘಟನೆಗಳು ನಡೆದಿವೆ. ಅದರ ಹೊರತು 532 ಮಹಿಳಾ ಚುಡಾವಣಾ ಘಟನೆಗಳು ನಡೆದಿವೆ, 94 ವರದಕ್ಷಿಣೆ ಹತ್ಯೆ ಪ್ರಕರಣಗಳು ನಡೆದಿವೆ. 1,892 ಗೃಹ ದೌರ್ಜನ್ಯ ನಡೆದಿದೆ. 402 ಘಟನೆಗಳಲ್ಲಿ ದೈಹಿಕ ಹಲ್ಲೆ ಮತ್ತು 121 ಮಹಿಳಾ ಅಪಹರಣ ಘಟನೆಗಳು ನಡೆದಿವೆ. 3,916 ನಾಪತ್ತೆ ಪ್ರಕರಣಗಳು ನಡೆದಿವೆ. ಈ ಅಂಕೆ ಸಂಖ್ಯೆಯನ್ನು ಮಹಿಳಾ ಸಹಾಯ ವಾಣಿಯಿಂದ ಪಡೆಯಲಾಗಿದೆ. ಬಹಳಷ್ಟು ಪ್ರಕರಣಗಳು ಕೌಟುಂಬಿಕ ಮರ್ಯಾದೆ ಮತ್ತಿತರ ಕಾರಣಗಳಿಂದಾಗಿ ಬಹಿರಂಗವಾಗುವುದೇ ಇಲ್ಲ.

2006ರಿಂದ 2008ರ ವರೆಗೆ ದೇಶದಲ್ಲಿ ನಡೆದ ಘಟನೆಗಳನ್ನು ಅವಲೋಕಿಸಿದರೆ ಭಯ ವಿಹ್ವಲಗೊಳ್ಳಬೇಕಾಗುತ್ತದೆ. ಅಂಕೆ ಸಂಖ್ಯೆಯ ಪ್ರಕಾರ ಈ ಮೂರು ವರ್ಷಗಳಲ್ಲಿ 2 ಲಕ್ಷ ಮಹಿಳೆಯರು ಬಲಾತ್ಕಾರ, ಲೈಂಗಿಕ ಶೋಷಣೆಗೆ ಪ್ರಕರಣಗಳು ದಾಖಲುಗೊಂಡಿವೆ. ಅಂದರೆ ಈ ಮೂರು ವರ್ಷಗಳಲ್ಲಿ 61,552 ಘಟನೆಗಳು ನಡೆದಿವೆ ಎಂದಾಯಿತು. ಆಫೀಸ್‌ಗಳಿಗೆ ಬಸ್ಸು, ರೈಲುಗಳಿಂದ ಬರುವ ಅನೇಕ ಮಹಿಳೆಯರು ಚುಡಾವಣೆಗೊಳಗಾಗುತ್ತಾರೆ. ದೇಶದ ವಿಭಿನ್ನ ಕಡೆಗಳಿಂದ ದೆಹಲಿಗೆ ಬರುವ ಬಡ ಮಹಿಳೆಯರ ಮೇಲೆ ಒಮ್ಮೊಮ್ಮೆ ಅತ್ಯಾಚಾರವೇ ನಡೆದಿರುತ್ತದೆ. ಮುಖ್ಯವಾಗಿ ಗುಡ್ಡಗಾಡು ರಾಜ್ಯಗಳಿಂದ ಮತ್ತು ಪಶ್ಚಿಮ ಬಂಗಾಳದಿಂದ ಮನೆಕೆಲಸಕ್ಕೆ ಬರುವ ಮಹಿಳೆಯರ ಸ್ಥಿತಿ ಅತ್ಯಂತ ದಯನೀಯಗಿದೆ. ಬಹಳಷ್ಟು ಮಹಿಳೆಯರನ್ನು ಏಜೆಂಟರು ಮನೆಕೆಲಸಕ್ಕೆಂದು ಕರೆತಂದು ವ್ಯಭಿಚಾರ ವೃತ್ತಿಗೆ ದೂಡುತ್ತಿದ್ದಾರೆ.

ಮಹಿಳಾ ಹಕ್ಕುಗಳಿಗಾಗಿ ಅನೇಕ ಸಂಘಟನೆಗಳು ಕಾರ್ಯ ಪ್ರವೃತ್ತವಾಗಿವೆ. ಆದರೂ ಮಹಿಳೆಯರ ಮೇಲಿನ ದೌರ್ಜನ್ಯದ ಸ್ಥಿತಿ ಬದಲಾಗಿಲ್ಲ. ಅದರ ಸಂಖ್ಯೆಯಲ್ಲಿ ಕೂಡಾ ಕಡಿಮೆಯಾಗಿಲ್ಲ. ದೆಹಲಿಯಲ್ಲಿ ಪಾತ್ರೆ ತೊಳೆದು ಬದುಕುವವರ ಸಂಖ್ಯೆ ಎಂಟು ಲಕ್ಷ ಇದೆ. ಇವರಲ್ಲಿ ಶೇ. 90ರಷ್ಟು ಮಹಿಳೆಯರು ದೂರ ದೂರದ ರಾಜ್ಯಗಳಿಂದ ದೆಹಲಿಗೆ ಬಂದವರು. ಇವರ ದಯನೀಯ ಸ್ಥಿತಿಯ ಕುರಿತು ಅವರು ಮಾಡುವ ಕೆಲಸವೇ ವಿವರಿಸುತ್ತದೆ. ತುಂಬ ಕಡಿಮೆ ಕೆಲಸಕ್ಕೆ ಯಾರ್‍ಯಾರದೋ ಮನೆಯಲ್ಲಿ ಅವರು ಬೆವರಿಳಿಸುತ್ತಿದ್ದಾರೆ. ಅವರ ಕೆಲಸ ಬೆಳಗ್ಗಿಂದ ಆರಂಭವಾದರೆ ತಡರಾತ್ರಿ ಮಲಗುವ ವರೆಗೂ ಮುಂದುವರಿದಿರುತ್ತದೆ. ಝಾರ್ಖಂಡಿನ ಮಹಿಳೆ ಸೀಮಾ 2009ರಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದು, ದೆಹಲಿಯ ಜನಕಪುರಿಯ ಒಂದು ಮನೆಯಲ್ಲಿ ಬಂಧಿಸಿಟ್ಟಿದ್ದ ಕಾರಣವಾಗಿತ್ತು. ಸಾಂಸ್ಕೃತಿಕ ಸಚಿವಾಲಯದ ಉದ್ಯೋಗಿಯೊಬ್ಬ ಮನೆ ಕೆಲಸದವಳ ಮೇಲೆ ಅತ್ಯಾಚಾರ ನಡೆಸಿದ್ದು, ಅದೇ ವರ್ಷ. ಈ ವರ್ಷ ದೆಹಲಿಯ ಗ್ರೀನ್ ಪಾರ್ಕ್‌ನಲ್ಲಿ ಮನೆಕೆಲಸದವಳಾದ ರಾಮ್‌ಭೇಟಿಯ ಕೊರಳು ಸೀಳಿ ಕೊಲೆಗೈಯಲಾಗಿತ್ತು.

ಚುಡಾವಣೆಯ 128 ಪ್ರಕರಣಗಳನ್ನು ದಾಖಲಿಸಲಾಯಿತು. ಕಳೆದ ವರ್ಷ ದೆಹಲಿಯಲ್ಲಿ ಚುಡಾವಣೆಯ 552 ಪ್ರಕರಣವು ದಾಖಲಾಗಿದ್ದು 469 ಅತ್ಯಾಚಾರ ಘಟನೆಗಳು ದಾಖಲಾಗಿವೆ. ಗುರ್‌ಗಾಂವ್‌ನಲ್ಲಿ ಕಳೆದ ವರ್ಷ 50 ಮಹಿಳಾ ದೌರ್ಜನ್ಯದ ಘಟನೆಗಳು ದಾಖಲಾಗಿವೆ. ಅದರಲ್ಲಿ 229 ಬಲಾತ್ಕಾರ ಪ್ರಕರಣಗಳು ದಾಖಲಾಗಿವೆ. ನೋಯಿಡಾದಲ್ಲಿ ಕಳೆದ ವರ್ಷ 68 ಪ್ರಕರಣಗಳು ದಾಖಲಾಗಿವೆ. ಅವುಗಳಲ್ಲಿ 46 ಪ್ರಕರಣಗಳು ಚುಡಾವಣೆಯದ್ದಾಗಿದೆ.

ಈ ವಾಸ್ತವಿಕೆಯನ್ನು ಮುಂದಿರಿಸುವಾಗ ಮಹಿಳಾ ಮೀಸಲಾತಿ ಈ ಸಮಸ್ಯೆಗೆ ಪರಿಹಾರ ತಂದುಕೊಡಲು ಸಾಧ್ಯವೇ ಎಂಬ ಪ್ರಶ್ನೆ ಎದ್ದು ನಿಲ್ಲುತ್ತದೆ. ಇವೆಲ್ಲ ಸಂಸತ್ತಿರುವ ದೆಹಲಿ ಮತ್ತು ಸುತ್ತಮುತ್ತಲೂ ನಡೆಯುತ್ತಿರುವ ಘಟನೆಗಳು. ಇವು ಮಹಿಳೆಯರ ದಯನೀಯ ಸ್ಥಿತಿಯನ್ನು ಬಿಂಬಿಸುತ್ತಿವೆ. ಇವೆಲ್ಲ ಶೇ. 33 ಮೀಸಲಾತಿಗೇನು ಅರ್ಥ ಎಂದು ಖಂಡಿತವಾಗಿಯೂ ಯೋಚಿಸುವಂತೆ ಮಾಡುತ್ತಿದೆ.

## ಇಸ್ಲಾಮ್ ಸ್ವೀಕರಿಸಿದ ನಾಸ್ತಿಕವಾದಿ



ಪ್ರಸಿದ್ಧ ಭಾರತೀಯ ಮನೋರೋಗ ತಜ್ಞ ಡಾ। ಪೆರಿಯ ದಾಸನ್‌ರವರು ಇಸ್ಲಾಮ್ ಸ್ವೀಕರಿಸಿದ್ದಾರೆ ಎಂದು ಸೌದಿ ಅರೇಬಿಯದ ಅರಬ್ ನ್ಯೂಸ್ ಇಂಗ್ಲಿಷ್ ಪತ್ರಿಕೆ ವರದಿ ಮಾಡಿದೆ. ತಮಿಳು ವಂಶಸ್ಥರಾದ ಪೆರಿಯದಾಸನ್ ಲಾಸ್ ಎಂಜಲೀಸ್‌ನ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರಾಗಿದ್ದಾರೆ. ಭಾರತದ ಕೆಲವು ಕುಗ್ರಾಮಗಳಲ್ಲಿ ನಡೆಯುತ್ತಿರುವ ಹೆಣ್ಣು ಶಿಶು ಹತ್ಯೆಗೆ ಸಂಬಂಧಿಸಿ ತಮಿಳಿನಲ್ಲಿ ನಿರ್ಮಾಣವಾದ 'ಕರುತ್ತಮ್ಮ' ಎಂಬ ಚಿತ್ರದಲ್ಲಿ ಅವರು ಅಭಿನಯಿಸಿದ್ದರು. ಈ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ದೊರೆತಿದೆಯೆಂಬುದು ಗಮನಾರ್ಹ. ಭಾರತದಲ್ಲಿ ನಾಸ್ತಿಕರಾಗಿ ಗುರುತಿಸಲ್ಪಡುತ್ತಿದ್ದ ಇವರು ತನ್ನ ಹೆಸರನ್ನು ಅಬ್ದುಲ್ಲಾ ಎಂದು ಬದಲಿಸಿದ್ದಾರೆ. ಉಮ್ರಾ ಕರ್ಮ ನೆರವೇರಿಸಲು ಈಗ ಮಕ್ಕಾ ಸಂದರ್ಶನದಲ್ಲಿದ್ದಾರೆ.

## ಸಮೃದ್ಧಿ...

ಮನದಾಳದ ಮಾತುಗಳು
ಹೂವಾಗಿ ಅರಳಿದವು...

ಹಲವಾರು ಅರ್ಥಗಳು
ಪರಿಮಳವ ಬೀರಿದವು...

ಪಡೆದು ನೆಮ್ಮದಿಯ
ಹೃದಯಗಳು ಬೀಗಿದವು...

ಬೇಗುದಿಯ, ನೋವುಗಳ
ಔಷಧಿಯಾಗಿ ನೀಗಿದವು...

ಮಾತುಗಳೇ ಕಾವ್ಯವಾದವು
ಸಮೃದ್ಧಿಯ ಹೇತುವಾದವು...

ಡಾ। ಅಮೀರುದ್ದೀನ್ ಕಾಝಿ

# ಜೈಲಿನಲ್ಲಿ ಭಾಷಣ

**ಬೆಂ**ಗಳೂರು ಜೈಲಲ್ಲಿ ಎಲ್ಲ ಸಂಘಟನೆಗಳ ಜನರು ಸೇರಿ, ಸಂಘಟನಾ ಪರಿಚಯವೆಂಬ ವಿನೂತನ ಕಾರ್ಯಕ್ರಮವಿಟ್ಟೆವು. ಜಮಾಅತ್ ಪರವಾಗಿ ಡಾ। ಅಹಮ್ಮದ್ ಸಾಬ್‌ರು ಭಾಷಣಗೈಯುತ್ತಿದ್ದರು. ಅಸ್ಖಲಿತ, ಸ್ಫುಟವಾದ ಇಂಗ್ಲಿಷ್ ಭಾಷಣಕ್ಕೆ ಎಂತಹವರೂ ಮಾರುಹೋಗುತ್ತಿದ್ದರು. ಯಾಕೆ ಬೇರೆಲ್ಲರ ಭಾಷಣಕ್ಕಿಂತ ನಿಮ್ಮ ಭಾಷಣ ಹೆಚ್ಚು ಪ್ರಭಾವ ಬೀರುತ್ತದೆ? ಬಹುಶಃ ತಮ್ಮಲ್ಲಿ ದೇವದತ್ತ ಪ್ರತಿಭೆಯಿರಬಹುದು, ತಮ್ಮ ವಾಕ್ಚಾತುರ್ಯ ಮೆಚ್ಚುವಂತಹದ್ದೆ ಎಂದು ಯಾರಾದರೂ ಅಂದಲ್ಲಿ, "ಇಲ್ಲ, ತಮ್ಮ ಊಹೆ ತಪ್ಪು. ನನ್ನ ಮಾತನ್ನು ಯಾಕೆ ಜನರಿಷ್ಟಪಡುತ್ತಾರೆಂದರೆ ನಾನು ಹೇಳುತ್ತಿರುವುದು ಸತ್ಯವಾಗಿರುತ್ತದೆ. ಮಾತ್ರವಲ್ಲ, ಅದರಲ್ಲಿ ದಿವ್ಯಗ್ರಂಥ ಮತ್ತು ಪ್ರವಾದಿಚರ್ಯೆಯ ಬೆಳಕು ಇದೆ" ಎಂದು ಉತ್ತರಿಸುತ್ತಿದ್ದರು. ಜನಸಂಘದ ಪರವಾಗಿ ಅಡ್ವಾಣಿಯವರ ಭಾಷಣವಿತ್ತು. ಎಲ್ಲ ಭಾಷಣದ ಬಳಿಕ ಪ್ರಶ್ನೋತ್ತರಕ್ಕೆ ಅವಕಾಶವಿರುತ್ತಿತ್ತು. ಈಗಲೂ ನನಗೆ ನೆನಪಿದೆ ನನ್ನ ನೆನಪಿನಂಗಳದಿಂದ ಮಾಸದ ಅವತ್ತಿನ ಪ್ರಶ್ನೋತ್ತರದ ತುಣುಕುಗಳು ನೆನಪಿದೆ. ಕುರ್‌ಆನ್ ಪ್ರವಚನ ನೀಡಿಯಾದ ಬಳಿಕ ಡಾ। ಸಾಬ್‌ರು ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು.

ಪ್ರಶ್ನೆ: ಮೈಕಲ್ ಫೆರ್ನಾಂಡಿಸ್ (ಜಾರ್ಜ್ ಫೆರ್ನಾಂಡಿಸ್‌ರ ಸೋದರ) ಸಮಾಜವಾದದ ನೇತಾರ.

ಪ್ರಪಂಚದಲ್ಲಿ ಎಲ್ಲಾ ಕ್ಷೋಭೆಗಳು ಧರ್ಮದವರ ಕಾರಣದಿಂದ ಉಂಟಾದದ್ದೆಂದು ತಾವು ಒಪ್ಪುತ್ತೀರಾ? ಮನುಷ್ಯನ ಸಮಸ್ಯೆಯನ್ನು ಯಾವುದೇ ಧರ್ಮಗ್ರಂಥದ ಆಧಾರದಿಂದ ಬಗೆಹರಿಸಲು ಸಾಧ್ಯವಿಲ್ಲ. ಮಾನವನ ಸಮಸ್ಯೆ ಧರ್ಮದಿಂದಾಗಿ ಹುಟ್ಟಿಕೊಂಡಿದೆ! ಈ ಬಗ್ಗೆ ನೀವೇನು ಹೇಳುತ್ತೀರಾ?

ಡಾ। ಸಾಬ್: ನೀವು ಊಹೆಯಾಧಾರದಲ್ಲಿ ಈ ಪ್ರಶ್ನೆ ಕೇಳುತ್ತಿದ್ದೀರಿ? ಮಾತ್ರವಲ್ಲ ಧರ್ಮದ ತುಲನಾತ್ಮಕ ಅಧ್ಯಯನದ ಕೊರತೆಯು ಇರಬಹುದು, ನಾನು ಒಂದು ಅಂಕಿ ಅಂಶದ ಮೂಲಕ ನಿಮ್ಮ ಪ್ರಶ್ನೆಗೆ ಉತ್ತರಿಸುತ್ತೇನೆ. ಇತಿಹಾಸ ಸಾಕ್ಷಿ ಇದೆ! ಈ ವರೆಗೂ ಹೆಣ್ಣು-ಹೆಂಡ-ಹೊನ್ನಿಗೆ ನಡೆದಷ್ಟು ಹೋರಾಟ, ಕ್ಷೋಭೆ ಧರ್ಮದ ಕುರಿತಾಗಿ ನಡೆಯಲಿಲ್ಲ ಎಂಬುದನ್ನು ನೀವು ಒಪ್ಪುತ್ತಿರಾ?

ಮೈಕೆಲ್ ಫೆರ್ನಾಂಡಿಸ್: ಒಪ್ಪುತ್ತೇನೆ.

ಡಾ। ಸಾಬ್: ಹಾಗಾದರೆ ಆ ಹೆಣ್ಣು-ಹೆಂಡ-ಹೊನ್ನುಗಳು ಮನುಷ್ಯನಿಗೆ ಬೇಡವಾಗಿದೆಯೇ? ಇಲ್ಲವೆಂದಾದರೆ ಎಲ್ಲೋ ಬೆರಳೆಣಿಕೆಯ ನಾಮಧಾರಿ ಮುಸ್ಲಿಮರೋ, ಹಿಂದುಗಳೋ, ಕ್ರೈಸ್ತರೋ ಮಾಡಿದ ತಪ್ಪಿಗಾಗಿ ಧರ್ಮ ಕಾರಣವೆಂಬ ತೀರ್ಮಾನಕ್ಕೆ ಬರುವುದು ತಪ್ಪೆಂದು ನಾನು ಹೇಳುತ್ತಿದ್ದೇನೆ. ಯಾವ ಧರ್ಮ ಗ್ರಂಥವೂ ಮನುಷ್ಯನ ವಿಘಟನೆಗೆ ಅವಕಾಶ ನೀಡಿದ ಒಂದೇ ಒಂದು ಉಲ್ಲೇಖ ಕಾಣಲು ನಿಮಗೆ ಸಾಧ್ಯವಿಲ್ಲ! ಕ್ಷೋಭೆಗೆ ಕಾರಣವಾದದ್ದನ್ನು ಧರ್ಮ ಎನ್ನುವಂತಿಲ್ಲ. ಸೃಷ್ಟಿಕರ್ತ ನಿರ್ಮಿತ ಧರ್ಮವೆಂದೂ ಕ್ಷೋಭೆ ಹರಡುವುದಿಲ್ಲ. ಮಾನವ ನಿರ್ಮಿತ ಧರ್ಮದಿಂದ ಮಾತ್ರ ಕ್ಷೋಭೆ ಹರಡುತ್ತಿದೆ!

**ಆಂದೋಲನದ ಹರಿಕಾರರು - 6**

**ನಿರೂಪಣೆ: ನೂರುಲ್ ಅಮೀನ್, ಪಕ್ಕಲಡ್ಕ**



ಹೀಗೆ ಸುದೀರ್ಘವಾಗಿ ಡಾ। ಸಾಬ್‌ರು ಏಕದೇವತ್ವದ ಮೂಲಕ ಸಾಮಾಜಿಕ, ರಾಜಕೀಯ, ಶುದ್ಧೀಕರಣ, ಏಕೀಕರಣ ಕುರಿತು ಮನ ಮುಟ್ಟುವ ಶೈಲಿಯಲ್ಲಿ ಉತ್ತರಿಸಿದರು. ಅಲ್ಲಿದ್ದವರ ಪೈಕಿ ಎಲ್ಲರದು ಅದೇ ಮೊದಲ ಹಾಗೂ ಕೊನೆಯ ಪ್ರಶ್ನೆಯಾಗಿತ್ತು. ಸಮಾಜವಾದದ ಕಲ್ಪನೆ ಇಸ್ಲಾಮಿನ ಒಂದು ಅಂಗವೆಂದು ಡಾ। ಸಾಬ್‌ರು ಆಧಾರ ಸಮೇತ ತಿಳಿಸಿದಾಗ ಆಲಿಸಿದವರಲ್ಲಿ ಹೆಚ್ಚಿನವರು ಮೂಗಿನ ಮೇಲೆ ಬೆರಳಿಟ್ಟರು.

ಇದಾದ ಬಳಿಕ ಕೆಲವೇ ದಿನಗಳಲ್ಲಿ ಜನಸಂಘದಿಂದ ಸಭಾಕಾರ್ಯಕ್ರಮವಿತ್ತು. ಅದರಲ್ಲಿ ಜನಸಂಘದ ಭಾಷಣಕಾರ ಇಸ್ಲಾಮನ್ನು ತೀವ್ರವಾಗಿ ಅವಹೇಳನ ಮಾಡಿದರು. ಆ ಕೂಡಲೇ ವೇದಿಕೆಗೇರಿದ ಡಾ। ಮಕ್ಬೂಲ್ ಅಹಮ್ಮದ್ ಬೆಂಗಳೂರು, "ಈ ವ್ಯಕ್ತಿಯ ಮಾತಿನಲ್ಲಿ ಸಹಮತವಿಲ್ಲ ಮಾತ್ರವಲ್ಲ ಸತ್ಯವೂ ಇಲ್ಲ! ತಾವೆಲ್ಲರೂ ಕುರ್‌ಆನನ್ನು ಮುಕ್ತ ಮನಸ್ಸಿನಿಂದ ಅಧ್ಯಯನ ನಡೆಸಬೇಕು" ಎಂದು ಕರೆಕೊಟ್ಟರು. ಆ ಬಳಿಕ ಜನಸಂಘದವರನ್ನೊಳಗೊಂಡ ಕುರ್‌ಆನ್ ಪ್ರವಚನ ಸಭೆ ಜೈಲಿನೊಳಗೆ ನಡೆಯತೊಡಗಿತು.

ಅದೇ ಸಂದರ್ಭದಲ್ಲಿ ಜುನೈದ್ ಎಂಬ ಜಮಾಅತ್ ಸದಸ್ಯರಿಂದ ರಾಮಕೃಷ್ಣ ಹೆಗಡೆ ಮತ್ತು ಮಲ್ಲಿಕಾರ್ಜುನಯ್ಯರವರು ಉರ್ದು ಭಾಷೆ ಬರೆಯಲು ಓದಲು ಕಲಿತರು.

1976 ಜುಲೈ-ಅಗಸ್ಟ್‌ರ ಹೊತ್ತಿಗೆ ಬೆಳಗಾವಿ ಜೈಲಿಗೆ ವರ್ಗಾಯಿಸಿದರು. ಅಲ್ಲೂ ಕುರ್‌ಆನ್ ಪ್ರವಚನ ಡಾ। ಸಾಬ್‌ರ ನೇತೃತ್ವದಲ್ಲಿ ನಡೆಸುತ್ತಿದ್ದೆವು. ಈ ನಡುವೆ 1976 ನವೆಂಬರ್‌ನ ರೈಲ್ವೆ ಇಲಾಖೆಯು ನನ್ನನ್ನು ಮತ್ತು ಕನಗಿರಿ ಸಾಹೇಬರನ್ನು ರೈಲ್ವೆ ಹುದ್ದೆಯಿಂದ ವಜಾಗೊಳಿಸಿತು.

ಬೆಳಗಾವಿ ಜೈಲಲ್ಲೂ ಬೆಂಗಳೂರು ಜೈಲಿನಲ್ಲಾದಂತಹ ಅನುಭವಾಯಿತು. ಅಲ್ಲೋರ್ವ ಜನಸಂಘದ ಕಾರ್ಯಕರ್ತರ ಪ್ರಶ್ನೆ ಹೀಗಿತ್ತು:

"ಯಾಕೆ ಬನೀ ಇಸ್ರಾಈಲ್‌ರನ್ನು ಅಲ್ಲಿಂದಿಲ್ಲಿಗೆ ಅಟ್ಟಾಡಿಸುವುದು? ಯಹೂದಿಗಳಿಗ್ಯಾಕೆ ಈ ಪರಿಯ ಶಿಕ್ಷೆ! ಅವರನ್ನು ಸೃಷ್ಟಿಸಿದವನು ಸೃಷ್ಟಿಕರ್ತನಲ್ಲವೇ?"

ಈಗ ಹೇರಳವಾಗಿ ಇಸ್ಲಾಮೀ ಜನಜಾಗೃತಿಗಳು ನಡೆಯುತ್ತಿವೆ. ದೃಶ್ಯಮಾಧ್ಯಮಗಳಲ್ಲಿ, ಮುದ್ರಣ ಮಾಧ್ಯಮಗಳಲ್ಲಿ ಸಾಕಷ್ಟು ಯಶಸ್ಸು ಸಾಧಿಸಿದೆ. ಆದರೆ ಅಂದಿನ ದಿನಗಳಲ್ಲಿ ಇಸ್ಲಾಮಿನ ಪ್ರಾಥಮಿಕ ಜ್ಞಾನ ಇಸ್ಲಾಮೇತರರಲ್ಲಿ ಇರಲಿಲ್ಲವೆಂದರೆ ಅತಿಶಯೋಕ್ತಿಯಿಲ್ಲ. ಸ್ವತಃ ಸ್ವ ಸಮುದಾಯದ ಜನರಲ್ಲೇ ಒಂದು ರೀತಿಯ ಧಾರ್ಮಿಕ ವಿಚಾರದ ಮುಜುಗರ, ಅಸಹ್ಯತೆ, ಎದುರಿಸಬೇಕಾಗಿತ್ತು.

ಧರ್ಮದ ಬಗ್ಗೆ ತಿಳಿದುಕೊಳ್ಳುವ ಜಿಜ್ಞಾಸೆ ಮುಸ್ಲಿಮೇತರರಲ್ಲಿ ತೀವ್ರವಾಗಿದೆಯೆಂದು ನಮಗೆ ಜೈಲಿನ ಅನುಭವ ಕಲಿಸಿತು. ಪ್ರಶ್ನೆಗಳೆಲ್ಲಾ ಬಾಲಿಶವಾಗಿದ್ದರೂ ಕುತೂಹಲ ತಣಿಸುವುದರಲ್ಲಿ ಡಾ। ಸಾಬ್‌ರಷ್ಟು ಪ್ರೌಢಿಮೆ ಬೇರಾರಿಗಿರಲಿಲ್ಲ. ಬದುಕಿಡೀ ಆಂದೋಲನಕ್ಕೆ ಮೀಸಲಿಟ್ಟು ಅದರಲ್ಲಿ ತನ್ನ ಕೊನೆಯಾಗಲಿ ಎಂದು ನಿತ್ಯ ಆಶಿಸುತ್ತಿದ್ದ ಜ। ಅಬ್ದುಲ್ ಸಲಾಮ್ ಸಾಬ್ ಬೆಂಗಳೂರು ಇವರಿಗೆ ಹುತಾತ್ಮತೆಯನ್ನು ಅಲ್ಲಾಹನು ಜೈಲಿನಲ್ಲಿ ದಯಪಾಲಿಸಿದನು. ಜನಾಂಗ ದ್ವೇಷಿಗಳೆಂಬ ಅಪಪ್ರಚಾರವನ್ನು ತೀವ್ರವಾಗಿ ಖಂಡಿಸುತ್ತಿದ್ದ ಡಾ। ಸಾಬ್‌ರು ಯಹೂದಿಗಳು ಯಾವ ಜನಾಂಗದೊಂದಿಗೂ ನಿಷ್ಠೆಯಿಂದಿದ್ದ ಉದಾಹರಣೆ ನಿಮಗೆ ಕಾಣಸಿಗಲಿಕ್ಕಿಲ್ಲ ಎಂದೂ ಯಹೂದಿಗಳು ಹಂಗೇರಿಯಿಂದ, ಜರ್ಮನಿಯಿಂದ, ಇತರ ಕಡೆಯಿಂದ ಹೊರಹಾಕಲ್ಪಡಲು ಕಾರಣ ಅವರು ಹೋದಲ್ಲೆಡೆ ಕ್ಷೋಭೆ ಹಬ್ಬಿಸುತ್ತಾರೆ ಮಾತ್ರವಲ್ಲ ಧರ್ಮದಿಂದ ಕ್ಷೋಭೆ ಕಾರಣವಾಗಿದೆ ಎಂಬ ವಿಚಾರಕ್ಕೆ ಮೂಲ ಕಾರಣರಾಗಿದ್ದಾರೆ ಎಂದೂ ಇಸ್ಲಾಮ್ ಜನಾಂಗೀಯವಾದದ ವಿರುದ್ಧವಾಗಿ ಮಾನವತೆಯ ಉಳಿವಿಗೆ ಶ್ರಮಿಸುತ್ತಿದೆ ಎಂದೂ ಜೈಲಿನ ಕುರ್‌ಆನ್ ಪ್ರವಚನದ ಸಂದರ್ಭದಲ್ಲಿ ಜನಸಂಘದ ಕಾರ್ಯಕ್ರಮ ಪ್ರಶ್ನೆಗೆ ಉತ್ತರಿಸಿದರು.

(ಮುಂದುವರಿಯುವುದು)

# ಅಸಾಮಾನ್ಯ ಪ್ರತೀಕಾರ

**ಮಕ್ಕಾದಲ್ಲಿರುವ ಪಾವನ ಭವನ ಕಅಬ ಲೋಕದ ಅತ್ಯಂತ ಶ್ರದ್ಧೆಯ ಕೇಂದ್ರವಾಗಿದೆ. ದಿನಂಪ್ರತಿ ನೂರೈವತ್ತು ಕೋಟಿ ಮಾನವರು ಅದರ ಕಡೆಗೆ ನಮಾಝಿಗಾಗಿ ಮುಖ ಮಾಡುತ್ತಾರೆ. ಅಂತ್ಯಶ್ವಾಸದ ವೇಳೆ ತನ್ನ ಮುಖ ಕಅಬದ ಕಡೆಗಿರಲಿ ಎಂಬುದು ಪ್ರತಿಯೋರ್ವ ಸತ್ಯವಿಶ್ವಾಸಿಯ ಆಗ್ರಹವಾಗಿದೆ. ಅನೇಕ ಶತಮಾನಗಳಿಂದೀಚೆಗೆ ಗತಿಸಿದ ವಿಶ್ವಾಸಿಗಳ ಮುಖ ಅಂತ್ಯ ವಿಶ್ರಮಕ್ಕಾಗಿ ಅದರ ಕಡೆಗೆ ತಿರುಗಿಸಡಲಾಗಿದೆ. ಪ್ರತಿನಿತ್ಯ ಸಾವಿರಾರು ಮಂದಿ ಉಮ್ರ ಮಾಡುತ್ತಾ, ವರ್ಷಕ್ಕೊಮ್ಮೆ ನಿರ್ವಹಿಸುವ ಹಜ್ಜ್ ಕರ್ಮಗಳು ಇದಕ್ಕೆ ಸಂಬಂಧಪಟ್ಟದ್ದಾಗಿದೆ. ಜನರ ಗಮನ, ಭಯಭಕ್ತಿಯನ್ನು ಈ ರೀತಿ ಸೆಳೆಯುವ ಯಾವ ಕಟ್ಟಡವೂ ಜಗತ್ತಿನಲ್ಲಿಲ್ಲ.**

**ಕಅಬಾ-ದೇವನ ಏಕತೆಯ ಪ್ರತೀಕವಾಗಿದೆ. ಎಲ್ಲಾ ಸಕಲ ಏಕದೇವ ವಿಶ್ವಾಸಿಗಳ ಆರಾಧನೆಯ ಕೇಂದ್ರ. ಭೂಮಿಯಲ್ಲಿ**

**✍ ಝುರೀನಾ ಸಾಲಿಹ್**

**ದೇವನನ್ನು ಆರಾಧಿಸಲು ನಿರ್ಮಿಸಿದ ಪ್ರಥಮ ಭವನವಾಗಿದೆ. ಪ್ರವಾದಿ ಇಬ್ರಾಹೀಮ್(ಅ) ಹಾಗೂ ಮಗ ಇಸ್ಮಾಈಲ್(ಅ) ನಿರ್ಮಿಸಿದ ಈ ಭವನಕ್ಕೆ ಪ್ರತ್ಯೇಕ ದಿಕ್ಕಿಲ್ಲ. ಎಲ್ಲಾ ಅದರ ದಿಕ್ಕೇ. ಅದರಿಂದಾಗಿ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಎಲ್ಲವನ್ನೂ ಅದು ಕೇಂದ್ರೀಕರಿಸುತ್ತದೆ. ಇಸ್ಲಾಮಿನ ವಿಶ್ವಾಸ, ಸಂಸ್ಕಾರ ಮತ್ತು ಚರಿತ್ರೆಯ ಕೇಂದ್ರವೂ ಆಗಿದೆ.**

**ಪವಿತ್ರ ಕಅಬವು ನೂರಾರು ವರ್ಷಗಳಿಂದ ಕೋಟಿಗಟ್ಟಲೆ ಜನರ ಆಶೋತ್ತರಗಳ ಅಭಿಲಾಷೆಗಳ ಕೇಂದ್ರಬಿಂದುವಾಗಿ ವರ್ತಿಸುತ್ತಿದೆ. ಅದನ್ನು ಸಂದರ್ಶಿಸಿದ ಅಸಂಖ್ಯಾತ ಯಾತ್ರಾರ್ಥಿಗಳು**



**ಅನೇಕ ತ್ಯಾಗಗಳನ್ನು ಅನುಭವಿಸಿದ್ದಾರೆ. ಅದನ್ನು ಸಂದರ್ಶಿಸಲೆಂದು ಹೊರಟ ಎಷ್ಟು ಲಕ್ಷ ಜನರು ದಾರಿ ಮಧ್ಯೆ ಗತಿಸರಬಹುದೆಂದು ಇತಿಹಾಸ ದೃಢಪಡಿಸಿಲ್ಲ. ಪ್ರತಿಯೊಬ್ಬ ವಿಶ್ವಾಸಿಯೂ ಅದನ್ನು ದರ್ಶಿಸಲು ಬಯಸುತ್ತಾನೆ. ಎಲ್ಲರ ಆಗ್ರಹಾಭಿಲಾಷೆಗಳ ಉತ್ತುಂಗ ಶಿಖರ ಈ ಪವಿತ್ರ ಭವನವಾಗಿದೆ.**

**ಇತಿಹಾಸದ ಅಂಧಕಾರ ಯುಗದಲ್ಲಿ ಖುಝಾಅ ಗೋತ್ರದ ಮುಖಂಡ ಅಮ್ರ್ ಬಿನ್ ಹಯ್ಯ ಪ್ರಥಮವಾಗಿ ಕಅಬಾದಲ್ಲಿ ಹುಬಲ್ ಎಂಬ ವಿಗ್ರಹ ಸ್ಥಾಪಿಸಿದನು. ಆ ಬಳಿಕ ಇತರರು ಕೂಡಾ ಅದನ್ನು ಪುನರಾವರ್ತಿಸಿದರು. ಹೀಗೆ ಪ್ರವಾದಿ ಮುಹಮ್ಮದ್‌ರ(ಸ) ಕಾಲಕ್ಕಾಗುವಾಗ ಕಅಬಾ ಪರಿಸರದಲ್ಲಿ 360 ವಿಗ್ರಹಗಳಿದ್ದವು. ಏಕದೇವಾರಾಧನೆಯ ಪ್ರತಿಪಾದನೆಗಾಗಿ ಪ್ರವಾದಿ ಮುಹಮ್ಮದ್‌ರವರು(ಸ) ನಿಯುಕ್ತರಾದರು. ಇದು ಮಕ್ಕದ ಬಹುದೇವಾರಾಧಕರ ಶತ್ರುತ್ವಕ್ಕೆ ನಾಂದಿಯಾಯಿತು. ಅವರು ಪ್ರವಾದಿ ಮತ್ತು ಅನುಯಾಯಿಗಳನ್ನು ತೀವ್ರವಾಗಿ ಹಿಂಸಿಸಿದರು.**

**ಪ್ರವಾದಿ ಮುಹಮ್ಮದ್(ಸ) ತನ್ನ ಪಿತಾಮಹರು ನಿರ್ಮಿಸಿದ ಕಅಬದ ಬಾಗಿಲು ತೆರೆದು ಅದರೊಳಗೆ ಪ್ರಾರ್ಥಿಸಬೇಕೆಂದು ಬಯಸಿದರು. ಅದರ ಕೀಲಿಕೈ ಉಸ್ಮಾನ್ ಬಿನ್ ತಲ್ಹರ ಅಧೀನದಲ್ಲಿತ್ತು. ಪ್ರವಾದಿವರ್ಯರು(ಸ) ಕಅಬದ ಕದ ತೆರೆಯಲು ಅವರೊಂದಿಗೆ ವಿನಂತಿಸಿದರು. ಆದರೆ ವೈರಿ ಗುಂಪಿನಲ್ಲಿದ್ದ ಉಸ್ಮಾನ್ ಬಾಗಿಲು ತೆರೆಯಲಿಲ್ಲ. ಮಾತ್ರವಲ್ಲ, ಪ್ರವಾದಿಯನ್ನು ಅತ್ಯಂತ ಹೀನಾಯವಾಗಿ ನಿಂದಿಸಿ, ಪರಿಹಾಸ್ಯ ಮಾಡಿದನು. ಆಗ ಪ್ರವಾದಿ(ಸ) ಹೇಳಿದರು. "ಉಸ್ಮಾನ್, ಒಂದು ದಿನ ಈ ಕೀಲಿಕೈ ನನ್ನ ಕೈಯಲ್ಲಿರುವುದನ್ನು ನೀವು ಕಾಣುವಿರಿ. ಅಂದು ನಾನು ನನಗಿಷ್ಟವಿರುವವರಿಗೆ ಅದನು ನೀಡುತ್ತೇನೆ."**

**ಅನಂತರ ಪ್ರವಾದಿ ಮತ್ತು ಸಂಗಡಿಗರಿಗೆ ಮಕ್ಕಾ ತೊರೆಯಬೇಕಾಯಿತು. ಸಂಘರ್ಷಭರಿತ ಮತ್ತು ಕ್ರಾಂತಿಯ ಅನೇಕ ವರ್ಷ ಕಳೆದ ನಂತರ ವಿಜಯಿಗಳಾಗಿ ಪುನಃ ಅವರು ಮಕ್ಕಾಕ್ಕೆ ಮರಳಿದರು. ಅಂದು ಪ್ರವಾದಿ(ಸ) ಉಸ್ಮಾನ್ ಬಿನ್ ತಲ್ಹರನ್ನು ಕರೆದು ಕಅಬದ ಬಾಗಿಲು ತೆರೆಯಲು ಹೇಳಿದಾಗ, ವಿಧೇಯ ದಾಸನಂತೆ ಉಸ್ಮಾನ್ ಕದ ತೆರೆದರು.**

**ಪ್ರವಾದಿ(ಸ) ತನ್ನ ಕೆಲಸ ಕಾರ್ಯಗಳನ್ನು ಮುಗಿಸಿ ಹೊರಬಂದು ಕಅಬದ ಕದ ಮುಚ್ಚಿ ಬೀಗ ಹಾಕಿ ಪುನಃ ಉಸ್ಮಾನ್ ಬಿನ್ ತಲ್ಹರಿಗೆ ಮರಳಿಸಿದರು. ಲೋಕಾಂತ್ಯದ ವರೆಗೆ ಅದರ ಉತ್ತರಾಧಿಕಾರವನ್ನು ಅವರ ಕುಟುಂಬಸ್ಥರಿಗೆ ನೀಡಿದರು. ಹೀಗೆ ಇಡೀ ಜಗತ್ತಿಗೆ ಒಳಿತಿನ ಅತುಲ್ಯ ಮಾದರಿ ಮತ್ತು ಮಾನಸಿಕ ಉನ್ನತಿಯ ರೀತಿಯನ್ನು ಪ್ರಸ್ತುತಪಡಿಸಿದರು. ಈಗಲೂ ಕಅಬದ ಕೀಲಿಕೈ ಉಸ್ಮಾನ್ ಬಿನ್ ತಲ್ಹರ ವಂಶಸ್ಥರಲ್ಲಿಯೇ ಇದೆ.**

ಕೇಳಿದಿರಾ? ಕೇಳಿ
ಮುಜೀಬ್

# ಹಾಡು ಕೇಳುವುದು ನಿಷಿದ್ಧವೇ?

ಬಾನು, ಕಾಸರಗೋಡು

**● ಇಲ್ಲೊಬ್ಬರು ಮ್ಯೂಸಿಕ್ ಹಾಡು ಹರಾಮ್ ಎನ್ನುತ್ತಾರೆ. ನಾವು ಇಸ್ಲಾಮಿ ಹಾಡುಗಳನ್ನು ಮ್ಯೂಸಿಕ್‌ನಲ್ಲಿ ಕೇಳುತ್ತಿರುತ್ತೇವೆ. ಇದನ್ನು ಕೇಳುವುದರಲ್ಲಿ ತಪ್ಪಿದೆಯೆ? ಕುರ್‌ಆನ್-ಹದೀಸ್‌ನ ಆಧಾರದಲ್ಲಿ ತಿಳಿಸಿ.**

❍ ಮನುಷ್ಯನ ಮನಸ್ಸಿಗೆ ಮುದ ನೀಡುವ, ಕಿವಿಗೆ ಇಂಪಾಗಿಸುವ ಹಾಡುಗಳನ್ನು ಹಾಡುವುದರಲ್ಲಿ ಮತ್ತು ಕೇಳುವುದರಲ್ಲಿ ಅಭ್ಯಂತರವಿಲ್ಲ. ಅದರೊಂದಿಗೆ ಕೀಳುಭಾವನೆಗಳನ್ನು ಕೆರಳಿಸದಂತಹ ಸಂಗೀತವೂ ಇದ್ದರೆ ಅದೂ ಆಕ್ಷೇಪಾರ್ಹವಲ್ಲ. ಹಬ್ಬಗಳು, ವಿವಾಹಾದಿ ಸಮಾರಂಭಗಳು, ಅತಿಥಿಗಳ ಆಗಮನ, ವಲೀಮ, ಅಕೀಕ, ಶಿಶು ಜನನ ಇತ್ಯಾದಿ ಸಂದರ್ಭಗಳಲ್ಲಿ ಹಾಡುಗಾರಿಕೆ, ಸಂಗೀತ ಇತ್ಯಾದಿ ಸಾಮಾನ್ಯ. ಇಸ್ಲಾಮ್ ಇದಕ್ಕೆ ಅನುಮತಿಸುತ್ತದೆ.

ಆಯಿಶಾ(ರ) ಹೇಳುತ್ತಾರೆ- ಓರ್ವ ಸ್ತ್ರೀಯ ವಿವಾಹ ಓರ್ವ ಅನ್ಸಾರಿಯೊಂದಿಗೆ ನಡೆಯಿತು. ಆಗ ಪ್ರವಾದಿ(ಸ) ಹೇಳಿದರು, "ಆಯಿಶಾ! ಅವರೊಂದಿಗೆ ಏನಾದರೂ ಲಹ್‌ವ್ (ಮುದ ನೀಡುವ ವಸ್ತು) ಇಲ್ಲವೇ? ಏಕೆಂದರೆ ಅನ್ಸಾರರು ಲಹ್‌ವನ್ನು ಇಷ್ಟಪಡುತ್ತಾರೆ." (ಬುಖಾರಿ)

ಇಬ್ನು ಅಬ್ಬಾಸ್(ರ) ಹೇಳುತ್ತಾರೆ- ಆಯಿಶಾ(ರ) ತನ್ನೋರ್ವ ಆಪ್ತ ಅನ್ಸಾರಿ ಮಹಿಳೆಯ ಮದುವೆ ಮಾಡಿಸಿದರು. ಪ್ರವಾದಿ(ಸ) ಬಂದು, "ವಧುವನ್ನು ಕಳಿಸಿಕೊಟ್ಟಿರಾ?" ಎಂದು ಕೇಳಿದಾಗ ಜನರು ಹೌದೆಂದು ಉತ್ತರಿಸಿದರು. ಪ್ರವಾದಿ(ಸ) ಕೇಳಿದರು, "ಅವಳೊಂದಿಗೆ ಓರ್ವ ಹಾಡುಗಾರ್ತಿ ಹುಡುಗಿಯನ್ನು ಕಳಿಸಿಲ್ಲವೆ?" ಆಯಿಶಾ ಇಲ್ಲವೆಂದಾಗ ಪ್ರವಾದಿ(ಸ) ಹೇಳಿದರು, "ಅನ್ಸಾರರಿಗೆ ಹಾಡೆಂದರೆ ಅಚ್ಚುಮೆಚ್ಚು. ನೀನು ಅವಳೊಂದಿಗೆ ಓರ್ವ ಹಾಡುಗಾರ್ತಿ ಹುಡುಗಿಯನ್ನು ಕಳಿಸುತ್ತಿದ್ದರೆ ಚೆನ್ನಾಗಿತ್ತು. ಆಕೆ ಹಾಡುತ್ತಿದ್ದಳು- "ನಾವು ಬಂದೆವು ನಿಮ್ಮಲ್ಲಿಗೆ, ನಾವು ಬಂದೆವು ನಿಮ್ಮಲ್ಲಿಗೆ, ಅಲ್ಲಾಹನು ನಮ್ಮನ್ನಿರಿಸಲಿ ಜೀವಂತ ನಿಮ್ಮನ್ನೂ!" (ಇಬ್ನು ಮಾಜ:)

ಆಯಿಶಾ(ರ) ವರದಿ ಮಾಡುತ್ತಾರೆ- ಅಬೂಬಕ್ಕರ್(ರ) ನನ್ನ ಬಳಿಗೆ ಬಂದಾಗ ಇಬ್ಬರು ಹುಡುಗಿಯರು ಹಾಡುತ್ತಿದ್ದರು. ಪ್ರವಾದಿ(ಸ) ಚದ್ದರ ಹೊದ್ದು ಮಲಗಿದ್ದರು. ಅಬೂಬಕರ್ ನನ್ನನ್ನು ಗದರಿಸಿದಾಗ ಪ್ರವಾದಿವರ್ಯರು(ಸ) ತಮ್ಮ ಮುಖದಿಂದ ಚದ್ದರವನ್ನು ಸರಿಸಿ ಹೇಳಿದರು, "ಅಬೂಬಕರ್! ಬಿಡಿ ಅವರನ್ನು. ಇಂದು ಹಬ್ಬದ ದಿವಸವಲ್ಲವೆ!" (ಮುತ್ತಫಕ್ ಅಲೈಹಿ)

ಹಾಡು ಮತ್ತು ಸಂಗೀತ ಹೆಚ್ಚಾಗಿ ಮದ್ಯಪಾನದ ಸಮಾರಂಭಗಳಲ್ಲಿ, ನಿಶಾಕ್ಲಬ್ಬುಗಳಲ್ಲಿ ಇರುತ್ತದೆ. ಅದರಿಂದಾಗ ವಿದ್ವಾಂಸರು ಅದನ್ನು ಹರಾಮ್ ಎಂದು ಸಾರಿದ್ದಾರೆ. ಅದರಲ್ಲಿ ಮನುಷ್ಯನ ಕೀಳ ಭಿರುಚಿಗಳನ್ನು ಕೆರಳಿಸುವಂತಹ ಹಾಗೂ ಅಶ್ಲೀಲತೆ, ಕೆಡುಕುಗಳನ್ನು ಪ್ರಚೋದಿಸುವಂತಹ ಸಂಗೀತ ಗಾಯನಗಳು ನಿಷಿದ್ಧವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಮನುಷ್ಯನ ಮನಸ್ಸನ್ನು ಪುಳಕಿತಗೊಳಿಸುವ ಹಾಗೂ ಒಳಿತುಗಳನ್ನು ಪ್ರೇರೇಪಿಸುವ, ಬೋಧನಾತ್ಮಕ ಗಾಯನಗಳನ್ನು ಕೇಳುವುದನ್ನು ಆಕ್ಷೇಪಿಸುವಂತಿಲ್ಲ. ಪ್ರವಾದಿ ದಾವೂದ್(ಅ) ಅವರ ಸಂಗೀತಕ್ಕೆ ಪಶು ಪಕ್ಷಿಗಳು ಬಂದು ಸೇರುತ್ತಿದ್ದುವು ಎಂದು ಪವಿತ್ರ ಕುರ್‌ಆನಿನಲ್ಲಿದೆ.

# ಬಿದ್‌ಅತ್?

ಎಸ್.ಎಂ. ಅಲ್ತಾಫ್, ಮಂಗಳೂರು

**● ಒಬ್ಬ ವ್ಯಕ್ತಿ ಮರಣ ಹೊಂದಿದ ಮೂರನೇ ದಿನ ಕುರ್‌ಆನ್ ಪಾರಾಯಣ ಮತ್ತು ಅನ್ನದಾನ ಮಾಡುವ ಪದ್ಧತಿ ನಮ್ಮಲ್ಲಿ ಎಲ್ಲೆಲ್ಲೂ ಕಂಡು ಬರುತ್ತದೆ. ಇದು ಬಿದ್‌ಅತ್ ಆಗಿದೆಯೇ? ಮೃತ ಸಹೋದರರಿಗೆ 'ಸವಾಬ್' ಮುಟ್ಟಿಸುವ ಸರಿಯಾದ ವಿಧಾನವನ್ನು ತಿಳಿಸಿ.**

❍ ವ್ಯಕ್ತಿ ಮರಣ ಹೊಂದಿದ ಮೂರನೇ ಏಳನೇ ಮತ್ತು ನಲ್ವತ್ತನೇ ದಿನವೆಂದು ಸಾಮಾನ್ಯವಾಗಿ ಇದನ್ನು ಆಚರಿಸುತ್ತಿರುತ್ತಾರೆ. ಅದು ಅಪ್ಪಟ ಬಿದ್‌ಅತ್ (ಅನಾಚಾರ) ಆಗಿದೆ. ಈ ಆಚರಣೆಗಳ ವೇಳೆ ವಿವಿಧ ರೀತಿಯ ತಿಂಡಿ ತಿನಿಸುಗಳನ್ನು ಕೊಡುವುದಿದೆ. ಅದಕ್ಕೆಲ್ಲ ಕುರ್‌ಆನ್-ಹದೀಸ್‌ನಲ್ಲಿ ಯಾವುದೇ ಆಧಾರವಿಲ್ಲ.

ಮೃತ ಸಹೋದರರಿಗಾಗಿ, ಅವರ ಪಾಪ ವಿಮೋಚನೆ, ಸದ್ಗತಿ ಹಾಗೂ ಸ್ವರ್ಗಪ್ರಾಪ್ತಿಗಾಗಿ ಮೃತನ ಸಹೋದರರು, ಸಂಬಂಧಿಕರು, ಆಪ್ತೇಷ್ಟರು ಮತ್ತು ಬಂಧುಮಿತ್ರಾದಿಗಳು ಪ್ರಾರ್ಥಿಸುವುದು ಅವರಿಗೆ 'ಸವಾಬ್' (ಪುಣ್ಯ) ತಲಪಿಸುವ ಸರಿಯಾದ ವಿಧಾನವಾಗಿದೆ.

## ಓ ಗೆಳೆಯಾ...

ಸುಮಯ್ಯಾ ನೂಹಾ, ಪಕ್ಕಲಡ್ಕ

ಓ ಗೆಳೆಯ
ನಿಗದಿಪಡಿಸಿದ ದಿನಗಳು
ಕಳೆದವು ನಿನಗೆ
ಕ್ಷಣ ಕಾಲ ನನ್ನ ಬಿಟ್ಟು ನೀ ಅಗಲುವೆ
ನಿನ್ನ ಆಯುಷ್ಯ
ಅಂತಿಮ ದಿನದ ವರೆಗೆ
ನಾನಿರುವೆನೋ... ಇಲ್ಲವೋ
ಮುಂದಿನ ವರುಷ
ನೀನಿರುವಾಗ
ಮನಸ್ಸಿಗೆ ಎಷ್ಟೊಂದು
ಶಾಂತಿ, ಸಮಾಧಾನ, ನೆಮ್ಮದಿ, ಸಮೃದ್ಧಿ
ಕೆಡುಕುಗಳಿಗೆ ಕಡಿವಾಣ
ಒಳಿತುಗಳಿಗೆ ಪ್ರೇರಣೆ
ಸಂಸ್ಕರಣೆ ಪಶ್ಚಾತ್ತಾಪ ಅವಲೋಕನ
ಜೀವನ ಬದಲಾಯಿಸಲು ಅದುವೇ ಮಾಪನ
ನೀ ನೀಡಿದೆ ತರಬೇತಿ
ನಾ ಹೊಂದಲು ದೇವ ಪ್ರೀತಿ
ಓ ಗೆಳೆಯಾ
ಮುಂದಿನ ವರುಷ ನಾ ಇಲ್ಲದಿದ್ದರೆ
ನಾಳೆ ಅಲ್ಲಾಹನ ಮುಂದೆ
ನನಗಾಗಿ ಶಿಫಾರಸು ಮಾಡಲು
ಅದರ ಅರ್ಹತೆ ನಿನಗಿದೆ ಎಂದು
ನನಗೆ ತಿಳಿದಿದೆ
ಓ ಗೆಳೆಯಾ...

# ಕಣ್ಣು ದಾನ ಮಾಡಬಹುದೆ?

ರಿಯಾಝ್ ಪಾಶಾ, ಸುರಪುರ

**● ಮರಣದ ನಂತರ ನಮ್ಮ ಕಣ್ಣನ್ನು ದಾನ ಮಾಡಬಹುದೇ? ಅಥವಾ ಕಣ್ಣಿನ ಬ್ಯಾಂಕಿಗೆ ಕೊಡಬಹುದೇ? ಹದೀಸ್‌ನ ಆಧಾರದಲ್ಲಿ ತಿಳಿಸಿ.**

❍ ಇನ್ನೊಬ್ಬರಿಗೆ ಉಪಕಾರವಾಗಬೇಕು, ಕಣ್ಣಿಲ್ಲದವರಿಗೆ ದೃಷ್ಟಿ ದೊರೆಯುವಂತಾಗಬೇಕು ಎಂಬ ಉದ್ದೇಶದಿಂದ ಒಬ್ಬನು ತನ್ನ ಕಣ್ಣನ್ನು ಉಚಿತವಾಗಿ ದಾನ ಮಾಡಬಹುದಾಗಿದೆಯೆಂದು ವಿದ್ವಾಂಸರು ಹೇಳುತ್ತಾರೆ. ಆದರೆ ಹಣ ಮಾಡುವ ಉದ್ದೇಶದಿಂದ ಕಣ್ಣನ್ನು ಮಾರಾಟ ಮಾಡಬಾರದು. ದಾನ ಮಾಡುವುದು ಪುಣ್ಯದಾಯಕ ಕಾರ್ಯವಾಗಿದೆ. ಕಣ್ಣಿನ ಬ್ಯಾಂಕಿಗೂ ಅದೇ ಉದ್ದೇಶದಿಂದ ಮತ್ತು ಅದೇ ಶರತ್ತಿನೊಂದಿಗೆ ಕೊಡಬಹುದು. ಅಂದರೆ ಕಣ್ಣಿನ ಬ್ಯಾಂಕಿನವರು ಅದನ್ನು ಮಾರಾಟ ಮಾಡಬಾರದು. ಅತಿ ಅಗತ್ಯವಿರುವ ಬಡವರಿಗೆ ಅದನ್ನು ಕೊಡುವಂತೆ ಶರತ್ತು ವಿಧಿಸಬಹುದು.

ಒಬ್ಬ ವ್ಯಕ್ತಿ ಮರಣ ಹೊಂದಿದಾಗ ಅವನ ಕರ್ಮ ಪತ್ರ ಕೊನೆಗೊಳ್ಳುವುದು. ಆದರೆ ಮೂರು ವಸ್ತುಗಳು ಅವನ ಮರಣಾನಂತರವೂ ಅವನಿಗೆ ಪ್ರತಿಫಲ ಅಥವಾ ಪುಣ್ಯ ಕೊಡುತ್ತಲೇ ಇರುವುದೆಂದು ವಿದ್ವಾಂಸರು ಹೇಳುತ್ತಾರೆ. ಅದರಲ್ಲಿ ಒಂದು ಶಾಶ್ವತ ದಾನ. ಕಣ್ಣು ದಾನ ಮಾಡುವುದರಿಂದ ಇನ್ನೊಬ್ಬನಿಗೆ ಪ್ರಯೋಜನವಾಗುತ್ತದೆ. ಅವನು ಅದರಿಂದ ಪ್ರಯೋಜನ ಪಡೆಯುತ್ತಿರುವ ಕಾಲದ ವರೆಗೆ ದಾನ ಮಾಡಿದವನಿಗೆ ಪುಣ್ಯ ದೊರೆಯುತ್ತಲಿರುವುದು.

# ಸ್ನಾನ ಕಡ್ಡಾಯವೇ?

ಎ.ಜೆ. ಪಠಾಣ, ಬೆಂಗಳೂರು

**● ಜುಮಾ ನಮಾಝ್‌ಗೆ ಗುಸ್ಲ್ ಕಡ್ಡಾಯ ಅಂತ ನಮ್ಮ ಭಾವನೆ, ಅದರಂತೆ ಜನಾಬತ್‌ಗೂ ಸ್ನಾನ ಕಡ್ಡಾಯ ಅಂತ ಅನಿಸಿಕೆ. ಶುಕ್ರವಾರ ದಿವಸ ಜನಾಬತ್ ಸ್ಥಿತಿಯಲ್ಲಿರುವಾಗ ಜುಮಾದ ಗುಸ್ಲ್ ಮತ್ತು ಜನಾಬತ್ ಗುಸ್ಲ್ ಏಕಕಾಲಕ್ಕೆ ಕೈಗೊಳ್ಳಬಹುದೇ? ಸ್ನಾನ ಮಾಡುವಾಗ ಎರಡು ಸಲ ವುಝೂ ಮಾಡಿ ಸ್ನಾನ ಮಾಡಬೇಕೇ? ದಯವಿಟ್ಟು ತಿಳಿಸಿ.**

❍ ಜುಮಾ ನಮಾಝ್‌ಗೆ ಗುಸ್ಲ್ ಅಥವಾ ಸ್ನಾನ ಕಡ್ಡಾಯವಲ್ಲ. ಜುಮಾ ದಿವಸ ಸ್ನಾನ ಮಾಡುವಂತೆ ಪ್ರವಾದಿ(ಸ) ತಾಕೀತು ಮಾಡಿದ್ದಾರೆ. ಜುಮಾ ದಿವಸ ಪ್ರತಿಯೋರ್ವ ಪ್ರೌಢವ್ಯಕ್ತಿ ಅಗತ್ಯವಾಗಿ ಸ್ನಾನ ಮಾಡಬೇಕೆಂದು ಪ್ರವಾದಿ(ಸ) ಹೇಳಿದ್ದಾರೆ. (ಬುಖಾರಿ-ಮುಸ್ಲಿಮ್) ಜುಮಾ ದಿವಸ ಸ್ನಾನ ಸುನ್ನತ್ ಆಗಿದೆ. ವಾಜಿಬ್ ಅಥವಾ ಕಡ್ಡಾಯವಲ್ಲ.

ಆದರೆ ಜನಾಬತ್‌ನ ಸ್ಥಿತಿಯಲ್ಲಿ ಸ್ನಾನ ಕಡ್ಡಾಯವಾಗಿದೆ. ಸ್ವಪ್ನಸ್ಖಲನ ಮತ್ತು ಸ್ತ್ರೀ ಪುರುಷರ (ಪತಿ-ಪತ್ನಿಯರ) ಗುಪ್ತಾಂಗಗಳ ಪರಸ್ಪರ ಮಿಲನದಿಂದ -ಅರ್ಥಾತ್ ಪುರುಷ ಜನನಾಂಗವು ಸ್ತ್ರೀ ಜನನಾಂಗದೊಳಗೆ ಪ್ರವೇಶಿಸಿದರೆ ಸ್ನಾನ ಕಡ್ಡಾಯವಾಗಿದೆ. ವೀರ್ಯಸ್ಖಲನ ಆಗದಿದ್ದರೂ ಸರಿ. ಆದರೆ ಕೇವಲ ಸ್ಪರ್ಶಕ್ಕೆ ಸ್ನಾನದ ಅಗತ್ಯವಿಲ್ಲ.

ಇನ್ನು ಜುಮಾ ದಿವಸವೇ ಜನಾಬತ್‌ನ ಸ್ಥಿತಿಯೂ ಉಂಟಾದರೆ ಎರಡಕ್ಕೂ ಒಂದೇ ಸ್ನಾನ, ಒಂದೇ ವುಝೂ ಸಾಕಾಗುತ್ತದೆ. ದೊಡ್ಡ ಅಶುದ್ಧಿಯನ್ನು ಹೋಗಲಾಡಿಸಲು ಸ್ನಾನ ಮಾಡುತ್ತೇವೆ ಎಂದು ಸಂಕಲ್ಪ ಮಾಡಿದರೆ ಸಾಕು.

# ರೋಗ ಮುಕ್ತವಾದವನಿಗೆ ಸತ್ಕಾರ?

ಗುಲಾಮ್ ಮುಸ್ತಫಾ ಗುಲ್ಬರ್ಗಾ

**● ಸಂಬಂಧಿಕರಲ್ಲಿ ಯಾರಾದರೂ ರೋಗದಿಂದ ಗುಣಮುಖವಾದ ಸಂದರ್ಭದಲ್ಲಿ ಬೇರೆ ಸಂಬಂಧಿಕರು ಹೊಸಬಟ್ಟೆ, ಸಿಹಿತಿಂಡಿ ಮತ್ತು ಹೂವಿನ ಹಾರ ಇತ್ಯಾದಿಗಳ ವ್ಯವಸ್ಥೆ ಮಾಡಿ ಆ ಸಂಬಂಧಿಕರನ್ನು ಕರೆದು ಅವರಿಗೆ ಶುಭ ಹಾರೈಸುತ್ತಾರೆ. ಇದರ ಬಗ್ಗೆ ಕುರ್‌ಆನ್-ಸುನ್ನತ್‌ನಲ್ಲಿ ಯಾವ ಮಾರ್ಗದರ್ಶನವಿದೆ ಎಂದು ತಿಳಿಸಿ.**

❍ ಮನುಷ್ಯ ಕಾಯಿಲೆ ಬಿದ್ದಾಗ ಅವನನ್ನು ಹೋಗಿ ಸಂದರ್ಶಿಸುವುದು ಅವನು ಗುಣಮುಖವಾಗಲಿಕ್ಕಾಗಿ ಪ್ರಾರ್ಥಿಸುವುದು ಇತ್ಯಾದಿ ಪ್ರವಾದಿಚರ್ಯೆಯಲ್ಲಿರುವ ವಿಷಯಗಳಾಗಿವೆ. ರೋಗ ಸಂದರ್ಶನದ ವೇಳೆ ರೋಗಿಗೆ ಹಣ್ಣು ಹಂಪಲು ಇತ್ಯಾದಿಗಳನ್ನು ಕೊಂಡು ಹೋಗಿ ಕೊಡುವುದರಲ್ಲಿ ಅಡ್ಡಿಯಿಲ್ಲ. ಆದರೆ ಗುಣಮುಖವಾದ ನಂತರ ಅದನ್ನೊಂದು ಗೆಲುವಿನ ಆಚರಣೆಯೆಂಬಂತೆ ಬಟ್ಟೆಬರೆ, ಸಿಹಿತಿಂಡಿ, ಹೂವಿನ ಹಾರವನ್ನು ನೀಡಿ ಸತ್ಕರಿಸುವುದಕ್ಕೆ ಪ್ರವಾದಿಚರ್ಯೆಯಲ್ಲಿ ಯಾವುದೇ ಆಧಾರವಿಲ್ಲ. ಅದನ್ನು ಬಿದ್‌ಅತ್ ಅಥವಾ ನವೀನಾಚಾರವೆನ್ನಬಹುದು. ಬಿದ್‌ಅತನ್ನು ಶರೀಅತ್‌ನಲ್ಲಿ ಖಂಡಿಸಲಾಗಿದೆ.

**ಇಸ್ಲಾಮ್: ಸಂಶಯ ನಿವಾರಣೆ ಬಯಸುವಿರಾ?**

ಇಸ್ಲಾಮ್, ಪವಿತ್ರ ಕುರ್‌ಆನ್, ಪ್ರವಾದಿ ಮುಹಮ್ಮದ್(ಸ), ಜಿಹಾದ್,
ಇತ್ಯಾದಿ ವಿಷಯಗಳ ಕುರಿತು ನಿಮ್ಮ ಸಂಶಯಗಳು ಮತ್ತು
ಪ್ರಶ್ನೆಗಳಿಗೆ ಸೂಕ್ತ ಪರಿಹಾರ ಬಯಸುವಿರಾ?

ಹಿಂದೂ, ಕ್ರೈಸ್ತ ಮತ್ತಿತರ ದೇಶ ಬಾಂಧವರಿಗೆ ಓದಲು ಉಚಿತವಾಗಿ ಪುಸ್ತಕಗಳನ್ನು ರವಾನಿಸಲಾಗುವುದು.

ಸಂಪರ್ಕಿಸಿರಿ : ISMIKA, P.B. No. 229, Mangalore

# ಕುರ್‌ಆನ್ ಅಧ್ಯಯನ 506

## ಅಧ್ಯಾಯ: 4 ಅನ್ನಿಸಾ

### ವಚನ 59ರ ಟಿಪ್ಪಣಿಯ ಮುಂದುವರಿದ ಭಾಗ

ಅಲ್ಲಾಹನನ್ನು ಅನುಸರಿಸುವುದೆಂದರೆ ಅಲ್ಲಾಹನು ಅವತೀರ್ಣಗೊಳಿಸಿದ ಗ್ರಂಥವನ್ನು ಅನುಸರಿಸುವುದಾಗಿದೆ. ಅಲ್ಲಾಹನು ಗ್ರಂಥದ ಮೂಲಕ ತನ್ನ ವಿಧಿ ನಿಷೇಧ ಮತ್ತು ಆದೇಶ ನಿರ್ದೇಶಗಳನ್ನು ಮಾನವರಿಗೆ ನೀಡುತ್ತಾನೆ. ಕುರ್‌ಆನ್ ಅಲ್ಲಾಹನ ಅಂತಿಮ ಗ್ರಂಥವಾಗಿದೆ. ಆದ್ದರಿಂದ ಅಲ್ಲಾಹನನ್ನು ಅನುಸರಿಸಬೇಕೆಂದು ಕುರ್‌ಆನ್ ಹೇಳುವಾಗ ಅದರ ಉದ್ದೇಶವು ಪವಿತ್ರ ಕುರ್‌ಆನ್‌ನಲ್ಲಿರುವ ವಿಧಿ ನಿಷೇಧ ಮತ್ತು ಆದೇಶ ನಿರ್ದೇಶಗಳನ್ನು ಪಾಲಿಸಬೇಕೆಂದೇ ಆಗಿದೆ. ಶರೀಅತ್‌ನ ಪಾರಿಭಾಷಿಕದಲ್ಲಿ ಅದನ್ನು ಕಿತಾಬ್ ಎನ್ನಲಾಗುತ್ತದೆ. 2. ಅಲ್ಲಾಹ್ ಮತ್ತು ಪ್ರವಾದಿಯೊಂದಿಗಿನ ಅನುಸರಣೆಯು ಈಮಾನ್‌ನ ಅನಿವಾರ್ಯ ಬೇಡಿಕೆಯಾಗಿದೆಯೆಂಬುದೇ 2ನೇ ಪ್ರಧಾನ ಅಂಶವಾಗಿದೆ. 'ನೀವು ಅಲ್ಲಾಹನಲ್ಲಿಯೂ ಅಂತ್ಯದಿನದಲ್ಲಿಯೂ ವಿಶ್ವಾಸವಿರಿಸುವುದಿದ್ದರೆ' ಎಂಬ ವಚನ ಭಾಗವು ಅದಕ್ಕೆ ಒತ್ತು ನೀಡುತ್ತದೆ. ಅಲ್ಲಾಹನನ್ನೂ ಪ್ರವಾದಿಯನ್ನೂ ತಮ್ಮ ನಾಯಕತ್ವವನ್ನೂ ಅನುಸರಿಸದಿದ್ದರೆ ವಿಶ್ವಾಸಿಯೆಂದು ವಾದಿಸುವುದು ಅರ್ಥಹೀನವಾಗಿದೆ.

'ಅತೀಊ' ಎಂಬುದು 'ಇತಾಅತ್' (ಅನುಸರಣೆ) ಎಂಬ ಪದದ ಕ್ರಿಯಾ ರೂಪವಾಗಿದೆ. ಅನುಸರಣೆಯ ಅನೇಕ ಹಂತಗಳಿವೆ. ಮನಪೂರ್ವಕ ಅನುಸರಣೆ, ಶರ್ತರಹಿತ ಅನುಸರಣೆ, ಶರ್ತಬದ್ಧ ಅನುಸರಣೆ ಇತ್ಯಾದಿ. ಇಲ್ಲಿ 'ಅತೀಉಲ್ಲಾಹ' ಎಂಬ ಪದದಲ್ಲಿರುವ ಅನುಸರಣೆಯು ಬೇಶರತ್ ಮತ್ತು ಪರಿಪೂರ್ಣ ಅನುಸರಣೆಯಾಗಿದೆ. ಅದು ಇಲ್‌ಬುದುಲ್ಲಾಹ–ಇತ್ತಕುಲ್ಲಾಹ (ಅಲ್ಲಾಹನ ಭಯವಿರಿಸಿ ಕೊಳ್ಳಿರಿ, ಅಲ್ಲಾಹನ ದಾಸ್ಯ–ಆರಾಧನೆ ಮಾಡಿರಿ) ಎನ್ನುವುದಕ್ಕೆ ಸಮಾನವಾಗಿದೆ. ಅಲ್ಲಾಹ್ ಎಂಬ ಹೆಸರಲ್ಲಿ ದೇವನೆಂಬ ಆಸ್ತಿತ್ವದ ಎಲ್ಲ ಗುಣಗಳೂ ಸೇರಿವೆ. ಅಲ್ಲಾಹನನ್ನು ಅನುಸರಿಸುವುದೆಂದರೆ ಅಲ್ಲಾಹನ ಎಲ್ಲ ಗುಣಗಳನ್ನು ಬೇಡಿಕೆಗಳನ್ನು ಅರ್ಥಾತ್: ಸೃಷ್ಟಿಕರ್ತ, ಪ್ರಭು, ಸರ್ವಶಕ್ತ, ಸರ್ವಜ್ಞ, ಸರ್ವಾಧಿಕಾರಿ ಇತ್ಯಾದಿ ಎಲ್ಲ ನೆಲೆಯಲ್ಲಿಯೂ ಅಲ್ಲಾಹನನ್ನು ಅನುಸರಿಸುವುದಾಗಿದೆ. ವಅತೀಉರ್‌ರಸೂಲ್ (ಪ್ರವಾದಿಯನ್ನು ಅನುಸರಿಸಿರಿ) ಎಂಬ ಮಾತಿಗೆ ಅಷ್ಟು ವ್ಯಾಪಕ ಅರ್ಥವಿಲ್ಲ. ರಸೂಲ್ (ದೇವ ಸಂದೇಶವಾಹಕ) ಎಂಬುದು ಒಂದು ಆಸ್ತಿತ್ವದ (ಒಂದು ವ್ಯಕ್ತಿಯ) ಅನೇಕ ಗುಣಗಳಲ್ಲಿ ಒಂದಾಗಿದೆ. ಮಾನವ, ಅರಬಿ, ಕುರೈಶಿ, ಅಬ್ದುಲ್ಲಾ ಎಂಬವರ ಪುತ್ರ ಮುಹಮ್ಮದ್ ಹೀಗೆ ಅವರಿಗೆ ವಿವಿಧ ಸ್ಥಿತಿಗಳಿವೆ. ಅರ್‌ರಸೂಲ್ ಎಂಬ ದೃಷ್ಟಿಯಿಂದ ಮುಹಮ್ಮದ್ ಬಿನ್ ಅಬ್ದುಲ್ಲಾರನ್ನು ಪ್ರಶ್ನಾತೀತವಾಗಿ ಅನುಸರಿಸಬೇಕು. ಯಾಕೆಂದರೆ, ರಸೂಲ್ ಎಂಬ ಸ್ಥಿತಿಯಲ್ಲಿ ಅವರ ಆಜ್ಞೆಯು ಅಲ್ಲಾಹನ ಆಜ್ಞೆ ಮತ್ತು ಅವರ ಅನುಸರಣೆಯು ಅಲ್ಲಾಹನ ಅನುಸರಣೆಯಾಗಿ ಮಾರ್ಪಡುತ್ತದೆ. ಈ ಅಧ್ಯಾಯದ 80ನೇ ವಚನದಲ್ಲಿ ಈ ವಿಚಾರವನ್ನು ಹೀಗೆ ಮಂಡಿಸಲಾಗಿದೆ, "ಪ್ರವಾದಿಯನ್ನು ಅನುಸರಿಸಿದಾತನು ಅಲ್ಲಾಹನನ್ನು ಅನುಸರಿಸಿದನು.' ಅಶ್ಶುಅರಾ ಅಧ್ಯಾಯದ 108, 126, 144, 163, 179ನೇ ವಚನಗಳಲ್ಲಿ ಅನೇಕ ಪ್ರವಾದಿಗಳ ಬೋಧನೆಗಳ ಕುರಿತು ಹೀಗೆ ಉದ್ಧರಿಸಲಾಗಿದೆ: ನಾನು ನಿಮಗಾಗಿ ನೇಮಕಗೊಂಡ ಪ್ರಾಮಾಣಿಕ ಪ್ರವಾದಿಯಾಗಿದ್ದೇನೆ. ಆದ್ದರಿಂದ ನೀವು ಅಲ್ಲಾಹನ ಭಯವಿರಿಸಿಕೊಳ್ಳಿರಿ. ನನ್ನನ್ನು ಅನುಸರಿಸಿರಿ. ಪ್ರವಾದಿ ಮತ್ತು ದೇವ ಸಂದೇಶವಾಹಕ ಎಂಬ ಸ್ಥಿತಿಯು ಅವರನ್ನು ವಿಶ್ವಾಸಿಗಳ ಅನುಸರಣೆಗೆ



ಹಕ್ಕುದಾರರಾಗಿ ಮಾಡುತ್ತದೆ. ಅಲ್ಲಾಹನೊಂದಿಗೆ ಭಯ ಭಕ್ತಿಯು ಪ್ರವಾದಿಯ ಅನುಸರಣೆಯನ್ನು ಜನರಿಗೆ ನಿರ್ಬಂಧಗೊಳಿಸುತ್ತದೆ. ಅಲ್ಲಾಹನ ಅನುಸರಣೆಯಲ್ಲಿ ಈ ರೀತಿಯ ಮಿತಿ ಮತ್ತು ಶರ್ತಗಳಲ್ಲಿ ಅದು ಕೇವಲ ಸಂಪೂರ್ಣವಾಗಿದೆ.

ಪ್ರವಾದಿಯವರ ಅನುಸರಣೆಯ ಆಜ್ಞೆಯನ್ನು ಕುರ್‌ಅನ್ 3 ರೀತಿಯಲ್ಲಿ ನೀಡಿದೆ. 1. "ಅಲ್ಲಾಹನನ್ನೂ ಪ್ರವಾದಿಯನ್ನೂ ಅನುಸರಿಸಿರಿ." (3: 32, 132) 2. "ಅಲ್ಲಾಹನನ್ನು ಅನುಸರಿಸಿ, ಪ್ರವಾದಿಯನ್ನೂ ಅನುರಿಸಿರಿ." (4: 59) 3. "ಪ್ರವಾದಿಯನ್ನು ಅನುಸರಿಸಿರಿ" ಮೂರರ ಬಾಹ್ಯಾರ್ಥವು ಒಂದೇ ಆಗಿದ್ದರೂ ವಿವರಣೆಗಳು ಸಂದರ್ಭಾನುಸಾರ ಭಿನ್ನವಾಗುತ್ತದೆ. ಈ ವಚನದಲ್ಲಿ ಅಲ್ಲಾಹನನ್ನು ಅನುಸರಿಸಿರಿ, ಪ್ರವಾದಿಯನ್ನು ಅನುಸರಿಸಿರಿ ಎಂದು ಹೇಳಿರುವುದರ ತಾತ್ಪರ್ಯವು, ಅಮಾನತ್ ಮತ್ತು ಅಲ್ಲ್‌ನ್ (ನ್ಯಾಯ ಮತ್ತು ನೀತಿಯು) ಆಧಾರವಾಗಿ ಅಲ್ಲಾಹನು ಅವತೀರ್ಣಗೊಳಿಸಿರುವ ಗ್ರಂಥವನ್ನು, ಕುರ್‌ಆನನ್ನೂ, ಆ ಗ್ರಂಥದ ಅಧಿಕೃತ ವ್ಯಾಖ್ಯಾನವಾಗಿರುವ ದೇವ ಪ್ರವಾದಿಯ ನಡವಳಿಕೆಗಳನ್ನೂ ಅಂಗೀಕರಿಸಬೇಕೆಂದಾಗಿದೆ. ಕುರ್‌ಆನ್ ನಮಾಝ್ ಮತ್ತು ಝಕಾತ್‌ನ ಆಜ್ಞೆ ನೀಡುತ್ತದೆ. ನಮಾಝ್‌ನ ವೇಳೆಗಳು, ರಕಅತ್‌ಗಳು, ಕ್ರಮ, ಝಕಾತ್‌ನ ಮಿತಿ, ಪಾಲು, ಹಕ್ಕುದಾರರು ಇತ್ಯಾದಿ ವಿಷಯಗಳನ್ನು ಪ್ರವಾದಿಯವರು ಆದೇಶಿಸಿದ್ದಾರೆ. ಆದರೆ ಈ ಆದೇಶಗಳು ಪ್ರವಾದಿಯವರ ವೈಯಕ್ತಿಕ ಆದೇಶಗಳಲ್ಲ. ಗ್ರಂಥದ ವಿವರಣೆಗಳಾಗಿವೆ. ಅನ್ನಹ್ಲ್ ಅಧ್ಯಾಯದ 44ನೇ ವಚನದಲ್ಲಿ ಅಲ್ಲಾಹನು ಹೇಳುತ್ತಾನೆ. "ನಾವು ನಿಮಗೆ ದಿವ್ಯ ಬೋಧನೆಯನ್ನು ಅವತೀರ್ಣಗೊಳಿಸಿರುತ್ತೇವೆ. ಜನರಿಗೆ ಅವತೀರ್ಣಗೊಳಿಸಿರುವುದನ್ನು ನೀವು ಅವರಿಗೆ ವಿವರಿಸಿಕೊಡಲಿಕ್ಕಾಗಿ."

ಕುರ್‌ಆನ್ ಪ್ರಸ್ತಾವಿಸಿಲ್ಲದ ಕೆಲವು ವಿಷಯಗಳನ್ನೂ ಪ್ರವಾದಿಯವರು ಆಜ್ಞಾಪಿಸಿದ್ದಾರೆ. ಉದಾ: ಫಿತ್ರ್ ಝಕಾತ್. ಪ್ರವಾದಿಯವರ ಅನುಸರಣೆಯನ್ನು ತೊರೆದರೆ ನಮಾಝ್, ಝಕಾತ್ ಮುಂತಾದ ಆರಾಧನೆಗಳು ಹಾಗೂ ಇತರ ಧಾರ್ಮಿಕ ಕಾನೂನುಗಳನ್ನು ಅವುಗಳ ನೈಜ ರೂಪದಲ್ಲಿ ಪಾಲಿಸಲು ಸಾಧ್ಯವಿಲ್ಲ. ಪ್ರವಾದಿಯವರು ತೋರಿಸಿಕೊಟ್ಟಿದ್ದೇ ದೀನ್ ಆಗಿದೆ. ಆದ್ದರಿಂದಲೇ ಅಲ್ ಹಶ್ರ್ ಅಧ್ಯಾಯದ 7ನೇ ವಚನದಲ್ಲಿ ಹೀಗೆ ಆಜ್ಞಾಪಿಸಲಾಗಿದೆ: "ದೇವ ಪ್ರವಾದಿಯವರು ನಿಮಗೆ ನೀಡಿರುವುದನ್ನು ಸ್ವೀಕರಿಸಿರಿ. ಅವರು ನಿಷೇಧಿಸಿರುವುದನ್ನು ತೊರೆಯಿರಿ." ಪ್ರವಾದಿಗಳ ಆಜ್ಞೆಗಳೊಂದಿಗೆ ಅನುವರ್ತಿಸಬೇಕಾದ ಈ ಧೋರಣೆಯು ಕೇವಲ ಒಂದು ಶಿಫಾರಸಲ್ಲ. ಅಲ್ಲಾಹನ ಕಡ್ಡಾಯ ಆಜ್ಞೆಯಾಗಿದೆ. ಪ್ರವಾದಿಯವರ ಅನುಸರಣೆಯು ಗ್ರಂಥದ ಅನುಸರಣೆಗೆ ಸಮಾನವಾಗಿದೆ. ಪ್ರವಾದಿಯವರ ನೇಮಕ ಧ್ಯೇಯವೇ "ವಿಶ್ವಾಸಿಗಳಿಂದ ಅನುಸರಿಸಲ್ಪಡುವುದಾಗಿದೆ. ಅಲ್ಲಾಹನ ಅನುಮತಿಯಿಂದ ಅನುಸರಿಸಲಿಕ್ಕಾಗಿಯಲ್ಲದೆ ನಾವು ಯಾವೊಬ್ಬ ಪ್ರವಾದಿಯನ್ನೂ ರವಾನಿಸಿಲ್ಲ."

ಪ್ರವಾದಿಯವರ ಜೀವನ ಕಾಲದಲ್ಲಿ ಪ್ರವಾದಿಯನ್ನು ಅನುಸರಿಸಬೇಕೆನ್ನುವುದರ ಅರ್ಥವು ಸ್ಪಷ್ಟವಾಗಿದೆ. ಆದರೆ, ಅವರ ಕಾಲಾನಂತರ ಅವರನ್ನು ಅನುಸರಿಸುವುದು ಹೇಗೆ? ಪ್ರವಾದಿಯವರು ಪವಿತ್ರ ಕುರ್‌ಆನ್‌ನ ಅಧಿಕೃತ ವ್ಯಾಖ್ಯಾನಗಾರೆಂದು ಈ ಹಿಂದೆ ಸೂಚಿಸಲಾಗಿದೆಯಲ್ಲವೇ. ಅವರ ನಡವಳಿಕೆಗಳನ್ನು ಮುಸ್ಲಿಮ್ ಸಮುದಾಯವು ಕಡ್ಡಾಯವಾಗಿ ಹಿಂಬಾಲಿಸಬೇಕಾದುದು ಸಂಪ್ರದಾಯವಾಗಿದೆ. ಅತೀಉರ್‌ರಸೂಲ ಎಂಬ ಆಜ್ಞೆಯು ಈ ಸಮುದಾಯಗಳಿಗೆ ಅಲ್ಲಾಹನು ನೀಡುವ ಅಧಿಕೃತ ದೃಢೀಕರಣವಾಗಿದೆ. ಪ್ರವಾದಿಯವರು ಬದುಕಿದ್ದಾಗ ಅವರ ವಿಧಿ ನಿಷೇಧಗಳನ್ನು ನೇರವಾಗಿ ಅಂಗೀಕರಿಸಿ ಅನುಸರಿಸಿದಂತೆ, ಅವರ ಕಾಲಾನಂತರವೂ ಆ ವಚನ ಚರಿತ್ರೆಯು ಅನುಸರಿಸಲ್ಪಡಬೇಕು. ಹೀಗೆ ಅನುಸರಿಸಲ್ಪಡಬೇಕಾದ ಪ್ರವಾದಿ ಚರ್ಯೆಗಳನ್ನು ಶರೀಅತ್‌ನ ಪಾರಿಭಾಷಿಕದಲ್ಲಿ "ಸುನ್ನತ್' ಎಂದು ಕರೆಯಲಾಗುತ್ತದೆ. ಮುಸ್ಲಿಮ್ ವಿದ್ವಾಂಸರು ಅನೇಕ ಬೃಹತ್ ಗ್ರಂಥಗಳಲ್ಲಿ ಪ್ರವಾದಿ ಚರ್ಯೆಯನ್ನು ವಿವರವಾಗಿ ದಾಖಲಿಸಿದ್ದಾರೆ. ಅವುಗಳನ್ನು ಹದೀಸ್ ಗ್ರಂಥ ಎನ್ನಲಾಗುತ್ತಿದೆ.

# ಸಹೀಹ್ ಬುಖಾರಿ

ಅನುವಾದ: ಎಂ.ಎಸ್.ಕೆ.

## ನಿಷೇಧಿತ ಮಾರಾಟ

**233.** ಅಬೂ ಹುರೈರಾ(ರ) ಹೇಳುತ್ತಾರೆ- ಪ್ರವಾದಿ(ಸ) ಎರಡು ರೀತಿಯ ಮಾರಾಟವನ್ನು ನಿಷೇಧಿಸಿದ್ದಾರೆ. ಬೈಅ್ ಲಮಾಸ್ ಮತ್ತು ಬೈಅ್ ನಿಯಾದ್. ಬೈಅ್ ಲಮಾಸ್ ಎಂದರೆ ಖರೀದಿದಾರರು ಯಾವುದಾದರೂ ವಸ್ತುವನ್ನು ಬಿಟ್ಟು ಬಿಟ್ಟರೆ ಅದನ್ನು ಪಡೆಯುವುದು ಕಡ್ಡಾಯವಾಗಿರುವುದು. ಬೈಅ್ ನಿಯಾದ್ ಎಂದರೆ ಮಾರಾಟಗಾರರು ಖರೀದಿದಾರನ ಅಗತ್ಯದ ವಸ್ತುವನ್ನು ಅವನತ್ತ ಎಸೆದಾಗ ಅದನ್ನು ಸ್ವೀಕರಿಸುವುದು ಕಡ್ಡಾಯವಾಗಿರುವುದು. ಅದೇ ರೀತಿ ಕೈಕಾಲುಗಳು ಹೊರತೆಗೆಯಲು ಅವಕಾಶವಿಲ್ಲದ ರೀತಿಯಲ್ಲಿ ಬಟ್ಟೆ ಧರಿಸಿರುವುದನ್ನು ಅಥವಾ ಒಂದೇ ಬಟ್ಟೆಯುಟ್ಟು ಕುಳಿತುಕೊಳ್ಳುವುದನ್ನು ಪ್ರವಾದಿ(ಸ) ತಡೆದಿದ್ದಾರೆ.

## ನಗ್ನತೆಗೆ ಅವಕಾಶವಿಲ್ಲ

**234.** ಅಬೂಹುರೈರಾ(ರ) ಹೇಳುತ್ತಾರೆ- ಅಬೂಬಕರ್(ರ) ಹಜ್ಜ್ ಯಾತ್ರೆಯ ಸಮಯದಲ್ಲಿ ನನ್ನನ್ನು ಹರಿಕಾರರ ಜೊತೆ ಕಳಿಸಿದರು. ಅವರು, "ಈ ವರ್ಷದ ನಂತರ ಯಾವ ಮುಶ್ರಿಕನೂ ಹಜ್ಜ್ ಕರ್ಮ ನಿರ್ವಹಿಸಬಾರದು. ಯಾರೂ ನಗ್ನವಾಗಿ ಕಅಬಾ ಪ್ರದಕ್ಷಿಣೆ ಮಾಡಬಾರದು" ಎಂದು ಘೋಷಿಸುತ್ತಿದ್ದರು. ಅನಂತರ ಪ್ರವಾದಿ(ಸ) ಅಲೀಯವರನ್ನು ಸವಾರಿಯಲ್ಲಿ ಹಿಂದಿನಿಂದ ಕಳಿಸುತ್ತಾ, ಬರಾಅತ್(ಅತ್ತೌಬ) ಅಧ್ಯಾಯವನ್ನು ಘೋಷಿಸಿ ಓದುವಂತೆ ಆದೇಶಿಸಿದರು. ಅಬೂಹುರೈರಾ ಹೇಳುತ್ತಾರೆ- ಅಲಿಯವರು ಮಿನಾವಾಸಿಗಳಲ್ಲಿ ಈ ರೀತಿ ಘೋಷಿಸಿದರು, "ಈ ವರ್ಷದ ನಂತರ ಯಾವ ಮುಶ್ರಿಕನೂ ಹಜ್ ಕರ್ಮ ನಿರ್ವಹಿಸಬಾರದು. ಯಾರೂ ನಗ್ನವಾಗಿ ಕಅಬಾ ಪ್ರದಕ್ಷಿಣೆ ಮಾಡಬಾರದು."

## ವಿಶಿಷ್ಟ ಮಹ್ರ್ ಮತ್ತು ವಲೀಮಾ

**235.** ಅನಸ್(ರ) ಹೇಳುತ್ತಾರೆ- ಪ್ರವಾದಿ(ಸ) ಖೈಬರ್ ಯುದ್ಧದಲ್ಲಿದ್ದರು. ನಾವು ಯುದ್ಧದ ಸ್ಥಳಕ್ಕೆ ಹತ್ತಿರವೇ ಕತ್ತಲೆಯಲ್ಲಿ ಫಜ್ರ್ ನಮಾಝ್ ನಿರ್ವಹಿಸಿದ್ದೆವು. ತರುವಾಯ ಪ್ರವಾದಿವರ್ಯರು(ಸ) ಸವಾರಿಯ ಮೇಲೆ ಕುಳಿತರು. ನಾನು ಅವರ ಹಿಂದೆ ಕುಳಿತಿದ್ದೆ. ಪ್ರವಾದಿ(ಸ) ಖೈಬರ್‌ನ ಗಲ್ಲಿಗಳಲ್ಲಿ(ತಮ್ಮ ಸವಾರಿಯನ್ನು) ನಡೆಸುತ್ತಿದ್ದರು. ನನ್ನ ಮೊಣಕಾಲು ಅವರ ತೊಡೆಗೆ ತಾಗುತ್ತಿತ್ತು. ಪ್ರವಾದಿ(ಸ) ಗ್ರಾಮಕ್ಕೆ ಪ್ರವೇಶಿಸಿದಾಗ ಹೇಳಿದರು, "ಅಲ್ಲಾಹು ಅಕ್ಬರ್! ಖೈಬರ್ ಬರಿದಾಯಿತು. ನಾವು ಯಾವುದಾದರೂ ಜನಾಂಗದ ಹೊಸ್ತಿಲಿಗೆ ಪ್ರವೇಶಿಸಿದಾಗ ನಾವು ಬೆದರಿಸುವವರ ಪ್ರಭಾತವು ಕೆಟ್ಟದಾಗಿರುತ್ತದೆ (ಅಂದರೆ ಅವರು ನಾಶವಾಗುತ್ತಾರೆ)" ಪ್ರವಾದಿ(ಸ) ಈ ಮಾತನ್ನು ಮೂರು ಬಾರಿ ಹೇಳಿದರು.

ವರದಿಗಾರ ಹೇಳುತ್ತಾರೆ- ಜನರು ತಮ್ಮ ಕೆಲಸಕಾರ್ಯಗಳಿಗೆ ತೆರಳುತ್ತಿದ್ದರು. ಮುಹಮ್ಮದ್ ಮತ್ತವರ ಸೇನೆ! (ಎಂದವರು ಹೇಳತೊಡಗಿದರು.) ಈ ರೀತಿ ನಾವು ಖೈಬರನ್ನು ಬಲವಂತವಾಗಿ ವಶಪಡಿಸಿದೆವು. ಆ ಬಳಿಕ ಕೈದಿಗಳನ್ನು ಒಂದುಗೂಡಿಸಲಾಯಿತು. ದಹ್ಯಾ ಬಂದು, "ಪ್ರವಾದಿವರ್ಯರೇ! ಕೈದಿಗಳ ಪೈಕಿ ಓರ್ವ ದಾಸಿಯನ್ನು ನನಗೆ ದಯಪಾಲಿಸಿರಿ" ಎಂದರು. ಪ್ರವಾದಿ(ಸ), "ಹೋಗು. ಓರ್ವಳನ್ನು ಪಡೆದುಕೋ ಎಂದರು. ಅವರು ಸಫಿಯ್ಯ ಬಿಂತಿ ಹುಯ್ಯ್‌ರನ್ನು ಪಡೆದರು. ಆಗ ಒಬ್ಬ ವ್ಯಕ್ತಿ ಬಂದು ಹೇಳಿದರು, "ಪ್ರವಾದಿವರ್ಯರೇ! ತಾವು ಸಫಿಯ್ಯಾ ಬಿಂತಿ ಹುಯ್ಯ್‌ರನ್ನು ದಹ್ಯಾರಿಗೆ ನೀಡಿದ್ದೀರಿ. ಅವರು ಕುರೈಝಾ ಮತ್ತು ನಝೀರ್ ಗೋತ್ರಗಳ ಸರದಾರರಾಗಿದ್ದಾರೆ. ಆಕೆ ತಮಗೇ ಸೂಕ್ತ." ಪ್ರವಾದಿವರ್ಯರು ದಹ್ಯಾರನ್ನು ಕರೆಯಿರಿ ಎಂದರು. ದಹ್ಯಾ ಬಂದಾಗ, ಪ್ರವಾದಿವರ್ಯರು "ಸಫಿಯ್ಯಾರನ್ನು ನೋಡಿ, ಇವಳ ಹೊರತು ಬೇರೊಬ್ಬ ದಾಸಿಯನ್ನು ಪಡೆ" ಎಂದರು. ತರುವಾಯ ಪ್ರವಾದಿವರ್ಯರು ಸಫಿಯ್ಯಾರನ್ನು ಸ್ವತಂತ್ರಗೊಳಿಸಿ ಅವರನ್ನು ವಿವಾಹವಾದರು. ಅವರ ಸ್ವಾತಂತ್ರ್ಯವನ್ನೇ ಮಹ್ರ್ ಎಂದು ಪರಿಗಣಿಸಿದರು.

ಪ್ರವಾದಿ(ಸ) ಪ್ರಯಾಣದ ದಾರಿಯಲ್ಲೇ ಇದ್ದರು. ಉಮ್ಮು ಸುಲೈಮ್(ರ) ಸಫಿಯ್ಯರನ್ನು ಅಲಂಕರಿಸಿ ರಾತ್ರಿ ಪ್ರವಾದಿಯವರ(ಸ) ಬಳಿಗೆ ಕಳಿಸಿದರು. ಬೆಳಿಗ್ಗೆ ಅವರು ಆನಂದಿತರಾಗಿದ್ದರು. ಪ್ರವಾದಿಯವರು ಜನರೊಂದಿಗೆ, "ನಿಮ್ಮ ಬಳಿ ಏನಾದರೂ ಇದ್ದರೆ ತನ್ನಿರಿ" ಎನ್ನುತ್ತಾ ಊಟದ ಹಾಸು ಬಿಡಿಸಿದರು. ಜನರು ಖರ್ಜೂರ, ತುಪ್ಪ ಇತ್ಯಾದಿ ತಂದರು. ವರದಿಗಾರ ಸತ್ತುವಿನ ಪ್ರಸ್ತಾಪವನ್ನೂ ಮಾಡಿರಬೇಕು. ಒಟ್ಟಿನಲ್ಲಿ ಜನರು ಹಸೀನ್ (ಒಂದು ಬಗೆಯ ಆಹಾರ) ತಯಾರಿಸಿದರು. ಇದುವೇ ಪ್ರವಾದಿಯವರ ವಲೀಮ ಆಯಿತು.

## ಗುರುತು ಸಿಗುತ್ತಿರಲಿಲ್ಲ

**236.** ಆಯಿಶಾ ಹೇಳುತ್ತಾರೆ- ಪ್ರವಾದಿ(ಸ) ಫಜ್ರ್ ನಮಾಝ್ ಮಾಡುತ್ತಿದ್ದರು. ವಿಶ್ವಾಸಿ ಸ್ತ್ರೀಯರು ಚದ್ದರಗಳನ್ನು ಹೊದ್ದು ಬರುತ್ತಿದ್ದರು. (ನಮಾಝ್ ಮುಗಿಸಿ) ಮರಳುವಾಗ ಯಾರಿಗೂ ಅವರ ಗುರುತು ಸಿಗುತ್ತಿರಲಿಲ್ಲ.

## ಚಿತ್ರವಿರುವ ಚದ್ದರ, ಪರದೆ

**237.** ಆಯಿಶಾ ಹೇಳುತ್ತಾರೆ- ಪ್ರವಾದಿ(ಸ) ಚಿತ್ರವಿರುವ ಒಂದು ಚದ್ದರ ಹೊದ್ದು ನಮಾಝ್ ಮಾಡಿದರು. (ನಮಾಝ್‌ನಲ್ಲಿ) ಚಿತ್ರವನ್ನೊಮ್ಮೆ ನೋಡಿದರು. ವಿರಮಿಸಿದಾಗ ಈ ರೀತಿ ಹೇಳಿದರು, "ಈ ಚದ್ದರವನ್ನು ಅಬೂಜುಹೈಮ್‌ರ ಬಳಿಗೊಯ್ದು ಚಿತ್ರವಿಲ್ಲದ ಚದ್ದರ ತನ್ನಿರಿ. ಈ ಚಿತ್ರಗಳು ನನ್ನನ್ನು ನಮಾಝ್‌ನಿಂದ ಲಕ್ಷ್ಯ ತಿರುಗಿಸಿತು."

# ಅಲ್ಲಾಹನ ಅಪ್ಪಣೆಯಂತೆ ಹಕ್ಕುಗಳ ಪೂರೈಕೆ

**ಸಂಪತ್ತಿನಲ್ಲಿ ಅಲ್ಲಾಹನ ಹಕ್ಕು- 4**

ಮೂಲ: ಸಯ್ಯಿದ್ ಜಲಾಲುದ್ದೀನ್ ಉಮರಿ
ಅನು: ಹಾಜಿರಾ, ಪಾಣೆಮಂಗಳೂರು



ವರ್ಷಗಳು ಕಳೆದುವು. ಆ ಜಾನುವಾರುಗಳ ಸಂತಾನವು ವೃದ್ಧಿಯಾಯಿತು. ಅವರು ಮೂವರಲ್ಲಿ ಒಬ್ಬನು ಒಂಟೆಗಳ ಹಿಂಡು, ಇನ್ನೊಬ್ಬನು ದನಗಳ ಮಂದೆ, ಮೂರನೆಯವನು ಆಡುಗಳ ಮಂದೆಯ ಮಾಲಿಕರಾದರು. ಈಗ ಅಲ್ಲಾಹನು ಸಂಪತ್ತಿನ ಪರೀಕ್ಷೆಯನ್ನು ಮಾಡಲು ಇಚ್ಛಿಸಿದನು. ಅದೇ ದೇವಚರ ಒಬ್ಬ ಸಾಮಾನ್ಯ ಮನುಷ್ಯನ ರೂಪದಲ್ಲಿ ಬಿಳಿ ತೊನ್ನಿನವನ ಬಳಿ ಹೋಗಿ, "ನಾನು ಒಬ್ಬ ಬಡವ. ತುಂಬಾ ಸಹಾಯ, ಸಹಕಾರದ ಅಗತ್ಯವಿರುವ ವ್ಯಕ್ತಿಯಾಗಿದ್ದೇನೆ. ಎಲ್ಲಾ ರೀತಿಯ ಕಷ್ಟಗಳಿಂದ ಕುಸಿದು ಹೋಗಿದ್ದೇನೆ. ನನ್ನ ಬಳಿಯಿದ್ದ ಸ್ವಲ್ಪ ಸಂಪತ್ತು ಮುಗಿದು ಹೋಗಿದೆ. ಈಗ ಅಲ್ಲಾಹನ ಸಹಾಯ ಮತ್ತು ನಿಮ್ಮ ಸಹಕಾರದಿಂದ ನನ್ನ ಮನೆ ತನಕ ಮುಟ್ಟಬಲ್ಲೆ. ಆ ಅಲ್ಲಾಹನ ಭರವಸೆಯೊಂದಿಗೆ ನಿಮ್ಮಿಂದ ಒಂದು ಒಂಟೆಯನ್ನು ಬೇಡುತ್ತಿದ್ದೇನೆ. ಅಲ್ಲಾಹನು ನಿಮಗೆ ಆರೋಗ್ಯವನ್ನೂ ಸಂಪತ್ತನ್ನೂ ದಯಪಾಲಿಸಿರುತ್ತಾನೆ" ಎಂದು ಹೇಳಿದನು. ಅದಕ್ಕವನು, "ನನ್ನ ಮೇಲೆ ತುಂಬಾ ಕರ್ತವ್ಯಗಳಿವೆ ಮತ್ತು ಜವಾಬ್ದಾರಿಗಳಿವೆ. ಅದನ್ನು ನನಗೆ ನಿಭಾಯಿಸಬೇಕಾಗಿದೆ. ಇದರಿಂದಾಗಿ ನಿಮಗೆ ಯಾವ ರೀತಿಯ ಸಹಾಯ ಮಾಡಲು ನನ್ನಿಂದ ಸಾಧ್ಯವಿಲ್ಲ" ಎಂದು ಹೇಳುತ್ತಾನೆ. ಆಗ ದೇವಚರನು, "ನನಗೆ ನೆನಪಿಗೆ ಬರುತ್ತಾ ಇದೆ. ಏನೆಂದರೆ, ಇದಕ್ಕಿಂತ ಹಿಂದೆಯೂ ಒಮ್ಮೆ ನಿಮ್ಮನ್ನು ನೋಡಿದ್ದೇನೆ. ನೀವು ಬಿಳಿ ತೊನ್ನಿನಲ್ಲಿ ಮುಳುಗಿದ್ದ ಆ ವ್ಯಕ್ತಿಯಲ್ಲವೇ? ಅಲ್ಲಾಹನು ನಿಮ್ಮನ್ನು ಅದರಿಂದ ಗುಣಮುಖನನ್ನಾಗಿಸಿದನು. ನೀವು ಬಡವರಾಗಿದ್ದಿರಿ. ಅಲ್ಲಾಹನು ನಿಮಗೆ ಸಂಪತ್ತು ನೀಡಿದನು. ವಾಸ್ತವಿಕತೆ ಇದಾಗಿದೆಯಾದ್ದರಿಂದ ನೀವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದು ಕಡ್ಡಾಯವಾಗಿದೆ" ಎಂದು ಹೇಳಿದನು. ಅದಕ್ಕವನು, "ನೀವು ತಪ್ಪು ತಿಳಿದುಕೊಂಡಿದ್ದೀರಿ. ಈ ಸಂಪತ್ತು ನನಗೆ ತಂದೆ ತಾತಂದಿರಿಂದ ಸಿಕ್ಕಿದ" ಎಂದು ಹೇಳಿದನು. ದೇವಚರನು ಅವನಿಗೆ, "ಬಹುಶಃ ನೀವು ಸುಳ್ಳು ಹೇಳುತ್ತಿರುವುದಾದರೆ, ಯಾವುದರಲ್ಲಿ ನೀವು ಮೊದಲು ಮುಳುಗಿದ್ದಿರೋ ಅಲ್ಲಾಹನು ನಿಮ್ಮನ್ನು ಅದೇ ಸ್ಥಿತಿಗೆ ಮರಳಿಸಲಿ" ಎಂದು ಶಾಪ ಹಾಕಿದನು.

ದೇವಚರನು ಬೋಳು ತಲೆಯವನಲ್ಲಿಗೆ ಹೋಗಿ ಅದೇ ರೀತಿಯ ಮಾತುಗಳನ್ನಿಟ್ಟನು. ಈತನ ಉತ್ತರವು ಬಿಳಿ ತೊನ್ನಿನವನ ಉತ್ತರದಂತೆ ಇತ್ತು. ದೇವಚರನು ಈತನಿಗೂ ಶಾಪ ಹಾಕಿ ಕುರುಡನ ಬಳಿಗೆ ಹೋಯಿತು. ಕುರುಡನಿಗೆ ಹಿಂದಿನ ಕುರುಡುತನವನ್ನು ನೆನಪಿಸಿದಾಗ ಅವನು ಒಪ್ಪಿಕೊಂಡನು. "ಸರಿಯಾಗಿಯೇ ಹೇಳಿದ್ದೀರಿ. ನಾನು ಕುರುಡನಾಗಿದ್ದೆ. ಅಲ್ಲಾಹನು ನನಗೆ ನೋಡುವ ಸೌಭಾಗ್ಯ ನೀಡಿದನು. ಈ ಸಂಪತ್ತಿನ ಮಾಲಿಕನನ್ನಾಗಿಸಿದನು. ಆಡುಗಳ ತಂಡವು ಇಲ್ಲಿದೆ. ನಿಮಗೆ ಎಷ್ಟು ಆಡುಗಳ ಅಗತ್ಯವಿದೆಯೋ ಇದರಿಂದ ತೆಗೆದುಕೊಳ್ಳಿರಿ. ನನ್ನ ಕಡೆಯಿಂದ ಎಲ್ಲಾ ರೀತಿಯ ಒಪ್ಪಿಗೆ ಇದೆ" ಎಂದು ಕುರುಡನು ಹೇಳಿದನು. "ನನಗೆ ನಿನ್ನ ಸಂಪತ್ತಿನ ಅವಶ್ಯಕತೆ ಇಲ್ಲ. ವಸ್ತುಶಃ ಅಲ್ಲಾಹನು ಈ ರೀತಿಯಲ್ಲಿ ನಿಮ್ಮನ್ನು ಪರೀಕ್ಷಿಸಿದನು. ನೀವಂತೂ ಈ ಪರೀಕ್ಷೆಯಲ್ಲಿ ಎಲ್ಲಾ ರೀತಿಯಲ್ಲೂ ಉತ್ತೀರ್ಣರಾದಿರಿ. ಆದರೆ ನಿಮ್ಮ ಇಬ್ಬರು ಗೆಳೆಯರು ಅನುತ್ತೀರ್ಣರಾದರು. ಅಲ್ಲಾಹನು ನಿಮ್ಮಿಂದ ಸಂತುಷ್ಟನಾದನು ಮತ್ತು ಅವರಿಂದ ಅಸಂತುಷ್ಟನಾದನು. (ಬುಖಾರಿ, ಮುಸ್ಲಿಮ್)

**ಇನ್ನೊಂದು ಹದೀಸ್‌ನಲ್ಲಿ ಹೀಗಿದೆ:**

ಅಲ್ಲಾಹನ ರಸೂಲರು(ಸ) ಹೀಗೆ ಹೇಳಿದ್ದಾರೆ, "ಒಬ್ಬ ವ್ಯಕ್ತಿಯು ಮೈದಾನದಿಂದ ಹಾದು ಹೋಗುತ್ತಿದ್ದನು. ಅವನಿಗೆ ಅಶರೀರ (ಪರೋಕ್ಷದ) ವಾಣಿಯೊಂದು ಕೇಳಿಸಿತು. ಆಕಾಶದಲ್ಲಿ ಮೋಡಗಳಿಗೆ 'ಫಲಾಹ್' ಎಂಬ ವ್ಯಕ್ತಿಯ ತೋಟಕ್ಕೆ ಮಳೆ ಸುರಿಸು ಎಂಬ ಆಜ್ಞೆ ಕೊಡಲಾಗುತ್ತಿತ್ತು. ಕೊನೆಯಲ್ಲಿ ಮೋಡವು ಒಂದು ಮುಖ್ಯವಾದ ದಿಕ್ಕಿನಲ್ಲಿ ಚಲಿಸತೊಡಗಿತು. ಸ್ವಲ್ಪ ದೂರದಲ್ಲಿ ಕಲ್ಲು ಬಂಡೆಗಳ ಭೂಮಿಯಲ್ಲಿ ಮಳೆಯಾಯಿತು ಮತ್ತು ಒಂದು ಚಿಕ್ಕ ಕಾಲುವೆಯಾಗಿ ಹರಿಯತೊಡಗಿತು. ಆ ವ್ಯಕ್ತಿಯು ಈ ವಿಸ್ಮಯಕಾರಿ ಘಟನೆಯನ್ನು ನೋಡುತ್ತಾ ಕಾಲುವೆಯ ಜೊತೆಗೆ ನಡೆಯತೊಡಗಿದ. ಅವನು ನೋಡುತ್ತಿದ್ದಂತೆ ಕಣಿವೆಯು ಒಂದು ತೋಟದ ಕಡೆಗೆ ಹರಿಯುತ್ತಿತ್ತು. ಅಲ್ಲಿ ಒಬ್ಬ ವ್ಯಕ್ತಿ ತನ್ನ ತೋಟಕ್ಕೆ ನೀರನ್ನು ಹಾಕುತ್ತಿದ್ದನು. ಕಾಲುವೆಯೊಂದಿಗೆ ಬಂದ ವ್ಯಕ್ತಿಯು ತೋಟದಲ್ಲಿದ್ದ ವ್ಯಕ್ತಿಯೊಡನೆ ಆತನ ಹೆಸರು ಕೇಳಿದಾಗ ಅವನು ಆಕಾಶದಿಂದ ಕೇಳಿದ ಅದೇ ಹೆಸರನ್ನು (ಫಲಾಹ್) ತಿಳಿಸಿದ್ದನು. ತೋಟದವನು ಅವನಲ್ಲಿ ಕೇಳಿದ, "ಹೇ ಅಲ್ಲಾಹನ ಭಕ್ತನೇ, ನನ್ನ ಹೆಸರನ್ನು ನೀನು ಯಾಕೆ ಕೇಳಿದೆ ಎಂದು ತಿಳಿಸು?" ಆ ವ್ಯಕ್ತಿಯು ನಡೆದ ಎಲ್ಲಾ ಘಟನೆಯನ್ನು ವಿವರಿಸಿದ ಮತ್ತು ತೋಟಗಾರನು ತನ್ನ ತೋಟದಲ್ಲಿ ಯಾವ ವಿಷಯಗಳಲ್ಲಿ ಗಮನವಿಡುತ್ತಾನೆ ಮತ್ತು ಯಾವ ಕಾರಣಕ್ಕಾಗಿ ಅಲ್ಲಾಹನು ಮುಖ್ಯವಾಗಿ ಆ ತೋಟಕ್ಕೆ ಮಳೆ ಸುರಿಸಲು ಆಜ್ಞೆ ಕೊಟ್ಟನು ಎಂದು ಕೇಳುತ್ತಾನೆ. ಆ ತೋಟಗಾರನು ಹೀಗೆ ಉತ್ತರಿಸುತ್ತಾನೆ, "ಈ ತೋಟದಿಂದ ಎಷ್ಟು ಉತ್ಪಾದನೆ ಬರುತ್ತದೋ ಅದರಲ್ಲಿ ನಾನು ಮೂರು ಭಾಗ ಮಾಡುತ್ತೇನೆ. ಒಂದು ಭಾಗವನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತೇನೆ. ಇನ್ನೊಂದು ಭಾಗದಿಂದ ನನ್ನ ಮತ್ತು ನನ್ನ ಮಕ್ಕಳ ಖರ್ಚು ವೆಚ್ಚಗಳನ್ನು ನಿಭಾಯಿಸುತ್ತೇನೆ ಮತ್ತು ಮೂರನೆಯ ಭಾಗವನ್ನು ಈ ತೋಟದ ಪಾಲನೆ ಪೋಷಣೆಯಲ್ಲಿ ಖರ್ಚು ಮಾಡುತ್ತೇನೆ." (ಮುಸ್ಲಿಮ್)

ಇಂತಹ ಘಟನೆಗಳಿಂದ ಒಂದು ಪ್ರಶ್ನೆ ಉದ್ಭವಿಸುತ್ತದೆ. ಏನೆಂದರೆ ಇದು ನಿಜವಾದ ಐತಿಹಾಸಿಕವಾದ ವಿಷಯವೇ? ಅಥವಾ ಕೇವಲ ಉದಾಹರಣೆಗಳೇ? ಆದರೆ ಈ ಪ್ರಶ್ನೆಗೆ ಇಲ್ಲಿ ಯಾವುದೇ ಮಹತ್ವ ಇಲ್ಲ. ಮಹತ್ವವಿರುವುದು ಇಲ್ಲಿ ವ್ಯಕ್ತವಾದ ವಿಷಯಗಳ ಮೇಲೆ. ಯಾವ ವ್ಯಕ್ತಿಗೆ ಅಲ್ಲಾಹನು ಸಂಪತ್ತು ಕೊಟ್ಟು ಅದರ ಕೃತಜ್ಞತೆ ಅರ್ಪಿಸುವುದು ಆತನ ಮೇಲೆ ಕಡ್ಡಾಯವಾಗುತ್ತದೆ ಎಂಬುದನ್ನು ಈ ಘಟನೆಗಳಲ್ಲಿ ವ್ಯಕ್ತವಾಗುತ್ತದೆ. ಮಾನವನು ತನ್ನ ಮಾತಿನಿಂದ ಅಲ್ಲಾಹನ ಅನುಗ್ರಹ, ಅವನ ಕರುಣೆ ಮತ್ತು ಉಪಕಾರವನ್ನು ನಿಸ್ಸಂದೇಹವಾಗಿಯೂ ನಂಬುತ್ತಾನೆ. ಆದರೆ ಇದಕ್ಕಿಂತಲೂ ಮುಖ್ಯವಾದುದು ತನ್ನ ಹಕ್ಕುಗಳ ಕೃತಜ್ಞತೆಯನ್ನು ಅಲ್ಲಾಹನ ಅಪ್ಪಣೆಯಂತೆ ನೆರವೇರಿಸಬೇಕು ಮತ್ತು ಅದರಲ್ಲಿ ಬಂಧುಗಳ ಹಕ್ಕನ್ನು ಕಡ್ಡಾಯವಾಗಿ ಕೊಡಬೇಕು. (ಮುಗಿಯಿತು)

**ಮುಂದಿನ ವಾರ: ಹ. ಅಬೂಬಕರ್ ಸಿದ್ದೀಕ್‌ರವರ(ರ) ಜೀವನ ಚರಿತ್ರೆ**

## ಕ್ರೋಧ

ಪಾಪಕೋಪಕ್ಕೆ ತಳ್ಳುತ
ದಾಹವಾಗಿ ದಹಿಸಿ
ಅಟ್ಟಹಾಸ ಮೆರೆಯುತ
ಹಗೆತನಕ್ಕೆ ನಾಂದಿಹಾಡಿದೆ.

ನಾನು ನನ್ನವರೆಂಬ ಮೋಹಕ್ಕೆ
ಸಿಲುಕಿ ಪ್ರೀತಿ ವಿಶ್ವಾಸ ಮರೆತು
ಬೇರೆಯವರ ಕಷ್ಟದಲ್ಲಿ ಅಭಯ
ಹಸ್ತ ಚಾಚದಂತೆ ಕಠೋರವಾಗಿದ್ದೇನೆ.

ನಾಡ ಕಟ್ಟುವ ಮನೋಮ ಪ್ರವೃತ್ತಿ
ಬೆಳೆದು ಧೀಮಂತ ನಾಯಕನಾಗಿ
ಬೇಕು ಬೇಡಗಳಿಗೆ ಕಡಿವಾಣದಿಂದ
ಅದಮ್ಯ ಚೇತನವಾಗು.

ಕ್ರೋಧವೆಂಬ ವೈರಿ ತನ್ನನ್ನು
ದಹಿಸುವುದಲ್ಲದೇ ಬೇರೆಯವರನು
ಬಿಡದು ಶಾಂತಿಯಿಂದ
ಯಶಸ್ಸು ಗಳಿಸೋಣ.

ಉಮರ್ ಶರೀಫ್. ಎನ್. ಕುಂಟೋಜಿ ಬಿಜಾಪುರ

## ದುರ್ಗಮ ಏರು

ಲೋಕದಲ್ಲಿ ಎಷ್ಟು ಉನ್ನತ ಮತ್ತು ಮಹಾನ್ ಕಾರ್ಯಗಳಿವೆಯೋ ಅವೆಲ್ಲವೂ ಕಠಿಣ ಶ್ರಮ ಮತ್ತು ಅತ್ಯಧಿಕ ಸಹನೆಯನ್ನು ಬಯಸುತ್ತವೆ. ಅವುಗಳನ್ನು ನಿರ್ವಹಿಸಲು ಮನುಷ್ಯನಿಗೆ ಒಂದು ಏರನ್ನು ಏರಬೇಕಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ನೀಚ ಮತ್ತು ನಿಕೃಷ್ಟ ಕಾರ್ಯಗಳು ಅತ್ಯಂತ ಸರಳ, ಶ್ರಮರಹಿತವಾಗಿದ್ದು ಮನುಷ್ಯನ ಚಿತ್ತದ ಬೇಡಿಕೆಗಳನ್ನು ತಕ್ಷಣ ಪೂರೈಸುತ್ತವೆ. ಅವುಗಳಿಗೆ ಮನುಷ್ಯನು ಎತ್ತರಕ್ಕೆ ಏರಬೇಕಾಗುವುದಿಲ್ಲ. ಇಳಿಜಾರಿನಲ್ಲಿ ಇಳಿದರೆ ಸಾಕಾಗುತ್ತದೆ. ಧ್ಯಾನ ಮತ್ತು ಅಧ್ಯಯನಕ್ಕಿಂತ ಹರಟೆ ಸುಲಭವೆನಿಸುತ್ತದೆ. ಧರ್ಮ ಮತ್ತು ತತ್ವಜ್ಞಾನವನ್ನು ಅಭ್ಯಸಿಸುವುದಕ್ಕಿಂತ ಕತೆ ಕಾದಂಬರಿ ಓದುವುದು ಹೆಚ್ಚು ಪ್ರಿಯವಾಗುತ್ತದೆ. ಆತ್ಮ ನಿಯಂತ್ರಣ ಮತ್ತು ಆತ್ಮ ಸಂಸ್ಕರಣೆಗಿಂತ ತನ್ನನ್ನು ಮನಸೇಚ್ಛೆಗಳ ಪ್ರವಾಹದಲ್ಲಿ ಹರಿಸಿ ಬಿಡುವುದು ಸಾಮಾನ್ಯ ಜನರಿಗೆ ಬಹಳ ಸುಲಭ ಮತ್ತು ಸ್ವಾರಸ್ಯಕರವೆನಿಸುತ್ತದೆ. ರಣಾಂಗಣದಲ್ಲಿ ಸ್ಥಿರ ಚಿತ್ತತೆಯಿಂದ ಹೋರಾಡುವ ಬದಲು ಪರಾರಿಯಾಗಬೇಕೆಂದಿದ್ದರೆ, ಅಲೆಗಳು ಮತ್ತು ಪ್ರತಿಕೂಲ ವಾರಾತದ ವಿರುದ್ಧ ಸೆಣಸುವ ಬದಲು ನಾವೆಯನ್ನು ಅಲೆಗಳ ವಶಕ್ಕೆ ಒಪ್ಪಿಸ ಬೇಕಾದರೆ ಅದಕ್ಕೆ ಕೈಕಾಲು ಸಡಿಲಬಿಟ್ಟರೆ ಸಾಕಾಗುತ್ತದೆ. ಉನ್ನತಿ ಮತ್ತು ಅವನತಿ, ಶ್ರೇಷ್ಠ ಮತ್ತು ಕನಿಷ್ಠದ ಇದೇ ವ್ಯತ್ಯಾಸವನ್ನು ಪ್ರವಾದಿ ವಚನವೊಂದು ಹೀಗೆ ವಿವರಿಸುತ್ತದೆ:

**ಚಿಂತನೆ**



ಇಬ್ರಾಹೀಮ್ ಸಈದ್

ಸ್ವರ್ಗವನ್ನು ಕಠಿಣ ಕಾರ್ಯಗಳಿಂದ ಆವರಿಸಲಾಗಿದೆ ಮತ್ತು ನರಕವನ್ನು ಇಂದ್ರಿಯಾಸಕ್ತಿಗಳಿಂದ ಆವರಿಸಲಾಗಿದೆ.

ಅರ್ಥಾತ್ ಔನ್ನತ್ಯವನ್ನು ಬಯಸುವವನ ಗುರಿಯು ವಿಪತ್ತು ಮತ್ತು ಸಂಕಷ್ಟಗಳಿಂದ ಆವರಿಸಲ್ಪಟ್ಟಿದೆ. ಅವನತಿಯ ಜಾಡು ಹಿಡಿಯುವವನ ಧ್ಯೇಯವು ವಿಷಯಾಸಕ್ತಿಗಳಿಂದ ಆವರಿಸಲ್ಪಟ್ಟಿದೆ.

ಒಳಿತು ಮತ್ತು ಕೆಡುಕು, ಪಾಪ ಮತ್ತು ಪುಣ್ಯದ ಈ ಅಂತರದಿಂದಾಗಿಯೇ ಮನುಷ್ಯನು ಪುಣ್ಯ ಮತ್ತು ಒಳಿತಿನ ಕಡೆಗೆ ಬಹಳ ನಿಧಾನಗತಿಯಿಂದ ಸಾಗುತ್ತಾನೆ. ಏಕೆಂದರೆ ಆ ದಾರಿಯಲ್ಲಿ ಪರ್ವತಗಳನ್ನು ಏರಬೇಕಾಗುತ್ತದೆ. ಹೆಜ್ಜೆ ಹೆಜ್ಜೆಗೂ ತನ್ನ ದೇಹೇಚ್ಛೆ ಮತ್ತು ವಿಷಯಾಸಕ್ತಿಗಳ ವಿರುದ್ಧ ಹೋರಾಡಬೇಕಾಗುತ್ತದೆ. ಈ ಪಯಣವನ್ನು ಕುರ್‌ಆನ್ ಹೃದಯ ಸ್ಪರ್ಶಿಯಾಗಿ ವಿವರಿಸಿದೆ:

ಆದರೆ ಅವನು ದುರ್ಗಮ ಏರನ್ನು ಏರುವ ಸಾಹಸವನ್ನೇ ಮಾಡಲಿಲ್ಲ. ಆ ದುರ್ಗಮ ಏರು ಏನೆಂದು ನಿಮಗೇನು ಗೊತ್ತು? ಒಬ್ಬನನ್ನು ಜೀತ ಮುಕ್ತಗೊಳಿಸುವುದು, ಹಸಿವಿನ ದಿನ ಹಸಿದ ಆಪ್ತ ಅನಾಥನಿಗೆ ಅಥವಾ ದಿಕ್ಕೆಟ್ಟ ದರಿದ್ರನಿಗೆ ಊಟ ಬಡಿಸುವುದು. ತರುವಾಯ ವಿಶ್ವಾಸವಿರಿಸಿ ಪರಸ್ಪರ ಸಹನೆ ಮತ್ತು ಕರುಣೆಯನ್ನು ಬೋಧಿಸುವ ಜನರ ಜೊತೆ ಸೇರುವುದು. (80: 11-17)

ಇದಕ್ಕೆದುರಾಗಿ ಕೆಡುಕಿನ ಪಾಪಕೂಪಕ್ಕೆ ಬೀಳ ಬಯಸುವವನು ಬಹಳ ವೇಗವಾಗಿ ತನ್ನ ಗುರಿಯನ್ನು ತಲುಪುತ್ತಾನೆ. ಅವನು ಕೆಡುಕಿನ ಕಡೆ ವಾಲುತ್ತಲೇ ಅನಾಯಾಸವಾಗಿ ಜಾರುತ್ತಾ ಸಾಗುತ್ತಾನೆ. ಕಟ್ಟಕಡೆಗೆ ನೈತಿಕ ಪತನದ ಪಾತಾಳಕ್ಕೆ ಇಳಿದು ಬಿಡುತ್ತಾನೆ.

# ಅಲ್ಲಾಹನ ವಿಸ್ಮಯಕರ ವ್ಯವಸ್ಥೆ

## ದೇವಾಸ್ತಿತ್ವದ ದೃಷ್ಟಾಂತಗಳು-24

ಇಮಾಮ್ ಗಝ್ಝಾಲಿ

ಮೊಟ್ಟೆಯು ಬಗ್ಗೆಯೇ ಆಲೋಚಿಸಿ ನೋಡಿರಿ. ಅದರಲ್ಲಿ ಎಷ್ಟೊಂದು ದೈವಿಕ ಯುಕ್ತಿ ಅಡಕ ವಾಗಿದೆ...!! ಅದರಲ್ಲಿ ಎರಡು ಭಾಗಗಳಿವೆ. ಹಳದಿ ಭಾಗ ಮತ್ತು ಲೋಳೆಯಾದ ಬಿಳಿಭಾಗ. ಎರಡನೆ ಯದು ಮೊಟ್ಟೆ ಬಿರಿಯುವ ತನಕ ಭ್ರೂಣದ ಆಹಾರವಾಗಿದೆ. ಭದ್ರವಾಗಿ ಮುಚ್ಚಿರುವ ಅಂಡ ದೊಳಗೆಯೇ ಭ್ರೂಣ ಮತ್ತು ಅದರ ಆಹಾರವನ್ನು ನಿಕ್ಷೇಪಿಸಿರುವ ಅಲ್ಲಾಹನ ವ್ಯವಸ್ಥೆಯು ಎಷ್ಟೊಂದು ವಿಸ್ಮಯಕರ ಮತ್ತು ಯುಕ್ತಿಪೂರ್ಣ!

ಆಹಾರದ ಅನ್ನಕೋಶ ಮತ್ತು ಅದರ ಕ್ರಿಯೆಯನ್ನು ನೋಡಿರಿ. ಹಕ್ಕಿಗಳ ಅನ್ನಕೋಶವನ್ನು ಕೊರಳಿಗೆ ಅಂಟಿಸಿರುವುದೇಕೆ? ಹಕ್ಕಿಗಳ ಉದರದಲ್ಲಿ ಸಣ್ಣ ಕರುಳಿಗಿರುವ ಅನ್ನ ನಾಳವು ಸಂಕುಚಿತವಾಗಿದೆ. ಅದರ ಮೂಲಕ ಆಹಾರವು ಸ್ವಲ್ಪ ಸ್ವಲ್ಪವಾಗಿ ಕೆಳಗೆ ಜಾರುತ್ತದೆ. ಧಾನ್ಯ ಕಣಗಳು ಸರದಿಯ ಪ್ರಕಾರ ಹೋಗಬೇಕು. ಅದಕ್ಕೆ ತುಂಬಾ ಸಮಯ ಬೇಕಾಗುತ್ತದೆ. ಆಹಾರ ಸಂಗ್ರಹಿಸುವ ಸ್ಥಳದಲ್ಲಿ ಹೆಚ್ಚು ಕಾಲ ನಿಲ್ಲಲು ಹಕ್ಕಿಗಳಿಗೆ ಭೀತಿ ಮತ್ತು ಮುಂಜಾಗ್ರತೆ ಅನುಮತಿಸುವುದಿಲ್ಲ. ಆದ್ದರಿಂದ ಅದಕ್ಕೆ ಆಹಾರ ದಾಸ್ತಾನಿಗೆ ಒಂದು ಕೋಶವನ್ನು ನೀಡಲಾಯಿತು. ಮುಂಭಾಗದಲ್ಲಿ ಚೀಲದಂತೆ ನೇತಾಡುವ ಅನ್ನಕೋಶವು ಅದೇ ಆಗಿದೆ. ದೊರೆಯುವ ಆಹಾರವನ್ನು ಲಗುಬಗೆಯಿಂದ ಆ ಚೀಲದಲ್ಲಿ ತುಂಬಲಾಗುತ್ತದೆ. ತರುವಾಯ ಸುರಕ್ಷಿತ ಸ್ಥಳದಲ್ಲಿ ಕುಳಿತು ಸಾವಧಾನವಾಗಿ ಜಠರಕ್ಕೆ ಕಳಿಸುತ್ತದೆ. ಹೊರಗಿನ ಅನ್ನ ಕೋಶದಿಂದ ಇನ್ನೊಂದು ಪ್ರಯೋಜನವಿದೆ. ಮರಿಗಳ ಆಹಾರವನ್ನು ಸ್ವಂತ ಅನ್ನಕೋಶದಲ್ಲಿರಿಸಿ ಮೃದುಗೊಳಿಸಿ ಉಣಿಸುವ ಕೆಲವು ಮಕ ಹಕ್ಕಿಗಳಿವೆಯಷ್ಟೆ. ಅನ್ನ ಕೋಶದ ಈ ವ್ಯವಸ್ಥೆಯು ಅವುಗಳಿಗೆ ಬಹಳ ಅನುಕೂಲವಾಗಿದೆ.



ಇನ್ನು ಗರಿಯನ್ನು ಗಮನಿಸಿರಿ. ಅವು ಸಣ್ಣ ನೂಲಿನಿಂದ ನೇಯ್ದ ವಸ್ತ್ರದಂತಿದೆ. ಅವು ಶುಷ್ಕ, ಬಲಿಷ್ಠ ಮತ್ತು ನುಣುಪಾಗಿವೆ. ಗರಿಯಲ್ಲಿ ಒಂದು ಕಾಂಡವಿದೆ. ಒಳಗೆ ಟೊಳ್ಳಾಗಿದ್ದರೂ ಕಾಂಡವು ಸುಲಭದಲ್ಲಿ ಮುರಿಯುವುದಿಲ್ಲ. ಗರಿಗಳು ದಟ್ಟವಾಗಿ ಸೇರಿಕೊಂಡಿರುತ್ತವೆ. ವಸ್ತ್ರದ ನೂಲುಗಳು ಪರಸ್ಪರ ಸೇರಿರುವಂತೆ. ಹಕ್ಕಿಗಳ ದೇಹದಲ್ಲಿ ಹೀಗೆ ನೇಯ್ದಿರುವ ಗರಿಗಳನ್ನು ಒಮ್ಮೆ ಬಿಡಿಸಿ ನೋಡಿರಿ. ಅದನ್ನು ಸ್ವಲ್ಪ ಮಾತ್ರ ತೆರೆಯಬಹುದು. ಯಾಕೆಂದರೆ ಗರಿಗಳನ್ನು ಸಂಪೂರ್ಣವಾಗಿ ತೆರೆದರೆ ಗರಿಗಳಲ್ಲಿ ಗಾಳಿ ಪ್ರವೇಶಿಸುತ್ತದೆ. ದೇಹದ ಭಾರವು ಹೆಚ್ಚಿ ಹಾರಲು ಕಷ್ಟವಾಗಬಹುದು. ಗರಿಯ ಮಧ್ಯದಲ್ಲಿ ಒಂದು ಕಾಂಡವಿದೆ. ಅದನ್ನು ಶುಷ್ಕ ಮತ್ತು ಮತ್ತು ಸುದೃಢವಾದ ಹಕ್ಕಿಯ ಚರ್ಮದಲ್ಲಿ ಚೆನ್ನಾಗಿ ಜೋಡಿಸಲಾಗಿದೆ. ಅವು ಫಕ್ಕನೆ ಕಿತ್ತು ಹೋಗಲಾರದು.ಈ ಕಾಂಡವಿಲ್ಲದಿದ್ದರೆ ಗರಿಗೆ ಗಾಳಿಯನ್ನು ಎದುರಿಸಲು ಸಾಧ್ಯವಿಲ್ಲ. ಗರಿಯ ಕಾಂಡದ ಒಳಭಾಗವನ್ನು ಟೊಳ್ಳುಗೊಳಿಸಲಾಗಿದೆ. ಆದ್ದರಿಂದ ಸುಲಭವಾಗಿ ಹಾರಲಾಗುತ್ತದೆ.

ಕೆಲವು ವರ್ಗದ ಹಕ್ಕಿಗಳ ಕಾಲುಗಳು ಉದ್ದವಾಗಿವೆ. ಜಲಾಶಯ ಮತ್ತು ತೀರಗಳಲ್ಲಿ ಅವು ಮಿಕಗಳನ್ನು ಹುಡುಕಬೇಕಾಗಿರುವುದರಿಂದ ಆ ಅನುಕೂಲತೆಯನ್ನು ಒದಗಿಸಲಾಗಿದೆ. ಅವು ನೀರಿನ ಮೇಲ್ಭಾಗವನ್ನು ಗಮನಿಸುತ್ತಾ ನಿಲ್ಲುತ್ತದೆ. ಮಿಕವನ್ನು ಕಂಡರೆ ಮೆಲ್ಲನೆ ಒಂದೆರಡು ಹೆಜ್ಜೆಯಿರಿಸಿ ಹಿಡಿಯುತ್ತದೆ. ಕಾಲು ಗಿಡ್ಡವಾಗಿದ್ದರೆ ಮಿಕವನ್ನು ಹಿಡಿಯಲಿಕ್ಕಾಗಿ ನೀರಿನಲ್ಲಿ ಮುಂದೆ ಹೋಗುವಾಗ ಹೊಟ್ಟೆ ತಾಗಿ ನೀರು ಕದಡಿ ಮಿಕವು ಓಡಿ ಪಾರಾಗುವ ಸಾಧ್ಯತೆಯಿದೆ. ಗುಬ್ಬಿ ಮತ್ತಿತರ ಹಕ್ಕಿಗಳನ್ನು ಗಮನಿಸಿರಿ. ಅವು ಹಗಲಿಡೀ ಆಹಾರ ಹುಡುಕುತ್ತವೆ. ಆಹಾರ ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡಿದೆ. ಆದರೆ ಅವು ಒಂದೆಡೆಯಲ್ಲಿಯೇ ಅವುಗಳಿಗೆ ಒಟ್ಟಿಗೆ ದೊರೆಯುವುದಿಲ್ಲ. ಇದು ಅಲ್ಲಾಹನ ಯುಕ್ತಿ ಬದ್ಧ ಕ್ರಿಯೆಯಾಗಿದೆ. ಆಹಾರವನ್ನು ಹುಡುಕುತ್ತಾ ಹಾರಿ, ಓಡಾಡುವುದರಲ್ಲಿಯೇ ಅವುಗಳ ಹಿತವಿದೆ. ಆಹಾರವು ಒಂದೇ ಸ್ಥಳದಲ್ಲಿ ಸುಲಭದಲ್ಲಿ ದೊರೆಯುವಂತಿದ್ದರೆ ಹಕ್ಕಿಗಳು ಅವುಗಳ ಮೇಲೆಯೇ ತಂಗಬಹುದು. ಹೊಟ್ಟೆ ತುಂಬಿಸಿಯೇ ಅಲ್ಲಿಂದ ಹೊರಡಬಹುದು. ಹಾಗಾದರೆ ದೇಹವು ಭಾರವಾಗಿ ಹಾರಲು ಕಷ್ಟವಾಗುತ್ತಿತ್ತು. ದೊಡ್ಡ ಹಕ್ಕಿಗಳಂತೆ ವಾಂತಿ ಮಾಡಿ ಭಾರ ಕಡಿಮೆಗೊಳಿಸಲು ಪುಟ್ಟ ಹಕ್ಕಿಗಳಿಗೆ ಸಾಧ್ಯವಿಲ್ಲ. ಕೆಲವು ದೊಡ್ಡ ಹಕ್ಕಿಗಳು ಧಾರಾಳ ಮೀನು ನುಂಗಿ ಹೊಟ್ಟೆ ತುಂಬಿಸಿ ಹಾರಲಾಗದಿರುವುದನ್ನು ಅರಿತಾಗ ಭಾರ ಕಡಿಮೆಗೊಳಿಸಲಿಕ್ಕಾಗಿ ಸ್ವಲ್ಪಂಶವನ್ನು ವಾಂತಿ ಮಾಡುತ್ತವೆ. ಶ್ರಮವಿಲ್ಲದೆ ದೊರೆತರೆ ಸಿಕ್ಕಾಪಟ್ಟೆ ಅನುಭೋಗಿಸುವ ಸ್ವಭಾವ ಮಾನವರಿಗೂ ಇದೆಯಷ್ಟೆ. ಆ ಅನುಭೋಗವು ಕೊನೆಗೆ ಅವರಿಗೆ ಮುಳುವಾಗುತ್ತದೆ. ಕೇವಲ ರಾತ್ರಿಗಳಲ್ಲಿ ಸಂಚರಿಸುವ ಕೆಲವು ವರ್ಗದ ಪಕ್ಷಿಗಳನ್ನು ಗಮನಿಸಿರಿ.

ಉದಾ: ಗೂಬೆ, ಬಾವಲಿ ಇತ್ಯಾದಿ. ಸೊಳ್ಳೆಗಳಂಥ ಸಣ್ಣ ಪ್ರಾಣಿಗಳು ಅವುಗಳ ಆಹಾರವಾಗಿವೆ. ಈ ಜೀವಿಗಳು ಭೂಮಿಯ ಪರಿಸರದ ವಾತಾವರಣದಲ್ಲಿ ಧಾರಾಳವಾಗಿವೆ. ಆದ್ದರಿಂದ ಆ ಹಕ್ಕಿಗಳು ಅವುಗಳನ್ನು ಹಿಡಿಯುವ ಅನುಕೂಲತೆಯಿರುವ ಸ್ಥಳಗಳಲ್ಲಿ ಬದುಕುತ್ತವೆ. ಬೆಳಕು ಅವುಗಳಿಗೆ ಆಹಾರ ಹುಡುಕಲು ಅನುಕೂಲವಾಗಿರುವುದಿಲ್ಲ. ಹಗಲಿನ ಬೆಳಕಿನಲ್ಲಿ ಅವು ಅಡಗಿಕೊಂಡಿರುತ್ತವೆ. ಅವುಗಳಿಗೆ ವಾತಾವರಣದ ಜೀವಿಗಳಿಂದ ಬದುಕುವ ಪ್ರೇರಣೆ ನೀಡಲಾಯಿತು.

ಬಾವಲಿಗಳನ್ನು ನೋಡಿರಿ. ಅದಕ್ಕೆ ರೆಕ್ಕೆಗಳಿಲ್ಲ. ಅದರ ಬದಲಾಗಿ ಭೂಮಿಯ ಪ್ರಾಣಿಗಳಲ್ಲಿ ಕಂಡು ಬರುವಂಥ ಬಾಯಿ, ಹಲ್ಲು ಇತ್ಯಾದಿ ಅಂಗಾಂಗಗಳು ಮತ್ತು ಮರಿಹಾಕುವ ಸ್ವಭಾವವಿದೆ. ಅದರೊಂದಿಗೆ ಹಾರುವ ಸಾಮರ್ಥ್ಯವೂ ಇದೆ. ಇದು ಅಲ್ಲಾಹನ ಶಕ್ತಿಯನ್ನು ಸಾಬೀತುಪಡಿಸುತ್ತದೆ. ರೆಕ್ಕೆಗಳಿಲ್ಲದೆಯೂ ಹಾರುವ ಶಕ್ತಿ ನೀಡಲು ಆತನಿಗೆ ಸಾಧ್ಯವಿದೆ.

ನೀರಿನ ಮೇಲೆ ಬಹುದೂರ ಹಾರಬಲ್ಲ ಕೆಲವು ವರ್ಗದ ಮೀನುಗಳನ್ನೂ ಆತ ಸೃಷ್ಟಿಸಿದ್ದಾನೆ. ಸ್ವಲ್ಪ ದೂರ ಹಾರಿದ ಬಳಿಕ ಅವು ಪುನಃ ನೀರಿನಲ್ಲಿ ಮುಳುಗುತ್ತವೆ. ಸರ್ವಜ್ಞ ಮತ್ತು ವಿಧಿಕರ್ತನಾದ ಅಲ್ಲಾಹನಿಗೆ ಸರ್ವ ಸ್ತೋತ್ರ!

ಕಾವು ನೀಡುವ ಜೋಡಿ ಪಾರಿವಾಳಗಳ ಸಹಕಾರದ ಬಗ್ಗೆ ಆಲೋಚಿಸಿರಿ. ಜೋಡಿಯ ಒಂದು ಹಕ್ಕಿಯು ಆಹಾರ ಹುಡುಕುವಾಗ ಮತ್ತೊಂದು ಹಕ್ಕಿಯು ಮೊಟ್ಟೆಗೆ ಕಾವು ನೀಡುತ್ತದೆ. ಜೋಡಿಯು ಮರಳಿ ಬರುವ ತನಕ ಆಹಾರ ಹುಡುಕುತ್ತಾ ಹೊರ ಹೋದ ಹಕ್ಕಿಯ ಗಮನವು ಸಂಪೂರ್ಣವಾಗಿ ಮೊಟ್ಟೆಯ ಮೇಲಿರುತ್ತದೆ. ಅದು ಹೆಚ್ಚು ಹೊತ್ತು ಅಗಲಿರುವುದಿಲ್ಲ. ಬೇಗನೆ ಆಹಾರ ಹುಡುಕಿ ಮರಳಿ ಬರುತ್ತದೆ. ಎಲ್ಲಿಯವರೆಗೆಂದರೆ, ಕಾವು ಕುಳಿತಿರುವಾಗ ಮೊಟ್ಟೆಯ ಬಗೆಗಿನ ಕಾಳಜಿಯಿಂದ ಮಲವನ್ನು ಉದರದಲ್ಲಿಯೇ ಸಂಗ್ರಹಿಸುತ್ತದೆ. ಕೊನೆಗೆ ವಿಸರ್ಜನೆ ಅನಿವಾರ್ಯವಾದಾಗ ಒಮ್ಮೆಲೆ ಅದನ್ನು ಮಾಡುತ್ತವೆ. ಹೆಣ್ಣು ಹಕ್ಕಿಯು ಮೊಟ್ಟೆಯಿರಿಸಲಾರಂಭಿಸುವಾಗ ಗಂಡು ಹಕ್ಕಿಯು ಅದರ ಬಗ್ಗೆ ಹೆಚ್ಚು ಕಾಳಜಿಯಿಂದ ವಹಿಸುತ್ತದೆ. ಹೊರಗೆಲ್ಲಿಗೂ ಹೋಗುವುದಿಲ್ಲ. ಗೂಡಿನಲ್ಲಿಯೇ ಕುಳ್ಳಿರಿಸಿ ಕಾಯುತ್ತದೆ. ಹೊರಗೆ ಹೋದರೆ ನಿರ್ದಿಷ್ಟ ಸ್ಥಳದ ಬದಲಾಗಿ ಇತರೆಡೆಗಳಲ್ಲಿ ಮೊಟ್ಟೆಯಿರಿಸುವಂತಾದರೆ?

ನೋಡಿರಿ: ಮರಿಗಳಿಗೆ ಉಣಿಸುವುದು ಅವಶ್ಯಕವಾಗಿರುವ ಕಾಲದಲ್ಲಿ ಪ್ರೀತಿಯಿಂದ ಉಣಿಸಿದ ಹಕ್ಕಿಗಳೇ ತಮ್ಮ ಮರಿಗಳನ್ನು ಬೆಳೆಸಿ ಸ್ವಯಂ ಆಹಾರ ಹುಡುಕಲು ಶಕ್ತವಾದ ಬಳಿಕ ಅವುಗಳನ್ನು ಹೊಡೆದೋಡಿಸುತ್ತವೆ. ಅನಂತರ ಅವು ಪುನಃ ಮರಿಗಳನ್ನು ಹುಟ್ಟಿಸಿ ಬೆಳೆಸುವುದರಲ್ಲಿಯೇ ನಿರತವಾಗುತ್ತವೆ.

ಇನ್ನು ಮಾಂಸಾಹಾರಿಗಳಾದ ದೊಡ್ಡ ಹಕ್ಕಿಗಳ ಬಗ್ಗೆ ಆಲೋಚಿಸಿರಿ. ಅವು ಅತಿ ಕ್ಷಿಪ್ರವಾಗಿ ಹಾರುತ್ತವೆ. ಬಲಿಷ್ಠ ಉಗುರುಗಳು ಮತ್ತು ಹರಿತವಾದ ಕೊಕ್ಕುಗಳಿವೆ. ಕ್ರೂರ ಜಂತುಗಳ ಕೋರೆಹಲ್ಲು ಮತ್ತು ಉಗುರುಗಳಂತೆಯೇ ಅವುಗಳಿಂದ ಪರಚಿ ಎಳೆಯಲು ಮತ್ತು ತುಂಡರಿಸಲು ಸಹಾಯವಾಗು ತ್ತವೆ. ಮಾಂಸವನ್ನು ಕುಕ್ಕಿ ಎಳೆಯುತ್ತವೆ.

ನೀರಿನಲ್ಲಿ ಆಹಾರ ಹುಡುಕುವ ಹಕ್ಕಿಗಳನ್ನು ನೋಡಿರಿ. ಆಹಾರವು ನೀರಿನಲ್ಲಿರುವುದರಿಂದ ಅಲ್ಲಾಹನು ಅವುಗಳಿಗೆ ಈಜುವ ಮತ್ತು ಮುಳುಗುವ ಸಾಮರ್ಥ್ಯಗಳನ್ನು ನೀಡಿದನು. ನೀರಿನಿಂದ ಆಹಾರ ಸಂಪಾದಿಸಲು ಅವು ಅಗತ್ಯವಾಗಿದೆಯಷ್ಟೆ. ಮಹೋನ್ನತನಾದ ಅಲ್ಲಾಹನು ಪ್ರತಿಯೊಂದು ವರ್ಗದ ಹಕ್ಕಿಗಳಿಗೂ ಅವುಗಳ ಆಹಾರ ಸಂಪಾದನೆಗೆ ಅತ್ಯಂತ ಯೋಗ್ಯವಾದ ಅವಯವ ಮತ್ತು ಸ್ವಭಾವಗಳನ್ನು ನೀಡಿದ್ದಾನೆ.

# ಬ್ಯಾಂಕಿಂಗ್ ವ್ಯವಹಾರ

## ಇಸ್ಲಾಮಿ ಬ್ಯಾಂಕಿಂಗ್-34

ಡಾ| ಮೊಂದಿರ್ ಕಲಾಹ್

### 4. ಆಗಾಗ ಉಪಯೋಗಿಸುವ ಡಿಪೋಸಿಟ್‌ಗಳು

**Current Acaount Deposit**

ಠೇವಣಿ ಅವಶ್ಯವಾದಾಗ ಹಿಂದಕ್ಕೆ ಪಡೆಯುವ ರೀತಿಯಲ್ಲಿ ಹಣ ಠೇವಣಿ ಹೂಡುವಂತಹ ಸೌಕರ್ಯವಿದಾಗಿದೆ. ಈ ಅಕೌಂಟಿನಲ್ಲಿರುವ ಠೇವಣಿಗೆ ಲಾಭದಲ್ಲಿ ಪಾಲಿರುವುದಿಲ್ಲ. ಲಾಭ ಸಿಗಬೇಕಾದರೆ ಈ ಠೇವಣಿ ಮೊತ್ತ ನಿಶ್ಚಿತವಾದ ಅವಧಿಯವರೆಗೂ ಬ್ಯಾಂಕಿನಲ್ಲಿ ಠೇವಣಿಯಾಗಿ ಇರಿಸಬೇಕಾಗುತ್ತದೆ. ಆದರೆ ಆಗಾಗ ತೆಗೆಯುವ ಡಿಪೋಸಿಟ್‌ಗಳಿಗೆ ಈ ಅವಕಾಶವಿರುವುದಿಲ್ಲ.

### 5. ಮೂರು ಪಾರ್ಟಿ ನಿರ್ಮಾಣ ಕರಾರು

ಇಸ್ಲಾಮಿಕ್ ಬ್ಯಾಂಕ್ ಮತ್ತು ಹೂಡಿಕೆದಾರರೊಂದಿಗೆ ಸೇರಿ ಉತ್ಪಾದನೆ ನಿರ್ಮಾಣ ಕ್ಷೇತ್ರದ ಮೂರನೆ ವ್ಯಕ್ತಿಯೊಂದಿಗೆ ಮಾಡಿಕೊಳ್ಳುವ ಕರಾರನ್ನು ತ್ರಿಪಾರ್ಟಿ ನಿರ್ಮಾಣ ಕರಾರು ಎನ್ನಲಾಗುತ್ತದೆ. ಬೃಹತ್ ಯೋಜನೆಗಳು ಅಸ್ತಿತ್ವ ಪಡೆಯುವುದಕ್ಕೆ ವಿಮಾನ, ಹಡಗು ಮುಂತಾದುವುಗಳನ್ನು ಖರೀದಿಸುವುದಕ್ಕೆ ಬಳಕೆಯಾಗುವ ವ್ಯವಹಾರದ ರೀತಿಯದಾಗಿದೆ ಇದು. ನಿರ್ಮಾಣ ಮಾಡುವವರು, ವ್ಯವಸ್ಥಾಪಕರು ಯೋಜನೆಯ ಕರಡು ದಾಖಲೆಯನ್ನು ತಯಾರಿಸಿ ಬ್ಯಾಂಕಿಗೆ ನೀಡುತ್ತಾರೆ. ಒಂದೇ ದಾಖಲೆಯಲ್ಲಿ ಎರಡೂ ವ್ಯವಹಾರಗಳನ್ನು ನಮೂದಿಸಿ ಬ್ಯಾಂಕ್, ನಿರ್ಮಾಣ ಕಂಪೆನಿ, ಹೂಡಿಕೆದಾರ ಹೀಗೆ ಆ ಸಹಿಯನ್ನು ಹಾಕುತ್ತಾರೆ.

ಇಂದು ಹಲವಾರು ಇಸ್ಲಾಮಿಕ್ ಬ್ಯಾಂಕುಗಳು ಜೊತೆಗೂಡಿ ಬೃಹತ್ ನಿರ್ಮಾಣ ಕಾಮಗಾರಿಗಳನ್ನು ಮಾಡಿಸುತ್ತದೆ. ಸರಕಾರಕ್ಕೆ ಹಣ ಸಾಲ ಪಡೆಯುವ ದಾರಿಯನ್ನು ಇದು ಬಳಸಿಕೊಳ್ಳುತ್ತದೆ. ಇಸ್ಲಾಮಿಕ್ ಡೆವಲಪ್‌ಮೆಂಟ್ ಬ್ಯಾಂಕು ಸಹಿತ ಪ್ರಮುಖ ಸಂಸ್ಥೆಗಳು ಈ ರೀತಿ ಮಾಡುತ್ತಿವೆ.

### 6. ವ್ಯವಹಾರಸ್ಥನ ಅವಶ್ಯಕತೆಯಂತೆ ವಸ್ತುವನ್ನು ಖರೀದಿಸಿ ಬಾಡಿಗೆಗೆ ನೀಡುವುದು

ಬಳಕೆದಾರನ ಹಿತವನ್ನು ಪರಿಗಣಿಸಿ ವಸ್ತುವನ್ನು ಖರೀದಿಸಿ ಆತನಿಗೆ ಬಾಡಿಗೆಗೆ ನೀಡುವ ರೀತಿಯಿದಾಗಿದೆ. ಇದು ಮುದಾರಬ ಕರಾರಿನಿಂದ ಆರಂಭಿಸಿ ಚಲಾವಣೆ ಬಾಡಿಗೆ ಕರಾರಿನೊಂದಿಗೆ ಕೊನೆಗೊಳ್ಳುತ್ತದೆ. ಖರೀದಿಸುವ ವಸ್ತು ನಿರ್ಮಿಸಿ ಆಗಿಲ್ಲದಿದ್ದರೆ ನಿರ್ಮಾಣ ಕರಾರಿನಿಂದ ಆರಂಭಿಸಿ ಬಾಡಿಗೆ ಕರಾರಿನ ಮೂಲಕ ಹಕ್ಕು ಹಸ್ತಾಂತರ ಕರಾರನ್ನು ಮಾಡಿಕೊಳ್ಳ ಬಹುದು. ಒಂದು ಪರಿಧಿವರೆಗೆ ನಿರ್ಮಿಸಿ ಚಲಾಯಿಸಿ ಮರಳಿಸುವ ಕರಾರಿಗೆ ಇದು ಹೋಲುತ್ತದೆ. ಇಲ್ಲಿ ಶರೀಅತ್ ನಿಯಮಗಳು ಬಾಧಕವಾಗಿರುತ್ತವೆ. ಓರ್ವನಿಗೆ ಕಟ್ಟಡ/ಮನೆ/ವಾಹನದ ಅಗತ್ಯವಿರುವಾಗ ಇಸ್ಲಾಮಿಕ್ ಬ್ಯಾಂಕನ್ನು ಸಮೀಪಿಸುತ್ತಾನೆ. ಸಾಮಾನ್ಯ ಬ್ಯಾಂಕುಗಳು ಸಾಲ ನೀಡಿಬಡ್ಡಿಯನ್ನು ಈಡುಗೊಳಿಸುತ್ತವೆ. ಆದರೆ ಇಸ್ಲಾಮಿಕ್ ಬ್ಯಾಂಕ್ ಆ ಅಗತ್ಯವಿರುವ ವಸ್ತುವನ್ನು ಖರೀದಿಸಿ ಅದು ಅವಶ್ಯಕವಿರುವವನಿಗೆ ನೀಡುತ್ತದೆ. ಬಾಡಿಗೆಯೊಂದಿಗೆ ಮಾಲಿಕನಿಗೆ ಒಂದು ಮೊತ್ತವನ್ನು ಸೇರಿಸಿ ನೀಡುವುದಾದರೆ ನಿಶ್ಚಿತ ಕಾಲಾವಧಿಯಲ್ಲಿ ವಸ್ತುವೇ ಆತನ ಕೈ ಸೇರುವುದು. ಇದನ್ನು ವಸ್ತುವಿನ ಮೌಲ್ಯವನ್ನು ಕರಾರು ರೂಪಿಸುವಾಗಲೇ ನಿಶ್ಚಯಿಸಿರಬೇಕಾಗಿದೆ. ಅಲ್ಲವಾದರೆ ಕಾಲಾವಧಿ ಮುಗಿವಾಗ ಕರಾರನ್ನು ದೀರ್ಘಗೊಳಿಸಬಹುದು ಅಥವಾ ವಸ್ತುವನ್ನು ಬ್ಯಾಂಕಿಗೆ ಮರಳಿಸಬಹುದಾಗಿದೆ.

ಇಸ್ಲಾಮಿ ಬ್ಯಾಂಕ್‌ಗಳು ಕಾರು/ಮನೆಯ ಅಗತ್ಯಗಳಿಗೆ ಹಣ ನೀಡುವುದು ಹೆಚ್ಚಾಗಿ ಈ ರೀತಿಯಾಗಿದೆ. ಪಾವತಿ ಮೊತ್ತಕ್ಕೆ ಹಣ ತುಂಬುವ ರೀತಿಯಲ್ಲಿ ಬಾಡಿಗೆಯ ಮೊತ್ತದಲ್ಲಿ ಕಡಿತವಾಗಿರುವುದು. ಬೇಗನೆ ಮೊತ್ತವನ್ನು ತುಂಬುವುದಕ್ಕಾಗಿ ಬಾಡಿಗೆಯ ರಿಯಾಯಿತಿ ನೀಡಿ ಪ್ರೋತ್ಸಾಹಿಸುತ್ತಲೇ ಪಾವತಿಗೆ ತಪ್ಪಿದಲ್ಲಿ ಬಾಡಿಗೆ ಕಡಿತ ಮಾಡಬಹುದಾಗಿದೆ.

# ವೃದ್ಧ ಮನಸ್ಸಿಗೆ ಬೇಕೊಂದು ಸಾಂತ್ವನ




**ಜೋ**ಗುಳವ ಹಾಡಿ ಲಾಲಿಸಿ ಮುದ್ದಿಸಿ ದೊಡ್ಡವರಾಗಿಸಿದ ಮಾತಾಪಿತರಿಗೆ ಪ್ರಾಯಾಧಿಕ್ಯವಾದಾಗ ಅವರೊಂದು ಹೊರೆಯೆಂಬ ಭಾವನೆಯಿಂದ ವೃದ್ಧಾಶ್ರಮಗಳಿಗೆ ಸೇರಿಸುವ, ಮನೆಯಿಂದ ಹೊರಕ್ಕಟ್ಟುವ, ನಿನ್ನೆ ಮೊನ್ನೆ ಬಂದ ಹೆಂಡತಿಯ ಮಾತು ಕೇಳಿ ಅವರನ್ನು ಬೀದಿಗೆ ತಳ್ಳುವ ಮಕ್ಕಳಿರುವ ಲೋಕದಲ್ಲಿ ನಾವು ಬಾಳುತ್ತಿದ್ದೇವೆ.

ತಂದೆ ತಾಯಿಯರನ್ನು ಬಡಿದು ಕೊಂದು, ವಿಷವುಣಿಸಿ ಕೊಂದು ಅವರ 'ಪೀಡೆ'ಗಳಿಂದ ಮುಕ್ತರಾಗಲು ಯೋಚಿಸುವ ಮಕ್ಕಳೂ ನಮ್ಮ ಸಮಾಜದಲ್ಲಿ ಬಹಳಷ್ಟಿದ್ದಾರೆ. ಏಜುವೆಲ್ ಫೌಂಡೇಷನ್‌ನ ಕಾರ್ಯಕರ್ತರಾದ ಹಿಮನ್‌ಶುರವರ ಪ್ರಕಾರ, ಶ್ರೀಮಂತ ಕುಟುಂಬದ 47.3% ಜನರು ತಮ್ಮ ಮಕ್ಕಳಿಂದ ಅಥವಾ ಬಂಧು ಮಿತ್ರಾಧಿಗಳಿಂದ ವಿವಿಧ ರೀತಿಯ ದೌರ್ಜನ್ಯ ಕಿರುಕುಳಕ್ಕೀಡಾಗುತ್ತಿದ್ದಾರೆ. ಅಸಂಖ್ಯ ಹಿರಿಯರು ತಮ್ಮ ಮಕ್ಕಳ, ಬಂಧು ಮಿತ್ರಾದಿಗಳ ಕೋಪಕ್ಕೆ ತುತ್ತಾಗುತ್ತೇವೋ ಎಂಬ ಭಯದಿಂದ ಅಥವಾ ಅವರೊಂದಿಗಿರುವ ಸ್ನೇಹ ವಾತ್ಸಲ್ಯದ ಕಾರಣದಿಂದಲೋ ದೂರು ಕೊಡಲು ಹಿಂಜರಿಯುತ್ತಾರೆ ಮತ್ತು ನೋವನ್ನು ಸಹಿಸಿ ಜೀವನ ಸಾಗಿಸುತ್ತಿರುತ್ತಾರೆ.

ಮಕ್ಕಳ ದೌರ್ಜನ್ಯ ಸಹಿಸಲಾಗದೆ ನ್ಯಾಯಾಲಯದ ಮೊರೆ ಹೋದ ಕೋಮಲ್ ಸಿಂಗ್ ಹಾಗೂ ಲೋತಿಕಾ ಸರ್ಕಾರ್‌ರು ಸರ್ವರ ಗಮನ ಸೆಳೆದರು. ವೃದ್ಧ ತಂದೆ ತಾಯಿಗಳಿಗೆ ಕಿರುಕುಳ ನೀಡಿದ ಕಾರಣಕ್ಕಾಗಿ ಮನೆಯನ್ನೇ ತೊರೆಯಬೇಕೆಂದು ಕಿರುಕುಳ ಕೊಟ್ಟವರಿಗೆ ಕೋರ್ಟ್ ಆದೇಶಿಸಿತ್ತು. ಹೀಗೆ ದೌರ್ಜನ್ಯಕ್ಕೊಳಗಾದ ಮಾತಾಪಿತರ ಪರವಾಗಿ ನ್ಯಾಯಾಲಯ ತೀರ್ಪು ನೀಡಿದಾಗ ಸರಕಾರ ಈ ತೀರ್ಪನ್ನು ಗೌರವದಿಂದ ಪಾಲಿಸಲು ಸನ್ನದ್ಧರಾಗದಿರುವುದರ ಕಾರಣವೇನು?

ಮಕ್ಕಳು ತೋರುವ ಅನಾದರ ಅಗೌರವದಿಂದಾಗಿ ವಿಶ್ರಾಂತ ಜೀವನ ನಡೆಸಬೇಕಾದ ವೃದ್ಧ ಮಾತಾಪಿತರು ಫುಟ್‌ಫಾತಿನಲ್ಲಿ ಆಯುಸ್ಸನ್ನು ವ್ಯಯಿಸುವುದನ್ನು ಕಾಣಬಹುದಾಗಿದೆ. ಇಂತಹವರಿಗೆ ತಮ್ಮ ಮನೆಗೆ ಮರಳಲು ಅನುವಾಗುವಂತಹ ಅವಕಾಶಗಳು ಇದೆಯೇ? ಕಡೇ ಪಕ್ಷ ಅವರಿಗೆ ಸಾಂತ್ವನದ ಮಾತುಗಳನ್ನು ನುಡಿಯಲು ಪ್ರಯತ್ನಿಸುವವರಿದ್ದಾರೆಯೇ?

ಕೇವಲ ಸರಕಾರ ಹಾಗೂ ನ್ಯಾಯಾಲಯದ ಪ್ರಯತ್ನದಿಂದ ಚಿರಾಯುವಾದ ಅಚಂಚಲ ಸ್ನೇಹ ವಾತ್ಸಲ್ಯವೂ ಮಕ್ಕಳ ವೃದ್ಧ ಮಾತಾಪಿತರಿಗೆ ಸಿಗುವುದೇ? ಮಾತಾಪಿತರು ತಮ್ಮ ಮಕ್ಕಳನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡಲು ಸಹಿಸಿದ ಕಷ್ಟಗಳು, ತ್ಯಾಗಗಳು ವರ್ಣಿಸಲು ಸಾಧ್ಯವೇ? ಅದು ಊಹೆಗೆ ನಿಲುಕುವುದೇ? ಆದರೆ ಈ ಬಗ್ಗೆ ಸ್ವಲ್ಪವಾದರೂ ಚಿಂತಿಸಲು, ಯೋಚಿಸಲು ಮಕ್ಕಳು ಸಿದ್ಧರಿಲ್ಲವೆಂದ ಮೇಲೆ ಯಾವ ಸರಕಾರದಿಂದ ಯಾವ ನ್ಯಾಯಾಲಯದಿಂದ ಎಷ್ಟು ಸಾಂತ್ವನ ಸಮಾಧಾನ ಅವರಿಗೆ ಸಿಗಬಹುದು?

ವಾರ್ಧಕ್ಯವೆಂದರೆ ತಮಗಿಷ್ಟವಾದುದನ್ನು ಪಡೆಯಲು, ತಮ್ಮ ಆಗ್ರಹ ಅಭಿಲಾಷೆಗಳನ್ನು ಈಡೇರಿಸಲು ಸಾಧ್ಯವಾಗದೆ ಇರುವ ನಿಸ್ಸಹಾಯಕ ಸ್ಥಿತಿಯಾಗಿದೆ. ವಾರ್ಧಕ್ಯ ಹೊಂದಿದವರ ಸ್ಥಿತಿ ಹೇಗಿರುತ್ತದೆಯೆಂದರೆ ಅವರು ಶಾರೀರಿಕವಾಗಿಯೂ ಮಾನಸಿಕವಾಗಿಯೂ ಬಳಲಿರುವವರಾಗಿರುತ್ತಾರೆ. ಇಲ್ಲಿ ನಿರಾಶೆ ಅವರನ್ನು ದಿನವೂ ಕಾಡುತ್ತಿರುತ್ತದೆ. (ನಾನು ಹೊರೆಯಾಗುತ್ತಿದ್ದೇನೆಂಬ) ನೆಂದು. ಗತಿಸಿದ ಉತ್ತಮ ಕಾಲದ ಬಗ್ಗೆ ಚಿಂತಿಸಿ ನಿಟ್ಟುಸಿರಿಡುತ್ತಾರೆ. ಅತಂತ್ರ ಸ್ಥಿತಿಯಲ್ಲಿ ಅವರು ಬಂಧಿತರಾಗಿರುತ್ತಾರೆ. ನಮ್ಮ ಒಂದೊಂದು ಮಾತಿಗೂ ಬೆಲೆಕೊಡುತ್ತಿದ್ದವರು ಮಾತು ಮಾತಿಗೆ ಜರಿದು ಇದೆಲ್ಲ ಇವರಿಗ್ಯಾಕೇ, ಸುಮ್ಮನೆ ತಿಂದುಂಡು ಮಲಗಿರುವುದು ಬಿಟ್ಟು ಈ ಉಸಾಬರಿಯೆಲ್ಲ ಯಾಕೆ ಎಂದು ರೇಗುವಾಗ ಆ ವೃದ್ಧ ಮಾತಾಪಿತರ ಮನಸ್ಸು ಹೇಗಾದೀತು ಸ್ವಲ್ಪ ಚಿಂತಿಸಿ ನೋಡಿ.

ಹಿಂದೆ ನಮ್ಮ ಅಭಿಪ್ರಾಯಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದವರು

**ಮ ಹಿ ಳಾ ವೇ ದಿ ಕೆ**

✍ ರಹ್ಮಾನ್

ಈಗ ಮಾತನಾಡುವ ಸೌಜನ್ಯವನ್ನೂ ತೋರುವುದಿಲ್ಲ. ಇಂತಹ ಮಾನಸಿಕ ಯಾತನೆಗಳನ್ನು ಅನುಭವಿಸುವ ವೃದ್ಧ ಮಾತಾಪಿತರ ಬಗ್ಗೆ ಯೋಚಿಸುವವರು ಯಾರಿದ್ದಾರೆ? ದುರ್ಬಲವಾದ ಅವರಿಗೆ ಸಾಂತ್ವನ ನೀಡುವವರು ಯಾರಿದ್ದಾರೆ?

ಶೈಶವಾವಸ್ಥೆಯಲ್ಲಿ ನಮ್ಮ ಸ್ಥಿತಿಯೂ ಇದೇ ಆಗಿತ್ತು. ನಮ್ಮ ಆ ದುರ್ಬಲಾವಸ್ಥೆಯ ಸಂದರ್ಭದಲ್ಲಿ ನಮ್ಮ ದೈನಂದಿನ ಕಾರ್ಯಗಳಿಗೆ (ಉದಾ: ಮಲ, ಮೂತ್ರ ವಿಸರ್ಜನೆ) ಅವರು ತೋರಿದ ಕಾಳಜಿ ನಿಜಕ್ಕೂ ಊಹೆಗೂ ನಿಲುಕದ್ದು. ಅವರು ತೋರಿದ ಪ್ರೀತಿ, ಸ್ನೇಹ, ಕರುಣೆ, ವಾತ್ಸಲ್ಯಗಳನ್ನು ಸ್ಮರಿಸಿ ಕೃತಜ್ಞತಾಪೂರ್ವಕವಾಗಿ ಅವರ ಸೇವೆ ಮಾಡಿ ನ್ಯಾಯ ಸಲ್ಲಿಸುವುದು ನಮ್ಮ ಕರ್ತವ್ಯ-ಬಾಧ್ಯತೆಯಾಗಿದೆಯೆಂಬ ಭಾವನೆ ನಮ್ಮಲ್ಲಿ ಎಂದಾದರೂ ಮೂಡಿದೆಯೇ?

ಬಾಲ್ಯದಲ್ಲಿ ನಮ್ಮನ್ನು ಲಾಲಿಸಿ ಮುದ್ದಿಸಿ ಬೆಳೆಸಿದ ಮಾತಾಪಿತರಿಗಾಗಿ ದೇವನಲ್ಲಿ ಬೇಡಲು, "ನನ್ನನ್ನು ಬಾಲ್ಯದಲ್ಲಿ ಪಾಲಿಸಿ ಪೋಶಿಸಿದಂತೆ ನನ್ನ ಮಾತಾಪಿತರಿಗೂ ನೀನು ಕರುಣೆ ತೋರು" ಎಂಬ ಕುರ್‌ಆನಿನ ವಚನಗಳು ಏಕೆ ನಮ್ಮ ಸ್ಮೃತಿ ಪಟಲದಲ್ಲೊಂದು ಬದಲಾವಣೆ ತರುತ್ತಿಲ್ಲ? ಈ ಬಗ್ಗೆ ನಾವೇಕೆ ಅಶ್ರದ್ಧರಾಗಿದ್ದೇವೆ? ಇಂದು ನಮ್ಮ ವೃದ್ಧ ಮಾತಾಪಿತರನ್ನು ಕಾಡುತ್ತಿರುವ ಅಶಕ್ತತೆಯ ಆ ಕೊರಗು ಮುಂದೊಂದು ದಿನ ನಮಗೂ ಬರಲಿದೆಯೆಂಬ ಪ್ರಜ್ಞೆಯಿದ್ದರೆ ಖಂಡಿತ ಅದರಿಂದ ಪ್ರಯೋಜನವಾದೀತು. ನಮಗಾಗಿ ತ್ಯಾಗದ ಮಹಾಪೂರವನ್ನೇ ಧಾರೆಯೆರೆದು ನಮ್ಮನ್ನು ಪೋಷಿಸಿದ ಆ ಮಾತಾಪಿತರಿಗೆ ಅವರ ಪ್ರಾಯಾಧಿಕ್ಯದ ಸಂದರ್ಭದಲ್ಲಿ ಅವರು ನಿಶ್ಶಕ್ತರಾಗಿರುವಾಗ ಅವರಿಗೆ ಮನಸಂತೃಪ್ತಿ ಗೊಳಿಸುವ ಸಾಂತ್ವನದ ಮಾತುಗಳನ್ನಾಡಲು ನಮಗೆ ಸಾಧ್ಯವಿಲ್ಲ ವೆಂದಾದರೆ ಈ ಭೂಮಿಯಲ್ಲಿ ಅವರಿಗೆ ಸಾಂತ್ವನ ಸಮಾಧಾನ ನೀಡುವವರು ಇನ್ನಾರಿರಬಹುದು? ಮಾತಾಪಿತರನ್ನು ವಯಸ್ಸಾದೊಡನೆ ವೃದ್ಧಾಶ್ರಮಕ್ಕೆ ಕಳುಹಿಸಿ ತಿಂಗಳಿಗೆ ಸಮಯಕ್ಕೆ ಸರಿಯಾಗಿ ಅವರ ಸಂರಕ್ಷಣಾ ವೆಚ್ಚವನ್ನು ಕಳುಹಿಸುವ ಸನ್ಮನಸ್ಸುಳ್ಳ ಮಕ್ಕಳು ಇದ್ದಾರೆ. ಆದರೂ ಈ ವೃದ್ಧಾಶ್ರಮಗಳಲ್ಲಿ ನಮಗೆ ಜನ್ಮವಿತ್ತು ಹಾಲುಣಿಸಿ ಬೆಳೆಸಿದ ಮಾತಾಪಿತರನ್ನು ವರ್ಷದಲ್ಲಿ ಒಮ್ಮೆಯಾದರೂ ಕಾಣಲು ಸಮಯವಿಲ್ಲದ ಮಕ್ಕಳನ್ನು ನೆನೆದು ಕಣ್ಣೀರಿಳಿಸುವ ಅದೆಷ್ಟು ತಂದೆ ತಾಯಿಗಳಿರಬಹುದು? ಅವರು ಒಂದು ಹೊತ್ತಿನ ಅನ್ನಾಹಾರ ದೊರೆಯದಿದ್ದರೂ ಪರವಾಗಿಲ್ಲ, ಮಕ್ಕಳಿಂದ ಅಪ್ಪ, ಅಮ್ಮ ಎಂಬ ಸ್ನೇಹತುಂಬಿದ ಮಾತು ಕೇಳಿಸಿ ಕೊಳ್ಳಲು ಕಾತರಿ ಸುತ್ತಿರುತ್ತಾರೆ. ತಾಯಿಯ ಪಾದದಡಿಯಲ್ಲಿ ಸ್ವರ್ಗವಿದೆ, ಈ ಭೂಮಿಯಲ್ಲಿ ದೇವನ ಬಳಿಕ ಮನುಷ್ಯರ ಮೇಲೆ ಅತ್ಯಧಿಕ ಕರ್ತವ್ಯ ತಾಯಿಯ ಮೇಲಿದೆ ನಂತರ ತಂದೆಯೊಡನೆಯೆಂದೂ ಅವರನ್ನು ಕ್ರುದ್ಧಗೊಳಿಸಿದರೆ ಸ್ವರ್ಗ ಪ್ರವೇಶಕ್ಕೆ ಅನರ್ಹವೆಂಬ ಗ್ರಂಥಗಳ ಸಾರವನ್ನು ಕಡೆಗಣಿಸುವರಿಗಿಂತ ದೌರ್ಭಾಗ್ಯವಂತರು ಯಾರಿರಬಹುದು?

ಅನು: ಎಸ್.ಬಿ.

**ಸನ್ಮಾರ್ಗ ಚಂದಾ ದರ**

| | |
|---|---|
| ವಾರ್ಷಿಕ | ರೂ. 390.00 |
| ಅರ್ಧವಾರ್ಷಿಕ | ರೂ. 195.00 |
| **ಗಲ್ಫ್ ರಾಷ್ಟ್ರಗಳಲ್ಲಿ** | |
| ವಾರ್ಷಿಕ | ರೂ. 1,200.00 |

# ಇವೆಲ್ಲವೂ ಬರೇ ನೆಪಗಳು ಮಾತ್ರ

**ಇಂದು ನೈತಿಕ ಮೌಲ್ಯಗಳನ್ನು ಕೆಟ್ಟ ರೀತಿಯಲ್ಲಿ ನೋಡಲಾಗುತ್ತಿದೆ. ದಯೆ, ಪ್ರೇಮ ಮತ್ತು ಸೇವಾ ಭಾವನೆ ಸಮಾಪ್ತವಾಗುತ್ತಾ ಬಂದಿದೆ. ಮಾನವ ಬರ್ಬರ ಮತ್ತು ಮೃಗೀಯತೆಯಲ್ಲಿ ಮೂರ್ಖನಾಗಿದ್ದಾನೆ. ಅವನು ನಡೆಸುತ್ತಿರುವ ಅತ್ಯಾಚಾರಗಳಿಂದ ಜಗತ್ತು ನರಕ ಸದೃಶವಾಗಿದೆ. ಈ ಪರಿಸ್ಥಿತಿಯಲ್ಲಿ ಪ್ರೇಮ ಮತ್ತು ಸಹಾನುಭೂತಿಯ ಭಾವನೆ ಮೇಲೆದ್ದು ಬರುವುದು ಹಿಂದೆಂದಿಗಿಂತ ಈಗ ಹೆಚ್ಚು ಅವಶ್ಯಕವಾಗಿದೆ. ಸರಕಾರಿ ಶಾಲೆಗಳಿಂದ ಮಕ್ಕಳೊಳಗೆ ಇಂತಹ ಭಾವನೆ ಹುಟ್ಟು ಹಾಕಲು ಸಾಧ್ಯವಿದೆಯೇ? ಒಬ್ಬಳು ನರ್ಸ್ ಮಗುವಿಗೆ ಕಾಲಕಾಲಕ್ಕೆ ಸರಿಯಾಗಿ ಹಾಲುಣಿಸ**

**ಕುಟುಂಬ ಒಂದು ಅಧ್ಯಯನ-20**

**ಸಯ್ಯದ್ ಜಲಾಲುದ್ದೀನ್**

**ಬಹುದು. ಆದರೆ ಅವಳಿಂದ ಪವಿತ್ರವಾದ ತಾಯಿ ಮಮತೆಯನ್ನು ಮಗುವಿಗೆ ನೀಡಲು ಸಾಧ್ಯವಿಲ್ಲ. ಅದನ್ನು ನೀಡುವ ಮೂಲ ಕೇವಲ ತಾಯಿ ಮಾತ್ರವಾಗಿದ್ದಾಳೆ.**

**ಮಗುವಿನ ಲಾಲನೆ-ಪಾಲನೆ-ಆರೋಗ್ಯ, ಶಿಕ್ಷಣ ಮತ್ತು ಆರ್ಥಿಕ ಭದ್ರತೆ ಮುಂತಾದ ವಿಷಯದಲ್ಲಿ ಒಂದು ಜನಪರ ದೇಶ ತನ್ನ ನಾಗರಿಕರ ಅವಶ್ಯಕತೆಗಳನ್ನು ಈಡೇರಿಸಿದಾಗ ಉತ್ತಮ ಪರಿಣಾಮವನ್ನು ಕಾಣಲು ಸಾಧ್ಯವಿದೆ. ಯಾವುದೇ ವ್ಯಕ್ತಿ ಹಸಿವು ಮತ್ತು ನಗ್ನವಾಗಿರಬಾರದು, ಮದ್ದು ಚಿಕಿತ್ಸೆ ದೊರಕದಂತಿರಬಾರದು, ಅವನಿಗೆ ವಾಸಿಸುವ ವ್ಯವಸ್ಥೆ ಸಿಗಬೇಕು. ಹೀಗೆ ಅವನಿಗೆ ಈ ಮೂಲಭೂತ ಅವಶ್ಯಕತೆಗಳಲ್ಲಿ ಶಿಕ್ಷಣವೂ ಸೇರಿದೆ. ಯಾವುದೇ ಅನಕ್ಷರಸ್ಥ ಅಥವಾ ವಿದ್ಯಾಹೀನನು ಇರದಂತೆ ನೋಡಿಕೊಳ್ಳುವುದು ದೇಶದ ಕರ್ತವ್ಯವಾಗಿದೆ. ಎಲ್ಲರಿಗೂ ಶಿಕ್ಷಣ ದೊರೆಯುವಂತೆ ಅದು ಮಾಡಬೇಕು.**

**ಇಂದಿನ ಯಾಂತ್ರಿಕವಾದ ಬದುಕಿನಲ್ಲಿ ಮಕ್ಕಳ ತರಬೇತಿಯ ದಾರಿಯನ್ನು ಕಠಿಣವಾಗಿ ಪರಿಗಣಿಸಲಾಗಿದೆ. ಆದರೆ ತನ್ನ ಮಕ್ಕಳ ಕುರಿತು ಗಮನ ನೀಡದಷ್ಟು ಜನರು ಬಿಝಿಯಾಗಿದ್ದಾರೆ ಎಂಬುದು ಸರಿಯಾದ ವಿಚಾರವಲ್ಲ. ಆದರೆ ಮಾನವನ ಗಮನ ಅನಾವಶ್ಯಕ ವಿಚಾರಗಳೆಡೆಗೆ ಹೆಚ್ಚು ಹೊರಳಿ ತಮ್ಮ ವಾಸ್ತವಿಕ ಕರ್ತವ್ಯಗಳು ಮತ್ತು ಹೊಣೆಗಾರಿಕೆಯಿಂದ ದೂರವಿದೆ. ಇಂದಿನ ಭೌತಿಕವಾದಿ ಕಲ್ಪನೆ ಮಾನವರಿಗೆ ಮೋಜು ಮಜಾಗಳನ್ನು ಅಭ್ಯಾಸವನ್ನಾಗಿ ಮಾಡಿದೆ. ಅವರು ಅದರ ಹಿಂದೆ ಹುಚ್ಚರಂತೆ ಓಡಾಡುತ್ತಿದ್ದಾರೆ. ಸಮಾಜದ ನೈತಿಕ ಬಂಧನಗಳಿಂದ ಮುಕ್ತವಾಗಿ ಸ್ವತಂತ್ರ ಜೀವನ ನಡೆಸುವುದಕ್ಕೆ ಸಾಧ್ಯವಿರುವಷ್ಟು ಗರಿಷ್ಠ ಪ್ರಯತ್ನ ನಡೆಸುತ್ತಾರೆ.**

**ಹೀಗಾಗಿ ಹೊಣೆ ನಿಭಾಯಿಸಲು ಅಡೆ-ತಡೆಗಳುಂಟಾಗುವುದು ಸಹಜವಾಗಿದೆ. ಆದುದರಿಂದ ಹೊಣೆಗಾರಿಕೆಯಿಂದ ಬಚಾವಾಗಲು ನೆಪಗಳನ್ನು ಹುಡುಕುತ್ತಾರೆ. ಕೌಟುಂಬಿಕ ಹೊಣೆಯಿಂದಲೂ ದೂರವಾಗಲು ಗರಿಷ್ಠ ಪ್ರಯತ್ನ ನಡೆಸಲಾಗುತ್ತಿದೆ. ಹಾಗಾಗಿಯೇ ಅವರು ತಮ್ಮ ಮಕ್ಕಳನ್ನು ನರ್ಸರಿ ಶಾಲೆಗಳ ವಶಕ್ಕೆ ನೀಡಿ ನಿಶ್ಚಿಂತರಾಗುತ್ತಿದ್ದಾರೆ. ಕೌಟುಂಬಿಕ ಜೀವನ ನಡೆಸುವುದು ಮತ್ತು ಅದರ ಬೇಡಿಕೆಗಳನ್ನು ಪೂರೈಸುವುದನ್ನು ಬಿಟ್ಟು ಸ್ವೇಚ್ಛೆಯ ದೈಹಿಕ ಸಂಬಂಧವನ್ನು ಇಷ್ಟಪಡತೊಡಗಿದ್ದಾರೆ. ನಿಜವಾಗಿ ಮನುಷ್ಯ ತನ್ನ ಕೌಟುಂಬಿಕ ಹೊಣೆಗಾರಿಕೆಯನ್ನು ಈಡೇರಿಸಲು ಬಯಸಿದನೆಂದಾದರೆ ಅವನಿಗೆ ತಡೆಯೂ ಇಲ್ಲ. ಅವನು ಮನಸಿಟ್ಟು ಅದರಲ್ಲಿ ತೊಡಗಿಸಿಕೊಂಡರೆ ಅವನು ಅದರಲ್ಲಿ ಖಂಡಿತಾ ಯಶಸ್ವಿಯಾಗುತ್ತಾನೆ.**

**ಬಾಲ**



ವಫಾ ಹನೀನ
ಮೂಡಬಿದ್ರೆ

# ದಾನದಿಂದ ಸಮೃದ್ಧಿ

ಒಂದಾನೊಂದು ಕಾಲದಲ್ಲಿ ಯುವಕನಾದ ಓರ್ವ ಕೃಷಿಕನಿದ್ದ. ಆತನಿಗೆ ಫಲ ವೃಕ್ಷಗಳು ತುಂಬಿದ್ದ ಒಂದು ತೋಟವಿತ್ತು. ವರ್ಷಂಪ್ರತಿ ಬಹಳಷ್ಟು ಲಾಭ ಪಡೆಯುತ್ತಿದ್ದ.

ಆತ ಬಹಳ ಸಜ್ಜನನಾಗಿದ್ದ. ಅವನು ಪರೋಪಕಾರಿಯಾಗಿದ್ದ. ಬಡವರೊಂದಿಗೆ ಕನಿಕರ ತೋರಿಸುತ್ತಿದ್ದ. ತೋಟದ ಕೊಯ್ಲಿನ ವೇಳೆ ಅದರಿಂದ ದೊಡ್ಡ ಪಾಲನ್ನು ದರಿದ್ರರಿಗೂ, ಬಡವರಿಗೂ ದಾನ ಮಾಡುತ್ತಿದ್ದ.

ಕೊಯ್ಲಿನ ದಿನ ಬಡವರು ತೋಟಕ್ಕೆ ತಂಡೋಪತಂಡವಾಗಿ ಬರುತ್ತಿದ್ದರು. ಅಲ್ಲಿಯೇ ಅವರ ಪಾಲನ್ನು ಹಂಚುತ್ತಿದ್ದ.

ದಾನದಿಂದಾಗಿ ಅವನ ಸಂಪತ್ತು ಕಡಿಮೆಯಾಗಲಿಲ್ಲ. ವರ್ಷಂಪ್ರತಿ ಅವನ ಸಂಪತ್ತು ವೃದ್ಧಿಸುತ್ತಿತ್ತು. ಕೆಲವು ದಿನಗಳ ಬಳಿಕ ಆ ಕೃಷಿಕ ಅಸುನೀಗಿದ. ತೋಟವು ಪುತ್ರರ ಕೈ ಸೇರಿತು.

ಈ ಮಕ್ಕಳು ದುರ್ಜನರಾಗಿದ್ದರು. ಅತಿಯಾಸೆವುಳ್ಳವರೂ ಜಿಪುಣರೂ ಆಗಿದ್ದರು. ತೋಟದ ಅಧಿಕಾರ ಸಿಕ್ಕಿದಾಗ ಪರಸ್ಪರ ಹೀಗೆ ಮಾತಾಡಿಕೊಂಡರು.

"ನಮ್ಮ ಅಪ್ಪ ಓರ್ವ ಮೂರ್ಖ. ತೋಟದಲ್ಲಿ ಸಿಕ್ಕಿದ ಫಸಲನ್ನು ಈ ದರಿದ್ರರಿಗೆ ನೀಡಿದ್ದಾರೆ. ಇನ್ನು ಮುಂದೆ ಅದನ್ನು ನಿಲ್ಲಿಸಬೇಕು. ಸದ್ಯ ನಮ್ಮ ಕುಟಂಬ ದೊಡ್ಡದಾಗಿದೆ. ಖರ್ಚಿಗೆ ತುಂಬಾ ಹಣ ಬೇಕಾಗುತ್ತದೆ. ಆದ ಕಾರಣ ಫಸಲನ್ನು



ಯಾರಿಗೂ ಕೊಡಬಾರದು.

ಬೆಳೆ ಕೊಯ್ಯುವಾಗ ಆ ದರಿದ್ರರು ಬರುತ್ತಾರಲ್ಲ. ಅವರನ್ನು ಬರಿಗೈಯಲ್ಲಿ ಹೇಗೆ ಮರಳಿಸುವುದು? ಮರಳಿಸಿದರೆ ಜನರು ಏನೆಂದು ಹೇಳಿಯಾರು? ಎಂದು ಇನ್ನೊಬ್ಬ ಆಶಂಕೆ ವ್ಯಕ್ತಪಡಿಸಿದ.

ಅದಕ್ಕೂ ದಾರಿಯಿದೆ. ಯಾರಿಗೂ ತಿಳಿಯದಂತೆ ಫಸಲನ್ನು ಕೊಯ್ಯೋಣ. ಮುಂಜಾನೆ ಅವರು ಬರುವುದಕ್ಕಿಂತ ಮುಂಚಿತವಾಗಿ ಕೊಯ್ಲಿನ ಕೆಲಸ ಮುಗಿಸಬೇಕು ಎಂದು ತೀರ್ಮಾನಿಸಿದರು.

ಅದರಂತೆ ನಿಶ್ಚಿತ ರಾತ್ರಿ ಫಸಲು ಕೊಯ್ಯಲಿಕ್ಕಾಗಿ ಅಲ್ಲಿಗೆ ತಲುಪಿದರು. ಆಗ ತೋಟದಲ್ಲಿ ಕಂಡ ದೃಶ್ಯ ವಿಚಿತ್ರವಾಗಿತ್ತು. ಅವರು ಹೌಹಾರಿದರು! ತೋಟಕ್ಕೆ ಬೆಂಕಿ ಹತ್ತಿ ತೋಟವೆಲ್ಲವೂ ನಾಶವಾಗಿ ಹೋಗಿವೆ. ಯಾವ ವೃಕ್ಷವೂ ಉಳಿದಿಲ್ಲ.

ಅಯ್ಯೋ ಕಷ್ಟವೇ ಎಂದು ಪ್ರಲಾಪಿಸಿದರು. ಬಡವರ ಹಕ್ಕುಗಳನ್ನು ನೀಡದೆ ಇದ್ದುದರ ಫಲವಾಗಿ ನಮಗೆ ಈ ಸ್ಥಿತಿ ಬಂದು ಬಿಟ್ಟಿತೆಂದು ಅವರಿಗೆ ಮನವರಿಕೆಯಾಗಿತ್ತು. ಅವರು ಪರಿತಪಿಸಿದರು.

ನೀತಿ: ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ.

## ಅರಬಿ ಸುಡೊಕು -56

ಆಟದ ನಿಯಮ:

ಖಾಲಿ ಜಾಗದಲ್ಲಿ 'ا'ನಿಂದ 'ح'ವರೆಗಿನ ಅರಬಿ ಅಕ್ಷರಗಳನ್ನು ತುಂಬಬೇಕು. ಉದ್ದ ಸಾಲು, ಅಡ್ಡ ಸಾಲು ಹಾಗೂ 2x3 ಜಾಗದ ಚೌಕದಲ್ಲಿ ಯಾವುದೇ ಅಕ್ಷರ ಎರಡು ಬಾರಿ ಬರುವಂತಿಲ್ಲ. ನಿಮ್ಮ ಜಾಣ್ಮೆಗೆ, ತಾಳ್ಮೆಗೆ, ಬುದ್ಧಿವಂತಿಕೆಗೆ ಇಲ್ಲಿದೆ ಚಾಲೆಂಜ್!

| | | | | | |
|---|---|---|---|---|---|
| ث | ح | | | | ج |
| ت | | | ا | | |
| | | ت | ج | | |
| | | ب | ت | | |
| | | ح | | | ب |
| ب | | | | ا | ت |

**ಅರಬಿ ಸುಡೊಕು- 51ರ ಸರಿಯುತ್ತರ ಕಳುಹಿಸಿದವರು:**

**ಸುಮಯ್ಯ ಮರ್ಯಮ್**
8ನೇ ತರಗತಿ, ಸ್ಯೆಂಟ್ ಜೆರೋಸಾ ಹೈಸ್ಕೂಲ್
ಮಂಗಳೂರು–1

**ಅರಬಿ ಸುಡೊಕು -54ರ ಉತ್ತರ**

| | | | | | |
|---|---|---|---|---|---|
| ت | ج | ث | ب | ا | ح |
| ا | ح | ب | ث | ت | ج |
| ح | ت | ج | ا | ث | ب |
| ث | ب | ا | ج | ح | ت |
| ج | ث | ح | ت | ب | ا |
| ب | ا | ت | ح | ج | ث |

ಮಕ್ಕಳೇ! ನೀವೂ **'ಅರಬಿ ಸುಡೊಕು'** ತುಂಬಿಸಿ ಸನ್ಮಾರ್ಗಕ್ಕೆ ಕಳುಹಿಸಬಹುದು. ಸರಿಯುತ್ತರ ಕಳುಹಿಸಿದವರ ಹೆಸರನ್ನು ಪ್ರಕಟಿಸಲಾಗುವುದು. ಒಂದಕ್ಕಿಂತ ಹೆಚ್ಚು ಸರಿ ಉತ್ತರ ಬಂದರೆ ಚೀಟಿ ಎತ್ತಲಾಗುವುದು. ಇದರಲ್ಲಿ ಬಹುಮಾನವಿಲ್ಲ ಮಕ್ಕಳೇ. ಆದರೆ ಯಾರದೇ ಸಹಾಯವಿಲ್ಲದೆ ನೀವಾಗಿಯೇ **'ಅರಬಿ ಸುಡೊಕು'** ತುಂಬಿಸಿದರೆ, ನೀವು ಬುದ್ಧಿವಂತರು ಎಂದು ಅರ್ಥ. ಹಾಗಾದರೆ ರೆಡೀನಾ? ನೀವು ಮಾಡಬೇಕಾದದ್ದಿಷ್ಟೇ, ಅರಬಿ ಸುಡೊಕು ತುಂಬಿಸಿದ ಮೇಲೆ (ಆಟದ ನಿಯಮ ನೋಡಿ) ನಿಮ್ಮ ಹೆಸರು, ತರಗತಿ, ಶಾಲೆ/ಮದ್ರಸಾ, ಊರು ಮತ್ತು ಪಿನ್‌ಕೋಡ್ ಸರಿಯಾಗಿ ಬರೆದು ಈ ಕೆಳಗಿನ ವಿಳಾಸಕ್ಕೆ ಒಂದು ವಾರದೊಳಗೆ ಕಳುಹಿಸಬೇಕು.

**ಅರಬಿ ಸುಡೊಕು- 56**
ಸಂಪಾದಕರು, ಸನ್ಮಾರ್ಗ ವಾರಪತ್ರಿಕೆ
ಅಂಚೆಪೆಟ್ಟಿಗೆ ನಂಬ್ರ - 16, ಮಂಗಳೂರು - 575001

## ಸಾಮಾನ್ಯ ಜ್ಞಾನ

1. ಬೈಬಲ್‌ನ ನಾಲ್ಕು ಸಂಗ್ರಹಗಳಲ್ಲಿ ಮತ್ತಾಯ, ಮಾರ್ಕ್ ಮತ್ತು ಲೂತ್ ಅಲ್ಲದೆ ನಾಲ್ಕನೆಯದು ಯಾವುದು?
2. ಕ್ರೈಸ್ತ ಧರ್ಮದ ಮೂರು ದೇವರುಗಳಲ್ಲಿ ಅಲ್ಲಾಹ್ ಮತ್ತು ಈಸಾರ(ಅ) ನಂತರ ಯಾವುದನ್ನು ಅಂಗೀಕರಿಸುತ್ತಾರೆ?
3. ಯಹೂದಿಗಳು ಮತ್ತು ಕ್ರೈಸ್ತರು ಸನ್ಮಾರ್ಗದೆಡೆಗೆ ಮರಳಲು ಯಾವ ಪ್ರವಾದಿಯನ್ನು ಅನುಸರಿಸಲು ಸೂರಃ ಅಲ್‌ಬಕರದಲ್ಲಿ ಹೇಳಲಾಗಿದೆ?
4. ಸೂರಃ ಅಲ್‌ಬಕರದಲ್ಲಿ ಯಹೂದಿಗಳ ಕಠೋರ ಹೃದಯವನ್ನು ಯಾವುದರೊಂದಿಗೆ ಹೋಲಿಸಲಾಗಿದೆ?
5. ಸೂರಃ ಅಲ್ ಬಕರಾದಲ್ಲಿ ಪ್ರಸ್ಥಾಪಿಸಲಾಗಿರುವ ಎರಡು ಮಹಾ ಅಪರಾಧಗಳಲ್ಲಿ ಒಂದು ಅಲ್ಲಾಹ್‌ನ ದೃಷ್ಟಾಂತವನ್ನು ಸುಳ್ಳಾಗಿಸುವುದು ಮತ್ತೊಂದು ಯಾವುದು?
6. ಪ್ರವಾದಿರವರಿಗೆ(ಸ) ಆಹಾರದಲ್ಲಿ ವಿಷ ನೀಡಿದ ಝೈನಬ್ ಎಂಬ ಮಹಿಳೆ ಯಾವ ಧರ್ಮೀಯಳಾಗಿದ್ದಳು?
7. ಹಿಂದೂ ಧರ್ಮದ ಯಾವ ಪವಿತ್ರ ಗ್ರಂಥ ಶ್ರೀ ಕೃಷ್ಣರ ಉಪದೇಶಗಳನ್ನೊಳಗೊಂಡಿದೆ.
8. ಹಿಂದೂ ಧರ್ಮದ ಯಾವ ಪವಿತ್ರ ಗ್ರಂಥ ಶ್ರೀ ರಾಮನ ಜೀವನ ಚರಿತ್ರೆ ಮತ್ತು ನೈತಿಕ ಉಪದೇಶಗಳನ್ನೊಳಗೊಂಡಿದೆ?
9. ರಾಂಪುರದಲ್ಲಿ 1844ರಲ್ಲಿ ಜನಿಸಿ 1883ರಲ್ಲಿ ಮರಣ ಹೊಂದಿದ ಆರ್ಯಸಮಾಜ ಮತ್ತು ಶುದ್ಧೀಕರಣ ಚಳವಳಿಯ ಸ್ಥಾಪಕ ಯಾರು?
10. ಸಂಪ್ರದಾಯ ಮತ್ತು ಕವಿತೆಗಳು ಹಾಗೂ ವರದಿಗಳ ಸಂಗ್ರಹ "ತಲ್ಮೂದ್" ಯಾವ ಧರ್ಮದ ಪವಿತ್ರ ಗ್ರಂಥ?

ಫಿರೋಝ್ ಮನ್ನಾ ಉಡುಪಿ

ಉತ್ತರ: 1. ಯೋಹನ್ನಾ, 2. ಪವಿತ್ರಾತ್ಮ, 3. ಹ. ಇಬ್ರಾಹೀಮ್(ಅ). 4. ಕಲ್ಲು, 5. ಪ್ರವಾದಿಯನ್ನು ಕೊಲ್ಲುವುದು, 6. ಯಹೂದಿ. 7. ಭಗವತ್‌ಗೀತೆ, 8. ರಾಮಾಯಣ, 9. ದಯಾನಂದ ಸರಸ್ವತಿ. 10. ಯಹೂದಿ ಧರ್ಮದ.

## ಲೋಕೋಕ್ತಿ ಇಸ್ಲಾಮಿನ ಸಂದೇಶ– 4

ಮುಖ್ತಾರ್ ಅಹ್ಮದ್, ಪಾಣೆಮಂಗಳೂರು

| | |
|---|---|
| 1. A useless life is an early death (English)<br>ವ್ಯರ್ಥ ಜೀವನ ಅಕಾಲ ಮೃತ್ಯುವಿಗೆ ಸಮಾನ. | ಪ್ರವಾದಿ(ಸ) ಹೇಳಿದರು– ವ್ಯರ್ಥ ಮಾತುಗಳನ್ನು ವರ್ಜಿಸುವುದು ವಿಶ್ವಾಸಿಗಳ ಗುಣ ವಿಶೇಷಗಳಲ್ಲೊಂದಾಗಿದೆ. (ತಿರ್ಮಿದಿ, ಇಬ್ನುಮಾಜ) |
| 2. The gem can't be polished without Friction nor the man polished without trials (chinese)<br>ಮುತ್ತನ್ನು ತಿಕ್ಕದೆ ಹೊಳಪು ಬರದು. ಪರೀಕ್ಷೆಗೊಡ್ಡದೆ ಮನುಷ್ಯ ಉತ್ಕೃಷ್ಟನಾಗಲಾರ. | ನಾವು ನಿಮ್ಮನ್ನು ಭಯಾಶಂಕೆ, ಹಸಿವು, ಧನಹಾನಿ ಮತ್ತು ಉತ್ಪನ್ನಗಳ ನಾಶ ಗಳಿಗೊಳಪಡಿಸಿ ಅವಶ್ಯವಾಗಿಯೂ ಪರೀಕ್ಷಿಸುವೆವು. ಇಂತಹ ಸನ್ನಿವೇಶಗಳಲ್ಲಿ ತಾಳ್ಮೆ ವಹಿಸಿದವರಿಗೆ ಸುವಾರ್ತೆ ನೀಡಿರಿ. (ಕುರ್‌ಆನ್ 2:155) |
| 3. A soft answer trunth away wrath (English).<br>ಕೋಮಲ ಉತ್ತರ ಕ್ರೋಧವನ್ನು ದೂರೀಕರಿಸುತ್ತದೆ. | ಒಳಿತು ಮತ್ತು ಕೆಡುಕು ಸರಿಸಮಾನವಲ್ಲ. ನೀವು ಕೆಡುಕನ್ನು ಅತ್ಯುತ್ತಮ ಒಳಿತಿನ ಮೂಲಕ ದೂರೀಕರಿಸಿರಿ. ನಿಮ್ಮೊಂದಿಗೆ ಹಗೆತನ ಕಟ್ಟಿಕೊಂಡವನು ನಿಮ್ಮ ಆಪ್ತಮಿತ್ರನಾಗಿ ಬಿಡುವುದನ್ನು ನೀವು ಕಾಣುವಿರಿ. (ಕುರ್‌ಆನ್ 41:34) |
| 4. Identitiy your weak link and act now. (English)<br>ನಿನ್ನ ದೌರ್ಬಲ್ಯ ಗುರುತಿಸಿ ಕಾರ್ಯ ಪ್ರವೃತ್ತನಾಗು. | ಪ್ರತಿಯೊಬ್ಬನೂ ತಾನು ನಾಳೆಗಾಗಿ ಏನನ್ನು ಸಿದ್ಧಪಡಿಸಿಟ್ಟಿರುವೆನೆಂಬುದನ್ನು ನೋಡಿಕೊಳ್ಳಲಿ. (ಕುರ್‌ಆನ್ 59:18) |
| 5. When the wine is in the wit is out (English)<br>ಮದ್ಯ ಬುದ್ಧಿಹೀನನನ್ನಾಗಿಸುತ್ತದೆ. | ಅವೆರಡರಲ್ಲೂ (ಮದ್ಯಪಾನ ಮತ್ತು ಜೂಜಾಟ) ಮಹತ್ತರವಾದ ಕೇಡಿದೆ. ಅವುಗಳಲ್ಲಿ ಜನರಿಗೆ ಕೆಲವು ಪ್ರಯೋಜನಗಳು ಇದ್ದರೂ ಅವುಗಳಿಂದಾಗುವ ಹಾನಿಯೇ ಪ್ರಯೋಜನಗಳಿಗಿಂತ ಬಹಳಷ್ಟು ಹೆಚ್ಚು. (ಕುರ್‌ಆನ್ 2:219) |

# ಹೊಸ ಮನೆ



ಕಥೆ

✍ ಖತೀಜ ನುಸ್ರತ್ ಉಳ್ಳಾಲ

**ಭ**ಯಂಕರವಾದ ಸೆಖೆ. ಉರಿ ಬಿಸಿಲು. ತಲೆಯೆಲ್ಲಾ ನೋಯುತ್ತಿದೆ ಒಂದು ಬಾಟಲಿ ನೀರು ಖರೀದಿಸಿ ಕುಡಿಯೋಣವೆಂದರೆ ಅದಕ್ಕೂ ಸಮಯವಿಲ್ಲ. ಅಬ್ಬಬ್ಬಾ ತನ್ನ ಜೀವಮಾನದಲ್ಲೇ ಇಂತಹ ಸಂಕಟ ಅನುಭವಿಸಿದ್ದಿಲ್ಲ. ಇದೇನಾ ಎಲ್ಲರೂ ಇಷ್ಟ ಪಡುವ ದುಬ್ಯಾ. ಇಷ್ಟು ಹೊತ್ತು ಕಾದದ್ದಕ್ಕಾದರೂ ಒಂದು ಟ್ಯಾಕ್ಸಿ ಸಿಗುತ್ತಿದ್ದರೆ ಸಾಕಾಗಿತ್ತು. ಇಂಟರ್‌ವ್ಯೂಗೆ ಇನ್ನು ಅರ್ಧ ಗಂಟೆ ಮಾತ್ರ ಬಾಕಿಯಿದೆ. ಇರಲಿ ಎಷ್ಟು ಕಷ್ಟವಾದರೂ ಪರವಾಗಿಲ್ಲ. ಯಾ ಅಲ್ಲಾಹ್! ಇವತ್ತಿನ ಇಂಟರ್‌ವ್ಯೂನಲ್ಲಿ ಪಾಸಾದರೆ ಸಾಕಿತ್ತು. ಒಂದು ಗಂಟೆ ಕಾದು ಕೊನೆಗೂ ಟ್ಯಾಕ್ಸಿ ಸಿಕ್ಕಿದಾಗ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿ ಆದಿಲ್ ಆಫೀಸಿನ ಕಡೆಗೆ ಹೊರಡುತ್ತಾನೆ.

ಟ್ಯಾಕ್ಸಿಯಿಂದ ಇಳಿಯುತ್ತಲೇ ಮಸೀದಿಯಲ್ಲಿ ನಮಾಝಿಗಾಗಿ ಧ್ವನಿ ಮೊಳಗುತ್ತಿತ್ತು. ಯಾವಾಗಲೂ ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸುವ ಆದಿಲ್ ನೇರವಾಗಿ ಮಸೀದಿಯ ಕಡೆಗೆ ನಡೆಯುತ್ತಾನೆ. ಚೆನ್ನಾಗಿ ಮುಖ ತೊಳೆದು ವುಝೂ ಮಾಡಿ ಮಸೀದಿಗೆ ಪ್ರವೇಶಿಸಿದಾಗ ದಣಿವೆಲ್ಲ ಆರಿ ಹೋದಂತಾಯಿತು. ನಮಾಝ್ ಮುಗಿಸಿ ದುಆ ಮಾಡಿ ಆಫೀಸಿನ ಕಡೆಗೆ ನಡೆಯುತ್ತಾನೆ. ಸಮಯ ನೋಡಿದಾಗ ನಿಗದಿತ ಸಮಯಕ್ಕಿಂತ 5 ನಿಮಿಷ ತಡವಾಗಿತ್ತು. ಮ್ಯಾನೇಜರ್ ಬಾವಾಕರು ತಮ್ಮ ಊರಿನವರೇ, ಪರಿಚಯದವರೂ ಆಗಿದ್ದಾರೆ. ಆದರೂ ಇಂಟರ್‌ವೀವ್‌ಗೆ 5 ನಿಮಿಷ ಮೊದಲೇ ತಲುಪಬೇಕಿತ್ತು ಎಂದು ಯೋಚಿಸುತ್ತಿರುವಾಗಲೇ ಆಫೀಸಿಗೆ ತಲುಪಿದನು. ಎಂ.ಬಿ.ಎ. ಪಧವೀದರನಾಗಿದ್ದರಿಂದ ಆದಿಲ್ ಸೇಲ್ಸ್ ಮ್ಯಾನೇಜರ್ ಕೆಲಸಕ್ಕಾಗಿ ಅರ್ಜಿ ಹಾಕಿದ್ದನು.

ಆಫೀಸಿನಲ್ಲಿ ವಿಚಾರಿಸಿದಾಗ ಮ್ಯಾನೇಜರ್‌ರ ಕೊಠಡಿಯೊಳಗೆ ಹೋಗಲು ಪ್ರವೇಶಾನುಮತಿ ಸಿಕ್ಕಿತು. ಬಾಗಿಲು ತೆರೆಯುತ್ತಿದ್ದಂತೆಯೇ ಮ್ಯಾನೇಜರ್‌ನನ್ನು ಕಂಡಾಗ ಒಮ್ಮೆಲೇ ಮೈ ಬೆವರಿದಂತಾದರೂ ಧೈರ್ಯ ಮಾಡಿಕೊಂಡು ಸಲಾಮ್ ಹೇಳಿ ಮುಂದೆ ನಡೆಯುತ್ತಾನೆ. ಇಂಟರ್‌ವ್ಯೂ ಆರಂಭವಾಗುತ್ತಲೇ ಮ್ಯಾನೇಜರರು ತಡವಾದ ಕಾರಣವನ್ನು ವಿಚಾರಿಸುತ್ತಾರೆ. ನಮಾಝ್‌ನ ಸಮಯವಾದುದರಿಂದ ಮಸೀದಿಯಲ್ಲಿ ನಮಾಝ್ ನಿರ್ವಹಿಸಿಯೇ ಬಂದೆ ಎಂದಾಗ "ಮೊದಲನೆಯ ದಿನವೇ ಹೀಗಾದರೆ ಮುಂದಿನ ಅವಸ್ಥೆ ಹೇಗೆ? ನೋಡುವ ನಾವು ಈ ಊರಿಗೆ ಬಂದಿರುವುದು ಹಣ ಸಂಪಾದಿಸಲು ಅಲ್ಲವೇ? ಇಲ್ಲಿ ನಮ್ಮ ಒಂದೊಂದು ನಿಮಿಷವೂ ಮಹತ್ವವಾದದ್ದು ಎಂದು ನಾವು ಚೆನ್ನಾಗಿ ಅರಿತಿರಬೇಕು. ಎಲ್ಲವನ್ನೂ ಕಮರ್ಷಿಯಲಾಗಿಯೇ ಯೋಚಿಸಬೇಕು. ನನ್ನ ಆಫೀಸಿನಲ್ಲಿ ಕೆಲಸದ ಅವಧಿ ಮುಗಿದ ನಂತರವೇ ಎಲ್ಲ ವೈಯಕ್ತಿಕ ಕೆಲಸ ಮಾಡಬೇಕು. ನಾನು ಕೆಲವು ವರ್ಷಗಳ ಹಿಂದೆ ಬರಿಗೈಯಲ್ಲೇ ದುಬ್ಯಾ ಕಾಲಿಟ್ಟಿದ್ದೆ. ನಾನು ನನ್ನ ಸ್ವಂತ ಕೈಗಳಿಂದ ದುಡಿದು ಈ ಕಂಪೆನಿಯನ್ನು ಸ್ಥಾಪಿಸಿ ಈ ಸ್ಥಾನಕ್ಕೆ ತಲುಪಿದ್ದೇನೆ. ನನ್ನ ಅಧೀನದಲ್ಲಿ ನೂರಾರು ಜನರು ಕೆಲಸದಲ್ಲಿದ್ದಾರೆ. ನಾನು ಅವರಿಗೆ ಸಂಬಳ ಕೊಟ್ಟು ಸಾಕುತ್ತಿದ್ದೇನೆ. ಅದೇನಿರಲಿ ನಾಳೆಯಿಂದ ಕೆಲಸಕ್ಕೆ ಸೇರಿ ಕಂಪೆನಿಯ ನಿಯಮಗಳ ಬಗ್ಗೆ ಚೆನ್ನಾಗಿ ತಿಳಿದುಕೊ" ಇಷ್ಟು ಹೇಳಿ ಹೊರಡಲು ಅನುಮತಿಸಿದರು.

ಆದಿಲ್ ಕೃತಜ್ಞತೆಗಳನ್ನು ಸಲ್ಲಿಸುತ್ತಾ ಬಾಗಿಲ ಬಳಿ ತಲುಪುತ್ತಿದ್ದಂತೆಯೇ ಪುನಃ ಕರೆದು "ಹಾಂ ಮತ್ತೆ ಸೇಲ್ಸ್ ಮ್ಯಾನೇಜರ್ ಕೆಲಸವಾದುದರಿಂದ ನಿನ್ನ ಗಡ್ಡವನ್ನು ಕ್ಲೀನ್‌ಶೇವ್ ಮಾಡುವುದು ಉತ್ತಮ" ಎಂದು ಹೇಳಿದಾಗ ಆದಿಲ್ 'ಇನ್‌ಶಾ ಅಲ್ಲಾಹ್' ಎನ್ನುತ್ತಾನೆ. "ಇನ್‌ಶಾ ಅಲ್ಲಾಹ್ ಎಂದು ಹೇಳಿದರೆ ಸಾಲದು. ಹೇಳುವ ಮಾತುಗಳೆಲ್ಲ ಚೆನ್ನಾಗಿ ನೆನಪಿರಲಿ" ಎಂದಾಗ ಮ್ಯಾನೇಜರ್ ಬಾವಾಕರ ಮಾತುಗಳು ಯಾಕೋ ಅವನಿಗೆ ಹಿಡಿಸಲಿಲ್ಲ. ಅಲ್ಲಾಹನು ನೀಡಿದ ಅನುಗ್ರಹವನ್ನು ತಾನು ಮಾಡಿದ ಸಾಧನೆಯೆಂದು ಅಹಂಕಾರ ಪಡುತ್ತಿದ್ದಾರಲ್ಲಾ. ಈ ಅಹಂಕಾರದ ಮಾತುಗಳು ಅಲ್ಲಾಹನಿಗೆ ಇಷ್ಟವಾಗದಿದ್ದರೆ ಇವರ ಗತಿ ಏನಾಗಬಹುದು ಎಂದು ಯೋಚಿಸುತ್ತಾ ರೂಮ್‌ನ ಕಡೆಗೆ ಮರಳುತ್ತಾನೆ.

ಆದಿಲ್ ಅಲ್ಲಾಹನ ನಾಮದೊಂದಿಗೆ ತನ್ನ ಕೆಲಸವನ್ನು ಆರಂಭಿಸುತ್ತಾನೆ. ಅವನ ಕಠಿಣ ಪರಿಶ್ರಮದಿಂದ ಕಂಪೆನಿಯು ವ್ಯಾಪಾರದಲ್ಲಿ ಪ್ರಗತಿಯನ್ನು ಹೊಂದುತ್ತದೆ. ಅವನ ಸತ್ಯಸಂಧತೆ, ಪ್ರಾಮಾಣಿಕತೆಯನ್ನು ಮೆಚ್ಚಿ ಮ್ಯಾನೇಜರ್‌ರು ಸಂಬಳದ ಜತೆ ಕಮಿಶನ್ ಕೂಡಾ ನೀಡಲು ಆರಂಭಿಸುತ್ತಾರೆ. ಈ ವ್ಯಾಪಾರವನ್ನು ಇನ್ನೂ ಅಭಿವೃದ್ಧಿಪಡಿಸಲು ಬಾವಾಕರು ಬ್ಯಾಂಕ್‌ನಿಂದ ಲೋನ್ ಪಡೆದು ಅಲ್ಲಲ್ಲಿ ಹೊಸ ಶಾಖೆಗಳನ್ನು ತೆರೆಯುತ್ತಾರೆ. ಆದರೆ ಆರ್ಥಿಕ ಬಿಕ್ಕಟ್ಟು ಜಗತ್ತಿಡೀ ಬಾಧಿಸಿದಾಗ ಈ ಕಂಪೆನಿಯ ವ್ಯಾಪಾರವೂ ಕಡಿಮೆಯಾಗುತ್ತಾ ಬಂತು. ಬ್ಯಾಂಕ್ ಲೋನ್‌ಗಳನ್ನು ಪಾವತಿಸಲು ಕಷ್ಟವಾಗತೊಡಗಿತು. ಬ್ಯಾಂಕ್‌ನವರು ಆಗಾಗ ಕಿರುಕುಳ ನೀಡಲು ಆರಂಭಿಸಿದರು. ಆಗ ಎಲ್ಲ ಕೆಲಸಗಾರರ ಸಂಬಳವನ್ನು ಕೂಡ ಕಡಿಮೆಗೊಳಿಸಿದರು. ನಂತರದ ಕೆಲವು ತಿಂಗಳು ಅವರಿಗೆ ಸಂಭಳ ನೀಡದೆ ದುಡಿಸಬೇಕಾಯಿತು. ಒಂದು ದಿನ ಬಾವಾಕರು ಕಂಪೆನಿಯ ಎಲ್ಲಾ ನೌಕರರನ್ನು ಕರೆದು ಕಂಪೆನಿಯು ತುಂಬ ನಷ್ಟದಲ್ಲಿರುವುದರಿಂದ ಹಾಗೂ ಬ್ಯಾಂಕ್ ಲೋನ್ ಪಾವತಿಸಲು ಸಾಧ್ಯವಾಗದಿರುವುದರಿಂದ ಕಂಪೆನಿಯನ್ನು ಮಾರಲು ತೀರ್ಮಾನಿಸಿದ್ದೇನೆಂದು ತಿಳಿಸಿದರು. ಈ ಸಮಯವನ್ನು ಸದುಪಯೋಗಿಸಿಕೊಂಡು ಆದಿಲ್ ತನ್ನ ಬಳಿ ಉಳಿತಾಯವಾಗಿರುವ ಸ್ವಲ್ಪ ಹಣ ಮತ್ತು ಪರಿಚಯದವರೊಬ್ಬರಿಂದ ಸಾಲ ಪಡೆದು ಒಂದು ಶಾಖೆಯನ್ನು ಖರೀದಿಸುತ್ತಾನೆ.

ಕೊನೆಗೂ ಬಾವಾಕರು ಇನ್ನು ದುಬ್ಯಾಯಲ್ಲಿ ನಿಂತರೆ ಉಳಿಗಾಲವಿಲ್ಲ ಎಂದು ಹೆಂಡತಿ ಮಕ್ಕಳ ಜತೆ ಊರಿಗೆ ಹೊರಡುತ್ತಾರೆ. ದುಬ್ಯಾಯಲ್ಲಿರುವಾಗ ಮನೆ ಬಾಡಿಗೆ, ಫರ್ನಿಚರ್, ವಸ್ತ್ರಾಭರಣ, ಪಾರ್ಟಿ ಗಿಫ್ಟ್ ಹೊಟೇಲ್ ಇತ್ಯಾದಿಗಳಿಗೆ ಅನಾವಶ್ಯಕ ಹಣ ಖರ್ಚು ಮಾಡುತ್ತಿದ್ದರೇ ವಿನಃ ಊರಿನಲ್ಲಿ ಮನೆಯೊಂದನ್ನು ಬಿಟ್ಟರೆ ಆದಾಯದ ಯಾವ ಮೂಲವಾಗಲಿ ಉಳಿತಾಯವಾಗಲೀ ಮಾಡಿರಲಿಲ್ಲ. ಯಾವಾಗಲೂ ಸಂಬಂಧಿಕರರೆಲ್ಲರಿಗೂ ತೋರಿಕೆಗಾಗಿ ಉಡುಗೊರೆ ತರುತ್ತಿದ್ದವರು ಈ ಸಲ ಬರಿಗೈಯಲ್ಲಿ ಬಂದಾಗ ಎಲ್ಲರೂ ದೂರ ಸಾಗುತ್ತಾರೆ. ಗಲ್ಫ್‌ನಲ್ಲಿರುವಾಗ ನಮ್ಮನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. 10-15 ವರ್ಷ ದುಡಿದು ಒಳ್ಳೆ ಹಣ ಮಾಡಿರಬಹುದು ಎಂದೇ ಅವರ ಆರೋಪ. ಆದರೆ ಬಾವಾಕರ ತಂದೆಯ ಮನೆಯಲ್ಲಿರಲು ತಂದೆ ತಾಯಿ ಒತ್ತಾಯ ಮಾಡಿದರೂ ಅದು ಹಳೇ ಮನೆ. ಅಲ್ಲಿ ಯಾವಾಗಲೂ ಕರೆಂಟ್‌ನ ತೊಂದರೆ. ಮಕ್ಕಳಿಗೆ ಏ.ಸಿ ಇಲ್ಲದೆ ಅಭ್ಯಾಸವಿಲ್ಲವೆಂದು ಹೆಂಡತಿಯ ಒತ್ತಾಯ ಮಣಿದು ಬಾಡಿಗೆ ಮನೆ ಮಾಡುತ್ತಾರೆ. ಸುಖದ ಸುಪ್ಪತ್ತಿಗೆಯಲ್ಲಿದ್ದ ಹೆಂಡತಿ ಮಕ್ಕಳು ಬಾವಾಕರ ಆರ್ಥಿಕ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಬೇಕಾಬಿಟ್ಟಿಯಾಗಿ ಹಣ ಖರ್ಚು ಮಾಡುತ್ತಿದ್ದ ಹೆಂಡತಿ ಮಕ್ಕಳ ದಿನನಿತ್ಯದ ಖರ್ಚಿಗೂ ಸಾಮಾನಿನ ಪಟ್ಟಿಗೂ ಕಡಿಮೆಯಿಲ್ಲ. ದುಬ್ಯಾಯಿಂದ ಬಂದು ಈಗ ಬಾಡಿಗೆ ಮನೆಯಲ್ಲಿರುವುದು ನಮ್ಮ ಪ್ರತಿಷ್ಠೆಗೆ ಸರಿ ಹೊಂದುವುದಿಲ್ಲವೆಂದು ದಿನನಿತ್ಯ ಮನೆಯಲ್ಲಿ ಹೆಂಡತಿಯ ಜಗಳ. ಎಲ್ಲ ಕಿರಿಕಿರಿ ಸಹಿಸಲು ಅಸಾಧ್ಯವಾದಾಗ ಪುನಃ ಕೆಲಸ ಹುಡುಕುತ್ತಾ ಸೌದಿ ಅರೇಬಿಯಾಗೆ ಹೊರಡುತ್ತಾರೆ.

ಆದಿಲ್ ತನ್ನ ಅಂಗಡಿಯ ವ್ಯಾಪಾರಕ್ಕಾಗಿ ಹಗಲು ರಾತ್ರಿಯೆನ್ನದೆ ದುಡಿದು ಉತ್ತಮ ಲಾಭಗಳಿಸುತ್ತಾನೆ. ಅನೇಕ ಹೊಸ ಹೊಸ ಶಾಖೆಗಳನ್ನು ಆರಂಭಿಸುತ್ತಾನೆ. ಮಾತ್ರವಲ್ಲ ಒಮಾನ್, ಕುವೈಟ್, ಸೌದಿ ಅರೇಬಿಯಾಗಳಲ್ಲೂ ಶಾಖೆಗಳನ್ನು ತೆರೆಯುತ್ತಾನೆ. ಹೊಸ ಶಾಖೆಗಳಿಗೆ ಜನರ ಅವಶ್ಯಕತೆಯಿರುವುದರಿಂದ ಕೆಲಸಕ್ಕೆ ಜನ ಬೇಕಾಗಿದ್ದಾರೆಂದು ಪತ್ರಿಕೆಯಲ್ಲಿ ಜಾಹೀರಾತು ನೀಡುತ್ತಾನೆ ಆಗಲೇ ಸೌದಿ ಅರೇಬಿಯಾ ತಲುಪಿದ್ದ ಬಾವಾಕರು ಈ ಜಾಹೀರಾತು ನೋಡಿ ಇಂಟರ್‌ವ್ಯೂಗೆ ಹೊರಡುತ್ತಾರೆ. ಇಂಟರ್‌ವ್ಯೂ ಮಾಡುತ್ತಾ ಅಲ್ಲಿಯ ಮ್ಯಾನೇಜರರು ಕಂಪೆನಿಯ ನೀತಿ ನಿಯಮಗಳ ಬಗ್ಗೆ ವಿವರಿಸುತ್ತಾ ಹೋಗುತ್ತಾರೆ. ಈ ಕಂಪೆನಿಯ ಕೇಂದ್ರ ಕಾರ್ಯಾಲಯ ದುಬ್ಯಾಯಲ್ಲಿದೆ. ಇದರ ಮಾಲಿಕರು ತುಂಬಾ ಒಳ್ಳೆಯವರು. ನಮ್ಮನ್ನೆಲ್ಲಾ ಸಹೋದರರಂತೆ ನೋಡಿಕೊಳ್ಳುತ್ತಾರೆ. ಕೆಲವೊಮ್ಮೆ ಅಗತ್ಯಕ್ಕನುಸಾರವಾಗಿ ಇಲ್ಲಿಗೆ ಸಂದರ್ಶಿಸುತ್ತಿರುತ್ತಾರೆ. ಸಮಯಕ್ಕೆ ಸರಿಯಾಗಿ ಸಂಬಳ ಮಾತ್ರವಲ್ಲ, ಅಗತ್ಯವಿರುವವರಿಗೆ ಬಡ್ಡಿ ರಹಿತ ಸಾಲ ಕೂಡಾ ನೀಡುತ್ತಾರೆ. ನಮಾಝ್‌ನ ಸಮಯವಾದ ತಕ್ಷಣ ಮಸೀದಿಗೆ ಹೋಗಿ ನಮಾಝ್ ನಿರ್ವಹಿಸುವುದರಲ್ಲಿ ಯಾವುದೇ ಅಭ್ಯಂತರವಿಲ್ಲ. ಈ ಸರಕು ಸಾಮಾನು ಅಮಾನತ್ ಆಗಿದೆ. ನೀವು ಯಾವ ರೀತಿ ವ್ಯವಹರಿಸುತ್ತೀರಿ ಎಂಬುದು ನಿಮಗೆ ಬಿಟ್ಟದ್ದು. ನಾನಂತೂ ಅಲ್ಲಾಹನ ಮೇಲೆ ಭರವಸೆ ಇಟ್ಟು ನಿಮ್ಮ ಕೈಯಲ್ಲಿ ಕೊಡುತ್ತಿದ್ದೇನೆ.

ಇಂಟರ್‌ವ್ಯೂನಿಂದ ಮರಳಿದ ನಂತರ ಬಾವಾಕರಿಗೆ ರಾತ್ರಿ ನಿದ್ದೆನೇ ಬರುತ್ತಿರಲಿಲ್ಲ. ಯೋಚನಾ ಮಗ್ನರಾಗುತ್ತಾರೆ. ಆ ಕಂಪೆನಿಯ ಮಾಲಿಕರು ಎಷ್ಟು ಒಳ್ಳೆಯವರು. ದುಡಿಯುವವರಿಗೆ ಎಷ್ಟು ಅನುಕೂಲವನ್ನು ನೀಡುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ನಾನು ಕೂಡಾ ಒಂದು ಕಂಪೆನಿಯ ಮಾಲಿಕನಾಗಿದ್ದೆ. ನನ್ನ ಅಧೀನದಲ್ಲಿ ಅದೆಷ್ಟೋ ಮಂದಿ ಕೆಲಸದಲ್ಲಿದ್ದರು. ನನಗೆ ಅಧಿಕಾರವಿತ್ತು. ಆದರೆ ನಾನು ಅದನ್ನು ದುರುಪಯೋಗಪಡಿಸಿದೆ. ಇಂದು ನಾನು ಬೇರೊಬ್ಬರ ಅಧೀನದಲ್ಲಿ ಕೆಲಸ ಮಾಡಬೇಕಾಗಿ ಬಂದಿದೆ. ಛೇ, ನನ್ನ ಅಹಂಕಾರವೇ ನನ್ನನ್ನು ಇಂದು ಈ ಸ್ಥಿತಿಗೆ ತಲುಪಿಸಿತು ಎಂದು ಯೋಚಿಸುತ್ತಾ ಅವರಿಗರಿವಿಲ್ಲದಂತೆ ಕಣ್ಣೀರು ಹರಿದು ಹೋಯಿತು. (ಮುಂದುವರಿಯುವುದು)

## ಯಾರ ತಪ್ಪು?

ನಾನು ರಾಜಮಾರ್ಗದಲ್ಲಿ ನಡೆದಾಗ
ಅವನು ಅಡ್ಡಕಾಲು ಹಾಕಿದರೆ
ಬಿದ್ದು ನೋವಾಗುತ್ತದೆ ನನಗೆ
ಅದು ನನ್ನ ತಪ್ಪಲ್ಲ.
ಅವನದು...!
ನಾನು ವಕ್ರ ಮಾರ್ಗದಲ್ಲಿ ನಡೆದಾಗ
ನಾನೇ ಎಡವಿದರೆ
ಬಿದ್ದು ನೋವಾಗುತ್ತದೆ ನನಗೆ
ಅದು ಯಾರ ತಪ್ಪಲ್ಲ
ನನ್ನದು...!

**ಅಬೂ ಅನೀಸ್, ಕಲ್ಲಾಪು**

## ಬುಶ್‌ರಿಂದ ಜನಾಂಗೀಯ ಭೇದ



ಪೋರ್ಟ್ ಆಫ್ ಪ್ರಿನ್ಸ್: ಭೂಕಂಪ ಕ್ಕೀಡಾದ ಹೈಟಿಯ ನಿರಾಶ್ರಿತ ಶಿಬಿರಗಳಿಗೆ ಭೇಟಿ ನೀಡಿದಾಗ ಅಮೇರಿಕದ ಮಾಜಿ ಅಧ್ಯಕ್ಷ ಜಾರ್ಜ್ ಬುಶ್‌ರ ಜನಾಂಗೀಯ ಭೇದದ ವರ್ತನೆ ಬಹಿರಂಗಗೊಂಡಿದೆ. ಹೈಟಿಯ ಜನರಿಗೆ ಹಸ್ತಲಾಘವ ಮಾಡಿ ಜೊತೆ ಯಲ್ಲಿದ್ದ ಇನ್ನೋರ್ವ ಮಾಜಿ ಅಧ್ಯಕ್ಷ ಕ್ಲಿಂಟನ್‌ರ ಕೋಟಿಗೆ ಒರೆಸಿದ್ದನ್ನು ವಿಡಿಯೋ ಸೆರೆ ಹಿಡಿದಿದೆ.

## ವಸತಿ ನಿರ್ಮಾಣ ಯೋಜನೆ ಕೈ ಬಿಡಲ್ಲ



ಜೆರುಸಲೇಮ್: ಪೂರ್ವ ಜೆರು ಸಲೇಮ್‌ನ ವಸತಿ ನಿರ್ಮಾಣವನ್ನು ಕಾರ್ಯಗತಗೊಳಿಸುವ ವಿಚಾರದಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ ವೆಂದು ಇಸ್ರೇಲ್ ಹೇಳಿದೆ. ಪಶ್ಚಿಮೇ ಶ್ಯನ್ ಶಾಂತಿಗೆ ಅಮೇರಿಕ ಮುಂದಿಟ್ಟಿ ರುವ 13 ಸೂಚನೆಗಳನ್ನು ಚರ್ಚಿಸುವ ಆರು ಸದಸ್ಯರ ಮಂತ್ರಿಗಳ ಮಟ್ಟದ ಸಭೆ ಸೇರುವ ಸ್ವಲ್ಪ ಮುಂಚೆ ಇಸ್ರೇಲ್ ಹೀಗೆ ಘೋಷಿಸಿದ್ದು, ಈ ಯೋಜನೆ ಯನ್ನು ಮುಂದುವರೆಸಲಿದ್ದು ಅದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ವೆಂದು ಪ್ರಧಾನ ಮಂತ್ರಿ ಕಾರ್ಯಾ ಲಯ ಪ್ರಕಟಿಸಿದೆ.

## ನೈತಿಕತೆಗಿಷ್ಟು ಸರಳ ವ್ಯಾಖ್ಯಾನ ಸಾಧುವೇ ನ್ಯಾಯಮೂರ್ತಿಗಳೇ?

(3ನೇ ಪುಟದಿಂದ)

ಅಂತಿಮವಾಗಿ ಒಂಟಿ ತಾಯಿ, ತಂದೆ ಮತ್ತು ಜಾರ ಸಂತಾನದ ಸೃಷ್ಟಿಗಷ್ಟೇ ಕಾರಣವಾದೀತು. ಒಂದು ರೀತಿಯಲ್ಲಿ ಮನೆಯೇ ವೃದ್ಧಾಶ್ರಮ ಆಗುವ ಎಲ್ಲ ಲಕ್ಷಣಗಳನ್ನೂ ಲಿವಿಂಗ್ ಟುಗೆದರ್ ಹೊಂದಿದೆ. ಇಂಥದ್ದನ್ನು ಆಧುನಿಕತೆ, ಅದೂ ಇದೂ ಎಂದು ಸಮರ್ಥಿಸುವುದು ಸರಿಯೇ?

ಒಳಿತು ಮತ್ತು ಕೆಡುಕಿನ ಅರಿವು ಒಂದು ಶಿಷ್ಟ ಸಮಾಜದ ರೂಪಣೆಗೆ ಹೀಗೆ ಅಗತ್ಯವೋ ನೈತಿಕ ಮತ್ತು ಅನೈತಿಕ ಎಂಬುದರ ಅರಿವು ಕೂಡ ಅಷ್ಟೇ ಅಗತ್ಯ. ಮೌಲ್ಯಗಳನ್ನೆಲ್ಲಾ ಹರಿದು ಹಾಕುವುದೇ ಆಧುನಿಕತೆ ಎನ್ನುವುದಾದರೆ ಅಂತಿಮವಾಗಿ ಅದು ಅನಾರೋಗ್ಯದ, ಅಶಿಸ್ತಿನ, ಸಂಬಂಧ ಹಳಸಿದ ಸಮಾಜದ ಸೃಷ್ಟಿಗಷ್ಟೇ ಕಾರಣವಾದೀತು. ಆದ್ದರಿಂದಲೇ ಧರ್ಮ ಮುಕ್ತಲೈಂಗಿಕತೆಯನ್ನು ಪ್ರಬಲವಾಗಿ ಖಂಡಿಸಿ, ಅದು ಕ್ಷೋಭೆಗೆ, ಮರಣಕ್ಕೆ ಕಾರಣವಾಗುತ್ತದೆ ಎಂದು ಹೇಳಿದ್ದು (ಪವಿತ್ರ ಕುರ್‌ಆನ್: 17:32) (ಹದೀಸ್). ನೀವೇ ಹೇಳಿ, ಲಿವಿಂಗ್ ಟುಗೆದರನ್ನು ಅಪರಾಧವಲ್ಲ ಎನ್ನುವ ಕೋರ್ಟು, ಅಂಥ ಎಷ್ಟು ಪ್ರಕರಣಗಳನ್ನು ಪರಿಶೀಲಿಸಿದೆ?

ಇಷ್ಟಕ್ಕೂ ಈ ಕಾನೂನು-ಕಟ್ಟಳೆ, ಸಂವಿಧಾನವನ್ನು ರೂಪಿಸಿದ್ದು ನಾವೇ ಅಲ್ಲವೇ? ಈಗಾಗಲೇ ಅದಕ್ಕೆ 90ರಷ್ಟು ತಿದ್ದುಪಡಿಗಳನ್ನು ಮಾಡಿಬಿಡಲಾಗಿದೆ. ಹೀಗಿರುವಾಗ ಅದೇ ಸಂವಿಧಾನದ ಉಲ್ಲೇಖಗಳನ್ನು ಮುಂದಿಟ್ಟುಕೊಂಡು ಕೂಡಿ ಬಾಳುವುದಕ್ಕೆ ಅನುಮತಿ ಕೊಡುವುದು ಎಷ್ಟು ಸರಿ? ಪಾಶ್ಚಾತ್ಯ ರಾಷ್ಟ್ರಗಳಲ್ಲಿವೆ ಎಂಬ ಏಕೈಕ ಕಾರಣಕ್ಕೆ ಕೂಡಿ ಬಾಳುವುದನ್ನು ನಾವು ಸಮರ್ಥಿಸುವುದಾದರೆ ಮುಂದೆ ಅದರ ಫಲಿತಾಂಶವನ್ನೂ ಒಪ್ಪಿಕೊಳ್ಳಬೇಕಾಗುತ್ತದೆ. ಮುಂದೆ ಯುವ ಸಮೂಹ ಮುಕ್ತ ಲೈಂಗಿಕತೆಯನ್ನು ಕೋರ್ಟು ತೀರ್ಪಿನ ಆಧಾರದಲ್ಲಿ ಸಮರ್ಥಿಸತೊಡಗಿದರೆ ಏನಾದೀತು? ಪರಿಣಾಮ ಯಾವ ಮಟ್ಟದಲ್ಲಿದ್ದೀತು? ಅದು ಬಿಡಿ, ನಿತ್ಯಾನಂದನಿಗೆ ಜೈ ಅನ್ನುವ ಪೀಳಿಗೆಯೊಂದನ್ನು ಸೃಷ್ಟಿಸಿದ ಕಳಂಕವನ್ನು ಯಾರು ಹೊತ್ತುಕೊಳ್ಳಬೇಕು?

ಆಲೋಚಿಸಿದ್ದೀರಾ ನ್ಯಾಯಮೂರ್ತಿಗಳೇ?

akkukkila@gmail.com

ಭೂಮಿಯಲ್ಲಿರುವುದನ್ನೆಲ್ಲ ನಿಮಗಾಗಿಯೇ ಸೃಷ್ಟಿಸಿದವನು ಆತನೇ. ಬಳಿಕ ಗಗನದೆಡೆ ಗಮನ ಹರಿಸಿ ಸಪ್ತ ಗಗನಗಳಿಗೆ ರೂಪುಕೊಟ್ಟನು. ಆತನು ಸಕಲ ವಿಷಯಗಳ ಜ್ಞಾನಿಯಾಗಿರುತ್ತಾನೆ.
(ಕುರ್‌ಆನ್ 2:29)

*Managing Partner*

RAJA BRICKS & TILE INDUSTRIES

*P.B. No. 34, Rajanagar, Sira Road,*
*Tumkur - 572 101. Karnataka, India*
*Ph: 0816 - 6531933/44/55, Fax: 0816 - 2211633*

## ಸ್ತನ ಕ್ಯಾನ್ಸರ್ ತಡೆಯಲು ಗರ್ಭಧರಿಸಿ



ಬಾರ್ಸಿಲೋನ: ಸ್ತನದ ಕ್ಯಾನ್ಸರ್‌ನಿಂದ ಸಾವೀಗೀಡಾಗುವುದನ್ನು ಒಂದು ಹಂತದವರೆಗೆ ಗರ್ಭಧಾರಣೆಯಿಂದ ತಡೆಯಬಹುದೆಂದು ಅಧ್ಯಯನದಿಂದ ತಿಳಿದು ಬಂದಿದೆ. ಬಾರ್ಸಿಲೋನದಲ್ಲಿ ನಡೆದಿರುವ ಸ್ತನ ಕ್ಯಾನ್ಸರ್‌ನ ಕುರಿತು ಯುರೋಪಿಯನ್ ಕಾನ್ಫರೆನ್ಸ್‌ನಲ್ಲಿ ಈ ಅಧ್ಯಯನದ ವರದಿಯನ್ನು ಸಲ್ಲಿಸಲಾಗಿದೆ. ಸ್ತನ ಕ್ಯಾನ್ಸರಿದ್ದ 1,417 ಗರ್ಭಿಣಿಯರು ಮತ್ತು ಗರ್ಭಿಣಿಗಳಲ್ಲದ 18,059 ಮಂದಿಯನ್ನು ಒಳಗೊಂಡು 1970ರಿಂದ 2009ರವರೆಗೆ ದ ರಾಯಲ್ ಕಾಲೇಜ್ ಆಫ್ ಒಬ್ಸೆಟಿಟ್ರಿಸನ್ ಆ್ಯಂಡ್ ಗೈನಾಕಾಲಾಜಿಸ್ಟ್‌ನ ಸಂಶೋಧಕರು ಈ ಅಧ್ಯಯನ ನಡೆಸಿದ್ದಾರೆ. ಗರ್ಭಧಾರಣೆಯ ಸಮಯದಲ್ಲಾಗುವ ಹಾರ್ಮೋನು ವ್ಯತ್ಯಾಸದಿಂದಾಗಿ ಈ ಕ್ಯಾನ್ಸರ್‌ನ ತೀವ್ರತೆಯನ್ನು ಕಡಿಮೆಗೊಳಿಸುತ್ತದೆಂಬ ಅಭಿಪ್ರಾಯವನ್ನು ಈ ಸಂಶೋಧನೆ ನಿರಾಕರಿಸುತ್ತದೆ.

## ಜೆರುಸಲೇಮಿನ ಫೆಲೆಸ್ತೀನಿಯರಿಗೆ ನೆರವು

ಟ್ರಿಪೋಲಿ: ಜೆರುಸಲೇಮಿನಲ್ಲಿ ವಾಸಿಸುವ ಫೆಲೆಸ್ತೀನಿಯರ ಬೆಂಬಲಕ್ಕಾಗಿ 50 ಕೋಟಿ ಡಾಲರ್ ಸಂಗ್ರಹಿಸುವುದಾಗಿ ಅರಬ್ ರಾಷ್ಟ್ರಗಳು ತೀರ್ಮಾನಿಸಿವೆ. ಟ್ರಿಪೋಲಿಯಲ್ಲಿ ನಡೆಯುತ್ತಿರುವ ಅರಬ್ ವಿದೇಶಾಂಗ ಸಚಿವರ ಸಭೆ ಯಲ್ಲಿ ಈ ತೀರ್ಮಾನವಾಗಿದ್ದು, ಈ ಕುರಿತು ಅರಬ್ ಲೀಗ್ ದೇಶಗಳ ಮುಖಂಡರ ಸಭೆ ಅಂತಿಮ ತೀರ್ಮಾನ ತಳೆಯಲಿದೆ. ಈ ಸಭೆಯಲ್ಲಿ ಇಸ್ರೇಲ್ ನಿಲುವುಗಳು ಪ್ರಮುಖ ಚರ್ಚಾ ವಿಷಯವಾಗಿದೆ.

## ಸಾರ್ವಜನಿಕ ಸಭೆ

ಮಂಗಳೂರು: "ಸಮಾಜದಲ್ಲಿರುವ ಕೆಡುಕುಗಳ ವಿರುದ್ಧ ಹೋರಾಡುವುದು ಪ್ರತಿಯೊಬ್ಬ ಮುಸ್ಲಿಮನ ಮೇಲೆ ಕಡ್ಡಾಯವಾಗಿದೆ. ಪ್ರವಾದಿಗಳು ಕೂಡಾ ಕೆಡುಕು ಮುಕ್ತ ಸಮಾಜಕ್ಕಾಗಿ ಪ್ರಯತ್ನಿಸಿ ಯಶಸ್ವಿ ಗಳಿಸಿದ್ದಾರೆ. ಯುವಕರು ಒಳಿತಿನ ವಕ್ತಾರರಾಗಬೇಕು" ಎಂದು ಅನಸ್ ಬಿನ್ ಮಾಲಿಕ್ ಮಸೀದಿಯ ಖತೀಬರಾದ ಮೌ| ಝಾಕಿರ್ ಟಿ.ಪಿ. ಹೇಳಿದರು. ಇವರು ಯೂತ್‌ವಿಂಗ್ ಜಮಾಅತೆ ಇಸ್ಲಾಮಿ ಹಿಂದ್‌ನ ಆಶ್ರಯದಲ್ಲಿ ಬೆಂಗ್ರೆ ಕಸ್ಬಾದಲ್ಲಿ ಆಯೋಜಿಸಲಾದ ಸಾರ್ವಜನಿಕ ಸಭೆ ಯನ್ನುದ್ದೇಶಿಸಿ ಮಾತನಾಡಿದರು.

ಇನ್ನೋರ್ವ ಮುಖ್ಯ ಅತಿಥಿ ಯೂತ್‌ವಿಂಗ್ ಜಿಲ್ಲಾ ಸಂಚಾಲಕ ಮುಹಮ್ಮದ್ ಕುಂಞಿಯವರು ಮಾತನಾಡಿ, "ಪ್ರತಿಯೊಬ್ಬರಿಗೂ ಮರಣವನ್ನು ಸವಿಯಲಿಕ್ಕಿದೆ. ಆದುದ ರಿಂದ ಮರಣಕ್ಕಿಂತ ಮುಂಚೆ ದೇವನ ಹಕ್ಕುಗಳನ್ನು ಈಡೇರಿಸುವುದರ ಜತೆಗೆ ಮನುಷ್ಯರ ಹಕ್ಕುಗಳನ್ನು ಹಾಗೂ ಪ್ರಕೃತಿಯೊಂದಿಗೆ ನಮಗಿರುವ ಹಕ್ಕು ಗಳನ್ನು ತೀರಿಸಬೇಕು. ಯುವಕರು ಬದಲಾಗಿ ಸಮಾಜದಲ್ಲಿ ಸಮಸ್ಯೆಗಳಿಗೆ ಪರಿಹಾರ ಸೂಚಿಸುವವರಾಗಬೇಕು" ಎಂದರು.

ಇಬ್ರಾಹೀಮ್ ಬೆಂಗ್ರೆ ಕಾರ್ಯ ಕ್ರಮ ನಿರೂಪಿಸಿದರು. ಶಿಹಾಬ್ ಬೆಂಗ್ರೆ ಕುರ್‌ಆನ್ ಪಠಿಸಿದರು.

## ಸೀರತ್ ಕಾರ್ಯಕ್ರಮ

ಸುಳ್ಯ: ಜಮಾಅತೆ ಇಸ್ಲಾಮಿ ಹಿಂದ್ ಸುಳ್ಯ ನಗರ ವರ್ತುಲದ ವತಿಯಿಂದ ಸಮುದಾಯ ಬಾಂಧವರಿಗಾಗಿ ಸೀರತ್ ಉಪನ್ಯಾಸ ಕಾರ್ಯಕ್ರಮ ಇಲ್ಲಿನ ಸಿ.ಎ. ಬ್ಯಾಂಕ್ ಸಭಾಂಗಣದಲ್ಲಿ ಏರ್ಪಡಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ಜ| ಯಹ್ಯಾ ತಂಙಳ್ ಮದನಿ, "ಪ್ರವಾದಿ ಪ್ರೇಮದ ನೈಜ ಬೇಡಿಕೆ ಅನುಸರಣೆಯಾಗಿದೆ. ಪ್ರವಾದಿಯವರ(ಸ) ಆಗಮನದ ಮುಖ್ಯ ಉದ್ದೇಶಗಳಲ್ಲಿ ಒಂದು ಚಾರಿತ್ರ್ಯವನ್ನು ಕಲಿಸುವುದಾಗಿದೆ. ಅದನ್ನು ಜೀವನದ ಎಲ್ಲಾ ರಂಗಗಳಲ್ಲಿ ಅಳವಡಿಸಿ ಅದನ್ನು ತಿಳಿಯದವರಿಗೆ ತಲುಪಿಸಿಕೊಡಬೇಕಾದ ಮಹತ್ತರವಾದ ಹೊಣೆಗಾರಿಕೆ ನಮ್ಮದಾಗಿದೆ" ಎಂದರು.

ಮತ್ತೋರ್ವ ಭಾಷಣಕಾರರಾದ ಜ| ಅಬ್ದುಸ್ಸಲಾಮ್ ಯು. ಮಾತನಾಡಿ, "ಪ್ರವಾದಿ ಮುಹಮ್ಮದ್‌ರು(ಸ) ಕೆಲವು ನಿರ್ದಿಷ್ಟ ಆರಾಧನೆಗಳನ್ನು ಮಾತ್ರ ಕಲಿಸಲು ಬಂದವರಲ್ಲ. ಬದಲಾಗಿ ವಿಶ್ವಾಸದಿಂದ ಹಿಡಿದು ಕರ್ಮರಂಗದ ವರೆಗೆ ಮನೆಯಿಂದ ಹಿಡಿದು ಸಂಸತ್ತಿನವರೆಗೆ ಜೀವನದ ಎಲ್ಲಾ ರಂಗಗಳಲ್ಲೂ ಮನುಷ್ಯನಿಗೆ ಅವರು ಮಾದರಿ ಜೀವನವನ್ನು ಪ್ರಾಯೋಗಿಕವಾಗಿ ಕಲಿಸಿಕೊಟ್ಟಿದ್ದಾರೆ" ಎಂದರು.

ಸ್ಥಾನೀಯ ಸಂಚಾಲಕ ಜ| ಉಸ್ಮಾನ್ ಸ್ವಾಗತಿಸಿದರು. ಇಬ್ರಾಹೀಮ್, ಆಸಿಫ್ ಮುಹಮ್ಮದ್ ಕಾರ್ಯಕ್ರಮ ನಿರೂಪಿಸಿದರು. ಅಶ್ರಫ್ ಧನ್ಯವಾದವಿತ್ತರು.

### ವರದಿ ಕಳುಹಿಸುವವರ ಗಮನಕ್ಕೆ

ನಿಮ್ಮ ವರದಿಯು ಸ್ಪಷ್ಟ ಅಕ್ಷರಗಳಲ್ಲಿ ಚುಟುಕಾಗಿರಲಿ. ಒಂದು ಪುಟವನ್ನು ಮೀರದಿರಲಿ. ವರದಿ ಕನ್ನಡ ಭಾಷೆಯಲ್ಲಿರಲಿ. ಬೇರೆ ಭಾಷೆಯಲ್ಲಿ ಕಳುಹಿಸಿದ ವರದಿಯನ್ನು ಪರಿಗಣಿಸಲಾಗುವುದಿಲ್ಲ. ಭಾವಚಿತ್ರ ಕಳುಹಿಸುವವರು ಸ್ಪಷ್ಟವಾಗಿರಲಿ. ಮೊಬೈಲ್‌ನಲ್ಲಿ ತೆಗೆದ ಭಾವಚಿತ್ರವನ್ನು ಕಳುಹಿಸುವುದು ಬೇಡ. - ಸಂ.

## ಸನ್ಮಾರ್ಗ 25 ವರ್ಷಗಳ ಹಿಂದೆ

❖ ಸಂಪುಟ: 8 ❖ ಸಂಚಿಕೆ: 03
❖ 1985 ಮೇ 05 - 11

### ಮುಸ್ಲಿಮ್ ವ್ಯಕ್ತಿ ನಿಯಮದಲ್ಲಿ ಹಸ್ತಕ್ಷೇಪ

ಮುಸ್ಲಿಮ್ ವ್ಯಕ್ತಿ ನಿಯಮಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಎರಡು ಮುಖ್ಯ ಘಟನೆಗಳು ಸಂಭವಿಸಿದವು. ಒಂದೆಡೆ ಕೇರಳದ ಮುಸ್ಲಿಮ್ ಲೀಗಿನ ಗುಲಾಮ್ ಮಹ್ಮೂದ್ ಬನಾತ್‌ವಾಲ ಲೋಕ ಸಭೆಯಲ್ಲಿ ಸಂವಿಧಾನದ 44ನೇ ಪರಿಚ್ಛೇದವನ್ನು ರದ್ದು ಮಾಡುವ ಮಾತನ್ನು ಹೇಳಿದ್ದರೆ ಮತ್ತೊಂದೆಡೆ ಕಲ್ಕತ್ತದ ಮುಸ್ಲಿಮ್ ಪರ್ಸನಲ್ ಲಾ ಬೋರ್ಡಿನ ಸಭೆಯಲ್ಲಿ ಮುಸ್ಲಿಮರು ತಮ್ಮ ಧಾರ್ಮಿಕ ಹಕ್ಕುಗಳನ್ನು ಬಿಟ್ಟು ಬಿಡಲು ಸರ್ವಥಾ ಸಿದ್ಧರಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಅದೇ ವೇಳೆ ಮುಸ್ಲಿಮರೂ ತಮ್ಮ ನಿತ್ಯ ಜೀವನದಲ್ಲಿ ವ್ಯಕ್ತಿ ನಿಯಮವನ್ನು ಗೌರವಿಸಬೇಕು ಮತ್ತು ಅದರ ಮೇಲೆ ಯಾರಿಗೂ ಹಸ್ತಕ್ಷೇಪ ಮಾಡಲು ಅವಕಾಶ ನೀಡಬಾರದು ಎಂದು ವಿನಂತಿಸಿ ಕೊಳ್ಳಲಾಗಿದೆ. ಕಾನೂನಿನ ದೃಷ್ಟಿಕೋನ ದಲ್ಲಿ ನಿರ್ದೇಶನಕ್ಕೆ ಕೇವಲ ಆದರ್ಶದ ಸ್ಥಾನ ವಿದೆ ಮತ್ತು ಆಡಳಿತದಲ್ಲಿ ಅದನ್ನು ಕಾರ್ಯ ಗತಗೊಳಿಸ ಬೇಕೆಂದೇನೂ ಇಲ್ಲ. ಸಂವಿಧಾನದ 44ನೇ ಪರಿಚ್ಛೇದದ ಇರುವಿಕೆ, ದೇಶದ ಸ್ಥಿತಿ ಜಟಿಲವಾದಾಗ ಲೆಲ್ಲಾ ಅಗತ್ಯ ಬೀಳುವ ಎಲ್ಲ ಆದರ್ಶ ಗಳ ಜೊತೆಗೆ ಸಮಾನ ಪೌರ ನಿಯಮ ವನ್ನು ಅಳವಡಿಸಲಾಗುವುದು ಎಂಬು ದನ್ನು ವಿಶದಪಡಿಸುತ್ತದೆ.

## ವಿದ್ಯಾರ್ಥಿ ಕಾರ್ಯಾಗಾರ

ಮಂಗಳೂರು: ಎಸ್.ಐ.ಒ. ನಗರ ಶಾಖೆಯ ವತಿಯಿಂದ ಎಸ್ಸೆಸ್ಸೆಲ್ಸಿ., ಪಿ.ಯು.ಸಿ. ಹಾಗೂ ಪದವೀಧರ ವಿದ್ಯಾರ್ಥಿ ಗಳಿಗಾಗಿ ಪರೀಕ್ಷೆ ಎದುರಿಸುವುದು ಹೇಗೆ? ಎಂಬ ವಿಷಯದಲ್ಲಿ ಪಿ.ಪಿ.ಟಿ. ಪ್ರೆಸೆಂಟೇ ಶನ್ ಮೂಲಕ ಮಾರ್ಚ್ 6ರಂದು ಹಿದಾಯತ್ ಸೆಂಟರ್‌ನಲ್ಲಿ ವಿದ್ಯಾರ್ಥಿ ಕಾರ್ಯಾಗಾರ ನಡೆಯಿತು.

ಕ್ಯಾರಿಯರ್ ಗೈಡೆನ್ಸ್ ಇನ್ ಫಾರ್ಮೇಶನ್ ಸೆಂಟರ್ ಮಂಗಳೂರು ಇದರ ನಿರ್ದೇಶಕ ಉಮರ್ ಯು.ಎಚ್. ತರಗತಿ ನಡೆಸಿ ಕೊಟ್ಟರು.

ಎಸ್.ಐ.ಒ. ಪಶ್ಚಿಮ ವಲಯ 'Study&Strive For Excelence' ಎಂಬ ಧ್ಯೇಯ ವಾಕ್ಯದಡಿಯಲ್ಲಿ ಹಮ್ಮಿಕೊಂಡಿದ್ದ 'Exam Campaign'ನ ಅಂಗವಾಗಿ ಈ ವಿದ್ಯಾರ್ಥಿ ಕಾರ್ಯಾಗಾರವನ್ನು ಹಮ್ಮಿ ಕೊಳ್ಳಲಾಯಿತು. ಕಾರ್ಯಕ್ರಮದ ಸಂಚಾಲಕ ಆಸಿಫ್ ಇಕ್ಬಾಲ್ ಬಜಾಲ್, ಎಸ್.ಐ.ಒ. ನಗರ ಶಾಖೆಯ ಅಧ್ಯಕ್ಷ ಜಾವೆದ್ ಅನಸ್ ಹಾಗೂ ವಿದ್ಯಾರ್ಥಿ ಝಕರಿಯಾ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿ ಫುಝೈಲ್ ಕುರ್‌ಆನ್ ಪಠಿಸಿದರು. ತೌಸೀಫ್ ಕೋಟೆಕಾರ್ ಕಾರ್ಯಕ್ರಮ ನಿರೂಪಿಸಿ ಧನ್ಯವಾದವಿತ್ತರು.

# ಶಿವಮೊಗ್ಗ-ಹಾಸನ: ಸಂತ್ರಸ್ತರಿಗೆ ನೆರವಾಗಿರಿ

**ಬೆಂಗಳೂರು:** ಇತ್ತೀಚೆಗೆ ಕನ್ನಡ ಪ್ರಭ ದೈನಿಕದಲ್ಲಿ ಪ್ರಕಟವಾದ ಲೇಖನದಿಂದ ಪ್ರಭಾವಿತಗೊಂಡು ಶಿವಮೊಗ್ಗ ಮತ್ತು ಹಾಸನಗಳಲ್ಲಿ ಸ್ಫೋಟಿಸಿದ ಕೋಮುಗಲಭೆಯು ಅಂತಿಮವಾಗಿ ಸಾವು, ಗಾಯ, ಕೋಟ್ಯಂತರ ರೂಪಾಯಿಗಳ ಆಸ್ತಿ-ಪಾಸ್ತಿ ನಷ್ಟ, ಅನೇಕಾರು ಯುವಕರ ಬಂಧನ, ಪೀಡಿತರ ಸಂಕಷ್ಟಗಳೊಂದಿಗೆ ಕೊನೆಯಾಗಿದೆ. ಜಮಾಅತೆ ಇಸ್ಲಾಮೀ ಹಿಂದ್ ಮತ್ತು ಅದರ ಅಂಗಸಂಸ್ಥೆಯಾದ ಹೆಚ್.ಆರ್.ಎಸ್.ನ ಕಾರ್ಯಕರ್ತರು ತಕ್ಷಣ ಕಾರ್ಯಪ್ರವೃತ್ತರಾಗಿ ಪೀಡಿತರ ಯೋಗಕ್ಷೇಮ, ಬಂಧಿತರ ಬಿಡುಗಡೆಗಾಗಿ ಸೂಕ್ತ ಕಾನೂನು ಕ್ರಮ, ತಪ್ಪಿತಸ್ಥರ ವಿರುದ್ಧ FIR ದಾಖಲಿಸಲು ಪೊಲೀಸರಲ್ಲಿ ಮನವಿ, ಗಾಯಗೊಂಡವರ ಚಿಕಿತ್ಸೆಗಾಗಿ ವ್ಯವಸ್ಥೆ, ಸಮಾಜದ ಮುಖಂಡರ ಜೊತೆ ಮಾತುಕತೆ ಮುಂತಾದುವುಗಳನ್ನು ನಡೆಸುವ ಮೂಲಕ ಒಂದು ಹಂತದವರೆಗೆ ಪೀಡಿತರ ಮನೋಸ್ಥೈರ್ಯವನ್ನು ಹಿಗ್ಗಿಸುವ ಕೆಲಸ ಮಾಡಿದೆ- ಮಾಡುತ್ತಿದೆ.

ಮೇಲ್ನೋಟಕ್ಕೆ ಎರಡ್ಮೂರು ದಿನಗಳ ಪತ್ರಿಕಾ ವರದಿಗಳಿಗೆ ಗಲಭೆಯ ಕಾವು ತಣಿದಿದೆಯಾದರೂ ಅಪಾರ ನಾಶ-ನಷ್ಟ ಉಂಟಾಗಿದೆ. ಸುಮಾರು 10 ಕೋಟಿಯಷ್ಟು ಆರ್ಥಿಕ ನಷ್ಟ ಸಂಭವಿಸಿದೆಯೆಂದು ಜಮಾಅತ್‌ನ ಸಮೀಕ್ಷೆಯಿಂದ ವ್ಯಕ್ತವಾಗಿದೆ. ಈ ಬಗ್ಗೆ ಸರಕಾರಕ್ಕೆ ಮನವರಿಕೆ ಮಾಡಿಸಲಾಗಿದ್ದು, ಆದರೂ ನಷ್ಟ ತುಂಬುವುದಕ್ಕೆ ಕೇವಲ ಅದೊಂದೇ ಖಂಡಿತ ಸಾಕಾಗದು.

ಆದ್ದರಿಂದ ಜಮಾಅತ್ ಮೂರು ಬಗೆಯ ಯೋಜನೆಯನ್ನು ಹಮ್ಮಿಕೊಂಡಿದೆ.

1. ಪರಿಹಾರ ಕಾರ್ಯ, 2. ಪುನರ್ವಸತಿ, 3. ಕಾನೂನು ಹೋರಾಟ. ಆದ್ದರಿಂದ ಈ ಎಲ್ಲ ಕಾರ್ಯಗಳ ಗುರಿ ಮುಟ್ಟುವಿಕೆಗಾಗಿ ಅಪಾರ ದುಡ್ಡಿನ ಅಗತ್ಯವಿದೆ. ನಿಮ್ಮ ಪ್ರತಿಯೊಂದು ಪೈಸೆಗೂ ಸಂತ್ರಸ್ತರ ಪ್ರತಿ ಹನಿ ಕಣ್ಣೀರನ್ನೂ ತೊಡೆದು ಹಾಕುವ ಸಾಮರ್ಥ್ಯವಿದೆ ಮತ್ತು ಅಲ್ಲಾಹನ ಸಂಪ್ರೀತಿಯೂ ನಿಮ್ಮ ಮೇಲಿರುತ್ತದೆ. ಹಣ ಕಳುಹಿಸುವವರು ಈ ಕೆಳಗಿನ ಬ್ಯಾಂಕ್ ಖಾತೆಗೆ ಜಮಾ ಮಾಡಿರಿ.

**A/c No. 01042200058175, Syndicate Bank, Mission Street, Mangalore- 575001**

ಬ್ಯಾಂಕಿನಲ್ಲಿ ಜಮೆ ಮಾಡಿದ ಬಳಿಕ ಕೆ.ಎಂ. ಅಶ್ರಫ್‌ರಿಗೆ ತಿಳಿಸಿರಿ. (ಮೊಬೈಲ್ ನಂಬ್ರ: 9448158452)

ಅಥವಾ **Humanitarion Relief Societyಯ ಹೆಸರಿನಲ್ಲಿ ಡ್ರಾಫ್ಟ್ ಮಾಡಿಸಿ, Hidayath Centre, Beebi Alabi Road, Mangalore- 575001** ಇಲ್ಲಿಗೆ ಕಳುಹಿಸಿರಿ ಅಥವಾ ಖುದ್ದು ಭೇಟಿಯಾಗಿಯೂ ನೀಡಬಹುದು.

## ಮೀಸಲಾತಿ ವಿರೋಧಿಗಳಿಗೆ... (ಮುಖಪುಟದಿಂದ)

ಆಯೋಗ ಮುಸ್ಲಿಮರಲ್ಲಿ ಹಿಂದುಳಿದ ವರ್ಗವನ್ನು ಗುರುತಿಸುವ ಕೆಲಸ ಮಾಡಿತ್ತು. ಈ ಆಧಾರದಲ್ಲಿ ಸಚಿವ ಸಂಪುಟ ಶೇ. 4 ಮೀಸಲಾತಿಯನ್ನು ಜಾರಿಗೊಳಿಸಿತ್ತು. ಇವೆಲ್ಲ ಅಂಶಗಳನ್ನು ಮೂಲೆ ಸೇರಿಸಿ ಮುಸ್ಲಿಮರನ್ನು ಮೀಸಲಾತಿಯಿಂದ ವಂಚಿಸಬೇಕೆಂದು ವಾದಿಸುವುದು ಷಡ್ಯಂತ್ರವಲ್ಲದೆ ಇನ್ನೇನು? ಈ ಅರ್ಥದಲ್ಲಿ ಸುಪ್ರೀಮ್ ಕೋರ್ಟು ತೀರ್ಪು ನೀಡುವಾಗ ನೀಡಿದ ವಿಶ್ಲೇಷಣೆಯನ್ನು ಉಲ್ಲೇಖಿಸುವುದು ಸೂಕ್ತವಾಗಿದೆ. ಹಿಂದುಳಿದವರು ಹಿಂದುಗಳೋ ಮುಸ್ಲಿಮರೋ ಎಂಬುದು ವಿಷಯವಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದು ಸಮಸ್ಯೆಯಾಗಿದೆ. ಹಿಂದುಳಿದವರು ಮುಸ್ಲಿಮರು ಎಂಬ ಕಾರಣದಿಂದ ಅವರ ಹಕ್ಕನ್ನು ನಿಷೇಧಿಸಲಾಗದು ಎಂಬುದೇ ಇಲ್ಲಿ ವಿಷಯವಾಗಿದೆ. ಸಾಮಾಜಿಕ ಮತ್ತು ವಿದ್ಯಾಭ್ಯಾಸದಲ್ಲಿ ಹಿಂದುಳಿದವರನ್ನು ನಿರ್ಣಯಿಸುವ ಕೆಲಸವೂ ನಡೆದಿದೆ ಎಂದು ಸುಪ್ರಿಮ್ ಕೋರ್ಟ್ ಹೇಳಿದೆ.

ಮುಸ್ಲಿಮ್ ಮೀಸಲಾತಿಯನ್ನು ವಿರೋಧಿಸುವವರು ಮಂಡಲ್ ಆಯೋಗದ ವರದಿಯನ್ನು ವಿ.ಪಿ. ಸಿಂಗ್ ಜಾರಿ ಮಾಡಿದಾಗ ವಿರೋಧಿಸಿದವರೇ ಆಗಿದ್ದಾರೆ. ಅವರು ಈ ದೇಶದ ಬೃಹತ್ ಜನ ಸಮುದಾಯವನ್ನು ತಲೆತಲಾಂತರಗಳಿಂದ ಅಸ್ಪೃಶ್ಯವಾಗಿ ನಡೆಸಿಕೊಂಡು ಬಂದವರಾಗಿದ್ದಾರೆ. ಇದು ತಮಗೆ ಸಾಧ್ಯವಾದದ್ದು ಸಮಾಜ, ಆಡಳಿತ, ಉದ್ಯೋಗ ಮತ್ತು ದೈವಿಕ ರಂಗದಲ್ಲಿ ನಿಯಂತ್ರಣವನ್ನು ತಮ್ಮ ಕೈಯಲ್ಲಿಟ್ಟುಕೊಂಡಿದ್ದರಿಂದ ಎಂಬಂಶವನ್ನು ಚೆನ್ನಾಗಿ ಅರಿತಿದ್ದಾರೆ. ಮುಸ್ಲಿಮರಲ್ಲಿ ದಲಿತ ಮತ್ತಿತರ ಹಿಂದುಳಿದ ಸಮುದಾಯದಿಂದ ಮತಾಂತರಗೊಂಡವರೇ ಹೆಚ್ಚಾಗಿದ್ದಾರೆ. ಆದುದರಿಂದ ಮೀಸಲಾತಿಯ ಆಧಾರದಲ್ಲಿ ಮುಸ್ಲಿಮರಿಗೆ ಉನ್ನತ ಹುದ್ದೆಗಳು ದೊರಕಿದರೆ ಅವರ ಕೈಕೆಳಗೆ ಕೆಲಸ ಮಾಡಬೇಕಾಗುತ್ತದೆ. ಮಾತ್ರವಲ್ಲ, ತಮ್ಮ ಮೇಲ್ವರ್ಗವೇ ಮೇಲು ಎಂಬ ಸವರ್ಣೀಯ ವಾದವು ಮೂಲೆ ಗುಂಪಾಗಬಹುದು ಎಂಬಿತ್ಯಾದಿ ಹೆದರಿಕೆಗಳು ಮುಸ್ಲಿಮ್ ಮೀಸಲಾತಿಯನ್ನು ವಿರೋಧಿಸಲು ಕಾರಣವಾಗಬಹುದು. ಮೀಸಲಾತಿಯನ್ನು ಬೆಂಬಲಿಸಿ ವಾದಿಸಿದ ಪ್ರಮುಖ ನ್ಯಾಯವಾದಿ ಕೆ. ಪರಾಶರನ್ ನ್ಯಾಯಾಲಯಕ್ಕೆ ಕೂದಲು ಕತ್ತರಿಸುವವರು, ಧೋಬಿಗಳು, ದಫನ ಭೂಮಿಯಲ್ಲಿ ಕೆಲಸ ಮಾಡುವವರಿಗೆ ಹಿಂದೂ ಸಮುದಾಯದಲ್ಲಿ ಮೀಸಲಾತಿ ಅನುಕೂಲವಿದೆ. ಆದರೆ ಅದೇ ಕೆಲಸ ಮಾಡುವ ಮುಸ್ಲಿಮರಿಗೆ ಮೀಸಲಾತಿ ನಿಷೇಧಿಸಲಾಗಿದೆ ಎಂದು ಸುಪ್ರಿಮ್ ಕೋರ್ಟ್‌ನ ಗಮನಕ್ಕೆ ತಂದಿದ್ದರು.

ಹಿಂದೂಗಳಲ್ಲಿ ಸೇರಿರುವ ಹಿಂದುಳಿದ ವರ್ಗಕ್ಕೆ ಈಗಾಗಲೇ ಮೀಸಲಾತಿಯಿದ್ದರೂ ಅವರು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಇನ್ನೂ ಉನ್ನತ ಮಟ್ಟಕ್ಕೇರಿಲ್ಲ. ಅಂದರೆ ಸವರ್ಣೀಯ ಹಿಡಿತ ಇದರಲ್ಲಿ ಪ್ರಮುಖ ಪಾತ್ರ ವಹಿಸಿರಬಹುದು. ಆದರೆ ಮುಸ್ಲಿಮರಲ್ಲಿ ಹಿಂದುಳಿದ ವರ್ಗಕ್ಕೆ ಇಂತಹ ಯಾವ ಅಡ್ಡಿಯೂ ಇಲ್ಲ. ಹೀಗಾಗಿ ಸವರ್ಣೀಯ ಲಾಬಿ ಮುಸ್ಲಿಮ್ ಮೀಸಲಾತಿ ಸಿಕ್ಕುವುದಕ್ಕೆ ಹೆದರುತ್ತಿದೆ ಎನ್ನಬಹುದು. ಆಂಧ್ರ ಸರಕಾರವು ಮುಸ್ಲಿಮರಿಗೆ ಮೀಸಲಾತಿ ಜಾರಿಗೊಳಿಸಲು ಬೇಕಾದ ಎಲ್ಲ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿರುವುದು ಶ್ಲಾಘನೀಯ. ಈಗಾಗಲೇ ಸಾಚಾರ್ ಕಮಿಟಿಯು ಮುಸ್ಲಿಮರಿಗೆ ಮೀಸಲಾತಿ ಅನಿವಾರ್ಯವೆಂದು ಗುರುತಿಸಿದೆ. ರಂಗನಾಥ ಮಿಶ್ರಾ ಆಯೋಗವೂ ಮುಸ್ಲಿಮರಿಗೆ ಶೇ 10 ಮೀಸಲಾತಿ ನೀಡುವುದು ಅನಿವಾರ್ಯವಾಗಿದೆಯೆಂದಿದೆ. ಒಟ್ಟಿನಲ್ಲಿ ಇವೆಲ್ಲ ಬಲಪಂಥೀಯರಿಗೆ ಇಷ್ಟವಾಗುವ ವಿಚಾರವಲ್ಲ. ಮುಸ್ಲಿಮರಿಗೆ ಮೀಸಲಾತಿ ದಕ್ಕಬಾರದೆಂದು ಅವರು ಯಾವುದೇ ತಿಪ್ಪರಲಾಗ ವನ್ನೂ ಹಾಕಬಹುದು. ಈ ಎಲ್ಲ ಷಡ್ಯಂತ್ರಗಳನ್ನು ಸುಪ್ರೀಮ್ ಕೋರ್ಟ್ ತನ್ನ ತೀರ್ಪಿನಲ್ಲಿ ಮೂಲೆಗುಂಪಾಗಿಸಿರುವುದು ಮುಸ್ಲಿಮರಿಗೆ ಮಾತ್ರವಲ್ಲ, ಹಿಂದುಳಿದ ಬಡಪಾಯಿಗಳಿಗೆ ತಂದು ಕೊಟ್ಟ ಐತಿಹಾಸಿಕ ವಿಜಯವಾಗಿ ಪರಿಗಣಿಸಬಹುದಾಗಿದೆ.

**ನಿಧನ**

**ಬಜೆಗೋಳಿ:** ಇಲ್ಲಿನ ನಿವಾಸಿ ಯು.ಎಮ್. ಹಮೀದ್ (66)ರವರು ಮಾರ್ಚ್ 23ರಂದು ನಿಧನರಾದರು. ಅವರು ಪತ್ನಿ, ಐವರು ಪುತ್ರರು, ಮೂವರು ಪುತ್ರಿಯರನ್ನೂ ಅಪಾರ ಬಂಧು-ಮಿತ್ರಾದಿಗಳನ್ನೂ ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್‌ಫಿರತ್ ಮತ್ತು ಮರ್‌ಹಮತ್ ನೀಡಿ ಅನುಗ್ರಹಿಸಲಿ.






To.________________________________

________________________________

________________________________

________________________________

SANMARGA KANNADA WEEKLY
Post Box No. 16, Hidayath Centre, Mangalore - 575 001 ☎: 2422786
2010 ಎಪ್ರಿಲ್ 04 – 10 / 1431 ರ. ಆಖರ್ 17 – 23

BIS 916 ಹಾಲ್‌ಮಾರ್ಕ್ ಚಿನ್ನಕ್ಕೆ ಮಂಗಳೂರಿಗಿಂತ ಅತ್ಯಂತ ಕಡಿಮೆ ದರ: ಕಾಸರಗೋಡು ಸುಲ್ತಾನ್‌ನಲ್ಲಿ


ಮದುವೆಯ ಖರೀದಿಗೆ ವಿಶೇಷ ರಿಯಾಯಿತಿ.
KASARAGOD. Ph: 0499-220064, 223746

'Registered' R.No. KA/SK/MNG/129/2009-11 Licenced to post without pre payment L No. SK/MNG/WPP-10/09-11 Posted at R.M.S. Mangalore on 30-03-2010 (Tuesday) & 01-04-2010 (Thursday)

## ಸನ್ಮಾರ್ಗ-ಗೋಲ್ಡ್‌ಪ್ಯಾಲೇಸ್ ಕಥಾ ಸ್ಪರ್ಧೆ

### ಬಹುಮಾನ ವಿತರಣೆ



**ಮಂಗಳೂರು:** ಸಮಾಜದ ಸುಧಾರಣೆಯಲ್ಲಿ ಸಾಹಿತಿಗಳು ಪ್ರಮುಖ ದೇಣಿಗೆ ನೀಡಬಹುದು. ಸಮಾಜ ವಿರೋಧಿ ಶಕ್ತಿಗಳ ವಿರುದ್ಧ ಜಾಗೃತಿ ಮೂಡಿಸುವ ಕೆಲಸ ಸಾಹಿತ್ಯದಿಂದ ಸಾಧ್ಯವಿದೆ. ತಮ್ಮ ಬರಹಗಳನ್ನು ಸಮಾಜದ ಒಳಿತಿಗಾಗಿ ದುಡಿಸಿಕೊಳ್ಳಬೇಕಾಗಿದೆ. ಉದಯೋನ್ಮುಖ ಕತೆಗಾರರನ್ನು ಪ್ರೋತ್ಸಾಹಿಸುವ ಸನ್ಮಾರ್ಗ ಮತ್ತು ಗೋಲ್ಡ್ ಪ್ಯಾಲೇಸ್‌ನ ಕ್ರಮ ಶ್ಲಾಘನೀಯವೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು ಹೇಳಿದರು. ಅವರು ಸನ್ಮಾರ್ಗ ಮತ್ತು ಗೋಲ್ಡ್ ಪ್ಯಾಲೇಸ್ ಆಯೋಜಿಸಿದ ಕಥಾಸ್ಪರ್ಧೆ 2009ರ ಬಹುಮಾನ ವಿತರಣಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ಒಳಿತೋನ್ಮುಖ ಕಥೆಗಾರರಿಂದ ಸಮಾಜದಲ್ಲಿ ಕೆಡುಕು ಮುಕ್ತ ವಾತಾವರಣ ನಿರ್ಮಾಣವಾಗಬಹುದು. ಸಮಾಜದಲ್ಲಿ ಕೆಡುಕು ಇದೆಯೆಂದು ಆ ಕೆಡುಕಿಗೆ ತನ್ನದೊಂದಿಷ್ಟನ್ನು ಸೇರಿಸುವ ಕೆಲಸ ಸಾಹಿತಿ ಮಾಡಬಾರದು. ಸನ್ಮಾರ್ಗ ಕಥಾಸ್ಪರ್ಧೆಯ ನಿಯಮವಾಗಿ ನೈತಿಕ ಮೇರೆಯನ್ನು ಆಯ್ಕೆ ಮಾಡಿಕೊಂಡಿರುವುದರ ಉದ್ದೇಶ ಇದೇ ಆಗಿದೆಯೆಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸನ್ಮಾರ್ಗ ಸಂಪಾದಕರಾದ ಎ.ಕೆ. ಕುಕ್ಕಿಲ ಹೇಳಿದರು. ಪ್ರಾಸ್ತಾವಿಕವಾಗಿ ಮಾತಾಡಿದ ಅರಫಾ ಮಂಚಿ ಸನ್ಮಾರ್ಗದ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಸಮಾರಂಭದಲ್ಲಿ ಗೋಲ್ಡ್‌ಪ್ಯಾಲೇಸ್‌ನ ಮಾಲಕರಾದ ಅಬ್ದುಲ್ ಕಾದರ್ ಮತ್ತು ಸನ್ಮಾರ್ಗ ಪಬ್ಲಿಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಕೆ.ಎಂ. ಶರೀಫ್ ಉಪಸ್ಥಿತರಿದ್ದರು. ಆರಂಭದಲ್ಲಿ ಮಾಸ್ಟರ್ ಮುಹಮ್ಮದ್ ಅಜ್ಮಲ್ ಕುರ್‌ಆನ್ ಪಠಿಸಿದರು. ಸಲೀಮ್ ಬೋಳಂಗಡಿ ಕಾರ್ಯಕ್ರಮ ನಿರೂಪಿಸಿ ಧನ್ಯವಾದವಿತ್ತರು.

## ಪ್ರಧಾನಿಯವರೇ, ವೇದಿಕೆಯಿಂದ ಘರ್ಜಿಸುವುದೆಷ್ಟು...

(ಮುಖಪುಟದಿಂದ)

ಬೆಂದುಹೋದ ಪತಿ ಮತ್ತು ಸಂಬಂಧಿಕರ ಕಣ್ಣೀರ ಸತ್ಯದೊಂದಿಗೆ ಝುಕಿಯಾ ಜಾಫ್ರಿ ಇಲ್ಲಿಗೆ ತಲುಪಲು ಬಹುದೂರದಿಂದ ನಡೆದು ಬಂದಿದ್ದಾರೆ. ಮೊದಲು ಅಹ್ಮದಾಬಾದ್ ಪೊಲೀಸರ ಬಳಿಗೆ ಹೋದರು. ಲಿಖಿತ ದೂರು ನೀಡಿದರು. ಆದರೆ ಸ್ವೀಕರಿಸಲು ಸಾಧ್ಯವಿಲ್ಲವೆಂದು ಅವರು ನೇರವಾಗಿ ತಿಳಿಸಿದರು. ತರುವಾಯ ಟೀಸ್ಟಾ ಸೆಟಲ್ವಾಡ್‌ರ ಜತೆ ಗುಜರಾತ್ ಹೈಕೋರ್ಟಿಗೆ ಹೋದರು. ಅಲ್ಲಿಂದಲೂ ಆ ವಿಧವೆಯನ್ನು ಹೊರದಬ್ಬಲಾಯಿತು. ಕೊನೆಗೆ ಸರ್ವೋಚ್ಚ ನ್ಯಾಯಾಲಯವು ಅವರ ಅಹವಾಲನ್ನು ಆಲಿಸಲು ಸಿದ್ಧವಾಯಿತು.

2. ಬಾಬರಿ ಮಸೀದಿ ಧ್ವಂಸ: 1992 ಡಿಸೆಂಬರ್‌ನಲ್ಲಿ ನಡೆದ ಘಟನೆ. ದುರಂತ ನಡೆದು ಸುದೀರ್ಘ 18 ವರ್ಷಗಳಾದುವು. ಕಣ್ಣ ಮುಂದೆಯೇ ನಡೆದ ಕಾನೂನು ಉಲ್ಲಂಘನೆಯ ಬಗ್ಗೆ ಯಾವೊಬ್ಬ ಪೊಲೀಸನೂ ಸಾಕ್ಷ್ಯ ಹೇಳಲು ಮುಂದೆ ಬರಲಿಲ್ಲವೆಂಬುದು ಗಮನಾರ್ಹ. ಹಿರಿಯ ಮಹಿಳಾ ಪೊಲೀಸ್ ಅಧಿಕಾರಿ ಅಂಜು ಗುಪ್ತ ಮಾತ್ರ ಅದಕ್ಕೆ ಅಪವಾದವಾಗಿದ್ದರು. ಈಗ ಅವರು 'ರಾ'ದ ಸಹಾಯಕ ಇನ್ಸ್‌ಪೆಕ್ಟರ್ ಆಗಿದ್ದಾರೆ. ಅಡ್ವಾಣಿಯವರ ಭದ್ರತಾ ಅಧಿಕಾರಿಯೆಂಬ ನೆಲೆಯಲ್ಲಿ ಈ ಹಿಂದೆಯೇ ಲಿಬರ್ಹಾನ್ ಆಯೋಗದ ಮುಂದೆ ಹೇಳಿದ್ದ ಸಾಕ್ಷ್ಯವನ್ನು ಈಗ ಅವರು ನ್ಯಾಯಾಲಯದ ಮುಂದೆಯೂ ಹೇಳಿದ್ದಾರೆ. ಆದರೆ ಸಹಪಾಠಿಯಾಗಿದ್ದ ಶಾಫಿ ಹಸನ್ ರಿಝ್ವಿಯನ್ನು ವಿವಾಹವಾಗಿ ಇಸ್ಲಾಮ್ ಸ್ವೀಕರಿಸಿರುವುದರಿಂದ ಅಂಜು ಗುಪ್ತ, ಅಡ್ವಾಣಿಯವರ ಬೆನ್ನು ಹಿಡಿದಿರುವರೆಂಬ ಕಥೆಯನ್ನು ಈಗ ಸವರ್ಣೀಯ ಕೋಮು ಪತ್ರಿಕೆಗಳು ಪ್ರಚಾರ ಮಾಡುತ್ತಿವೆ. ಹೆಣ್ಣಿನ ದಿಟ್ಟತನವನ್ನು ಹೊಗಳದಿದ್ದರೂ ಈ ರೀತಿ ಹೀನೈಸುವುದೇಕೆ?

ಅಯೋಧ್ಯೆ–ಗುಜರಾತ್ ಫ್ಲಾಷ್ ಬ್ಯಾಕ್‌ಗಳ ಮಧ್ಯೆ 18 ವರ್ಷಗಳ ಅಂತರವಿದೆ. ನ್ಯಾಯದ ಮುಂದೆ ಎಲ್ಲರೂ ಸಮಾನರೆಂಬುದು ನೀತಿ. ಆದರೆ ಅದರ ಜಾರಿ ತದ್ವಿರುದ್ಧವಾಗಿರುವುದು ಹೊಸ ಅನುಭವವಲ್ಲ. ಕೆಲವರ ವಿಷಯದಲ್ಲಿ ನ್ಯಾಯ ಜಾರಿಗೊಳಿಸುವ ಆವೇಶ, ಇತರ ಕೆಲವರ ವಿಷಯದಲ್ಲಿ ಸಂಪೂರ್ಣ ನಿರ್ಲಕ್ಷ್ಯ. ಬಿಜೆಪಿಯ ಈರ್ವರು ಉನ್ನತ ನಾಯಕರಾದ ಎಲ್.ಕೆ. ಅಡ್ವಾಣಿ ಮತ್ತು ಮುಖ್ಯಮಂತ್ರಿ ನರೇಂದ್ರ ಮೋದಿಯವರ ಬಗ್ಗೆ ಕಾನೂನಿಗೆ ಏನೋ ನಿರ್ಲಕ್ಷ್ಯ ಭಾವ; ಅದೇ ವೇಳೆ ಕ್ಷುಲ್ಲಕ ಪ್ರಕರಣಗಳಲ್ಲಿಯೂ ಜನರನ್ನು ಬಂಧಿಸಿ ಕೂಡಲೇ ಜೈಲು ಸೇರಿಸಲು ಕೆಳ ನ್ಯಾಯಾಲಯಗಳ ಸ್ಪರ್ಧೆ!

ಸಾಮಾನ್ಯ ರೀತಿಯ ಎಲ್ಲ ಕ್ರಿಮಿನಲ್ ಅಪರಾಧಗಳನ್ನು ಅಡ್ವಾಣಿ ಮತ್ತು ಮೋದಿಯ ಮೇಲೆ ಪ್ರಥಮ ದೃಷ್ಟಿಯಲ್ಲಿಯೇ ದಾವೆ ಹೂಡಬಹುದಾದ ಅನೇಕ ಅವಕಾಶಗಳಿವೆ. ಈ ಹಿಂದೆ ಸಿಬಿಐ ನಡೆಸಿದ ತನಿಖೆಯಲ್ಲಿ ಅಡ್ವಾಣಿಯವರ ಮೇಲಿನ ಆರೋಪವು ಕೇವಲ ಊಹೆಯೆಂದು ಹೇಳಿತ್ತು. ಆದ್ದರಿಂದ ಕ್ರಿಮಿನಲ್ ಗೂಢಾಲೋಚನೆಯೆಂಬ ಪ್ರಮುಖ ಆರೋಪದಿಂದ ಅವರನ್ನು ಮುಕ್ತಗೊಳಿಸಲಾಗಿತ್ತು. ಡಿಸೆಂಬರ್ 6ರಂದು ಬಾಬರಿ ಮಸೀದಿ ಪರಿಸರಕ್ಕೆ ಆಗಮಿಸುವುದಕ್ಕಿಂತ ಮುಂಚೆ ನಾಯಕರು ಗುಪ್ತಸಭೆ ನಡೆಸಿದ ವಿಚಾರವನ್ನು ಅಂಜು ಗುಪ್ತ ಹಾಗೂ ಇತರರು ಲಿಬರ್ಹಾನ್ ಆಯೋಗದ ಮುಂದೆ ಸಾಕ್ಷ್ಯ ನೀಡಿದ್ದರು. ವಿನಯ ಕಟಿಯಾರ್ ಮತ್ತು ಆರೆಸ್ಸೆಸ್ ನಾಯಕರು ಹಾಗೂ ಇತರರು ಆ ಸಭೆಯಲ್ಲಿ ಭಾಗವಹಿಸಿದ ದಾಖಲೆಗಳಿವೆ. ಕ್ರಿಮಿನಲ್ ಗೂಢಾಲೋಚನೆಯ ಅನೇಕ ಸಾಕ್ಷ್ಯಾಧಾರಗಳನ್ನು ಎತ್ತಿ ತೋರಿಸಿಯೂ ಕ್ರಮ ಕೈಗೊಂಡಿಲ್ಲ, ಹೀಗಿರುತ್ತಾ ನ್ಯಾಯ ಪ್ರಜ್ಞೆ ಮರುಸ್ಥಾಪನೆಯಾದೀತೆಂದು ನಂಬುವುದಾದರೂ ಹೇಗೆ?

ಕ್ರಿಮಿನಲ್ ಅಪರಾಧಗಳ ಎಲ್ಲ ಅಂಶಗಳನ್ನು ಮೋದಿಯವರ ಮೇಲೆಯೂ ಹೊರಿಸಬಹುದು. ಹಿಂದುಗಳ ರೋಷವನ್ನು ಅಣಗಿಸಲು ಪ್ರಯತ್ನಿಸದೆ ಮೌನವಾಗಿರಬೇಕೆಂದು ಅಧಿಕಾರಿಗಳಿಗೆ ಅವರು ಸೂಚಿಸಿದ ದಾಖಲೆಯಿದೆ. 2002 ಫೆಬ್ರವರಿ 28ರಂದು ಇಹ್ಸಾನ್ ಜಾಫ್ರಿ ಸೇರಿದಂತೆ 69 ಮಂದಿಯ ಸಾಮೂಹಿಕ ಹತ್ಯೆ ನಡೆದಿತ್ತು. ಆ ರಾತ್ರಿಯಲ್ಲಿ ಹಲವು ಬಾರಿ ಮೊರೆಯಿಟ್ಟರೂ ಯಾವೊಬ್ಬ ಪೊಲೀಸ್ ಅಧಿಕಾರಿಯೂ ಮಾಜಿ ಸಾಂಸದಿಕನ ನೆರವಿಗೆ ಬರಲಿಲ್ಲ. ಕೋಮು ದ್ವೇಷವನ್ನು ಉದ್ರೇಕಿಸಲಿಕ್ಕಾಗಿ ಸ್ವತಃ ಈ ಮೋದಿಯವರೇ ಗೋಧ್ರಾ ದುರಂತಕ್ಕೆ ಬಲಿಯಾದ ಮಂದಿಯ ಮೃತದೇಹಗಳನ್ನು ಅಹ್ಮದಾಬಾದ್‌ಗೆ ಸಾಗಿಸಿದ್ದರು. ಮಾತ್ರವಲ್ಲದೆ, ಗಲಭೆಕೋರರನ್ನು ದಮನಿಸಲು ಪ್ರಯತ್ನಿಸಿದ ದಿಟ್ಟ ಪೊಲೀಸ್ ಅಧಿಕಾರಿಗಳನ್ನು ತಕ್ಷಣ ವರ್ಗಾಯಿಸಿದರು. ಇವುಗಳಲ್ಲಿ ಪ್ರತಿಯೊಂದು ಅಪರಾಧಕ್ಕೂ ಹಲವು ವರ್ಷ ಜೈಲು ಶಿಕ್ಷೆ ಅನುಭವಿಸಬಹುದಾಗಿದೆ. ಕರ್ಕರೆಯನ್ನು ಕೊಂದವರು ಯಾರೆಂಬುದು ಇನ್ನೂ ನಿಗೂಢವಾಗಿರುವಾಗ, ಇನ್ನು ಜನಸಾಮಾನ್ಯರಿಗೆ ನ್ಯಾಯ ಸಿಗಬಹುದೇ?

1993ರಿಂದ 2009ರ ತನಕ ಭಾರತದ ವಿವಿದೆಡೆಗಳಲ್ಲಿ ನಡೆದ ಎನ್‌ಕೌಂಟರ್‌ಗಳಲ್ಲಿ ಒಟ್ಟು 1224 ಮಂದಿ ಹತರಾಗಿದ್ದಾರೆ. ದೆಹಲಿ ಸೇರಿದಂತೆ ಅನೇಕ ಎನ್‌ಕೌಂಟರ್ ಹತ್ಯೆಗಳ ಒಂದು ನಿರ್ದಿಷ್ಟ ಧರ್ಮೀಯರ ಸಂಖ್ಯೆಯೇ ಅಧಿಕವಾಗಿರಲು ಕಾರಣವೇನು?

ಬಡವರ ಮನೆಬಾಗಿಲಿಗೆ ನ್ಯಾಯ ತಲುಪುವುದೆಂಬ ಮನಮೋಹನ ಸಿಂಗ್‌ರ ಮಾತನ್ನು ನಾವು ನಂಬೋಣ. ಆದರೆ ಪ್ರೇಮ್ ಪಾಲ್ ಎಂಬ ದೆಹಲಿ ಪೌರನೋರ್ವನು ನಮ್ಮ ನ್ಯಾಯಪೀಠಗಳಿಗೆ ಒಂದು ಮರು ಪ್ರಶ್ನೆ ಹಾಕುತ್ತಿದ್ದಾನೆ: 'ನನ್ನ ಜೀವನದ 15 ವರ್ಷಗಳನ್ನು ನೀವು ಯಾಕೆ ಕಸಿದುಕೊಂಡಿರಿ? ಈ ವ್ಯಕ್ತಿಯ ಮೇಲೆ ಪೊಲೀಸರು 1991ರಿಂದ 2007 ಅವಧಿಯಲ್ಲಿ 18 ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದರು. 7 ವರ್ಷ ಆತನನ್ನು ಜೈಲಿನಲ್ಲಿರಿಸಿದ್ದರು.

ಕಾನೂನು ಹೋರಾಟದ ಕೊನೆಯಲ್ಲಿ ದೆಹಲಿ ನ್ಯಾಯಾಲಯವು ಪ್ರೇಮ್‌ಲಾಲ್‌ನನ್ನು ರಕ್ಷಿಸಿತು. ಆತನಿಗೆ 6ಲಕ್ಷ ರೂ. ಪರಿಹಾರ ಧನ ನೀಡುವಂತೆ ಆರೋಪಿ ಪೊಲೀಸರಿಗೆ ಆದೇಶಿಸಿತು. ಪ್ರೇಮ್‌ಲಾಲ್ ಕೇವಲ ಸಂಕೇತ. 6 ಲಕ್ಷ ರೂ. ದೊರೆತಿರುವುದರಿಂದ ಮನಮೋಹನ ಸಿಂಗ್ ಹೇಳಿದ ಬಡ ಜನರಲ್ಲಿ ಈ ಆಸಾಮಿಯನ್ನು ಸೇರಿಸಬೇಕಾಗಿಲ್ಲವಷ್ಟೆ.

ಶಿಹಾಬ್ ರೆಸಿಡೆನ್ಸಿಯಲ್ ಸ್ಕೂಲ್ ಶಿಹಾಬ್ ಇಂಗ್ಲಿಷ್ ಮೀಡಿಯಂ ಸ್ಕೂಲ್
ಪ್ರೈಮರಿ, ಅಪ್ಪರ್ ಪ್ರೈಮರಿ ಮತ್ತು ಪ್ರೌಢ ಶಾಲೆಯ ಮಕ್ಕಳ ಧಾರ್ಮಿಕ ಹಾಗೂ ಲೌಕಿಕ ವಿದ್ಯಾ ಕೇಂದ್ರ

ಪ್ರತೀ ವರ್ಷ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯುವ ಅತ್ಯುತ್ತಮ ಶಾಲೆ.
ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದೆ.
ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣ.
ಎಸ್. ಎಸ್. ಎಲ್.ಸಿ. ವಿದ್ಯಾಭ್ಯಾಸದ ಜೊತೆಗೆ ಕಂಪ್ಯೂಟರ್ ತರಬೇತಿ.
ಅರ್ಹತೆಗನುಸಾರ ವಿದ್ಯಾರ್ಥಿವೇತನ.
ಮಂಗಳೂರಿನಿಂದ 32 k.m. ದಕ್ಷಿಣದಲ್ಲಿ ರಾಷ್ಟ್ರೀಯ ಹೆದ್ದಾರಿ 17ರ ಪಕ್ಕದ ಪ್ರಶಾಂತ ವಾತಾವರಣ.
ದಾಖಲಾತಿಗಾಗಿ ಸಂಪರ್ಕಿಸಿರಿ
ಚೇಯರ್‌ಮೆನ್,
ಶೇಕ್ ಅಬ್ದುಲ್ಲಾ, ಬಿ.ಎ; ಎಫ್.ಸಿ.ಎ.,
ಚಾರ್ಟರ್ಡ್ ಅಕೌಂಟೆಂಟ್, ಚರ್ಚ್ ಬಿಲ್ಡಿಂಗ್, ಕೊಡಿಯಾಲ್ ಬೈಲ್,
ಮಂಗಳೂರು - 575 003. ಫೋನ್ : 0824 - 2440339 (0), 2495121(R)
ಇಮೈಲ್ : sheikhabdullah@email.com ಫ್ಯಾಕ್ಸ್ : 0824 - 4256762
ಮೊಬೈಲ್ : 98440 35786
ಪ್ರಾಂಶುಪಾಲರು,
ಶಿಹಾಬುಲ್ ಉಲೂಮ್ ರೆಸಿಡೆನ್ಸಿಯಲ್ ಸ್ಕೂಲ್, ಅಡ್ಕ ಬಂದಿಯೋಡ್,
ಮಂಗಲಪಾಡಿ - 671 324 ಉಪ್ಪಳ, ಕಾಸರಗೋಡ್ ಜಿಲ್ಲೆ.
ಫೋನ್.: 04998 - 240222, 240333. ಫ್ಯಾಕ್ಸ್ : 240333
ವೆಬ್‌ಸೈಟ್ : www.shihabfoundation.org

Printed & Published by M. Sadullah on behalf of Sanmarga Publication Trust, Printed at Comprint, Hidayath Centre, Beebi Alabi Road, Mangalore-575001
And Published at Hidayath Centre, Beebi Alabi Road, Mangalore-575001. **Editor: A.K. Kukkila, CHIEF EDITOR: P. NOOR MUHAMMED**
Ph: 2422786. Fax: 91-0824-2426846. E-mail: **sanmargamatter@gmail.com** Website: **www.sanmarga.com** (Regd. with RNI No. 29903/78)